
# ಚಿತ್ರರಂಗ



This page is available for advertisement. Rate Rs. 15. (per insertion).



# ಅಂತರಂಗ

ಸಂಪುಟ ೧.

೨೮ ಅಗೋಸ್ತು '೩೮
ಆದಿತ್ಯವಾರ.

ಸಂಚಿಕೆ ೭.

## ಅಂತರಂಗ

ವಿಶೇಷ ತರದ ಕನ್ನಡ ವಾರಪತ್ರಿಕೆ.

**ಮಣಿಪಳ, ಉಡುಪಿ.**

**ಎಸ್. ಯು. ಪಣಿಯಾಡಿ.**
(*Editor in chief*)

**ಕೆ. ಹೈದರ್.**
(*Managing Editor*)

Associate Editors.

ಎಸ್. ಎಸ್. ಕಾರಂತ.
ಪಿ. ವಿ. ಆಚಾರ್ಯ.
ಪಿ. ಎಲ್. ಅಡಿಗ.
ಎಂ. ವಿ. ಹೆಗ್ಡೆ.

Members of the Advisory Board

ಶ್ರೀ. ಬಿ. ವಾಸುದೇವರಾವ್, ಬಿ. ಎ., ಬಿ. ಎಲ್.
,, ಕೊರಡ್ಕಲ್ ಶ್ರೀನಿವಾಸರಾವ್, ಗ್ರಂಥಕರ್ತ.
,, ಆರ್. ಆರ್. ಕುಂಜೂರು.
,, ಪಿ. ವಿ. ಉಪಾಧ್ಯಾಯ, ಬಿ. ಎ., ಎಲ್‌ಎಲ್. ಬಿ.
,, ಆರ್. ಎಸ್. ಶೆಣೈ, ಸಂಪಾದಕ, ವರ್ತಕಧುರೀಣ.
,, ಕೆ. ಎಚ್. ಶೆಟ್ಟಿ, ಮೆನೇಜರ್, ನವಯುಗ.
ಶ್ರೀಮತಿ. ಪಿ. ಭಾರತೀ ಬಾಯಿ.
ಶ್ರೀ. ಪಿ. ಎಸ್. ಬಿ. ರಾಮಾಚಾರ್ಯ, ಸಂಪಾದಕ, ನವಶಕ್ತಿ.
,, ಯು. ವೆಂಕಟರಮಣಾಚಾರ್ಯ, ಮೆನೇಜರ್ ಶ್ರೀಕೃಷ್ಣಸಂದೇಶ.
,, ಉಪೇಂದ್ರ ಅನಂತ ಪೈ, ಮಾಲಕ, ಚಿತ್ರಕಲಾ.

## ಚಂದಾ ವಿವರ:

**ವಾರ್ಷಿಕ ಚಂದಾ ಮೂರು ರೂಪಾಯಿ.**

ವಿ. ಪಿ. ಕ್ರಮವಿಲ್ಲ. ಹಣವನ್ನು ಮುಂಗಡವಾಗಿ ಕಳುಹಬೇಕು.

. . . . .

**ಬಿಡಿ ಸಂಚಿಕೆ ಒಂದಾಣೆ.**

ನಿಮ್ಮ ಊರಿನ ಏಜಂಟರಿಂದ ಪಡಕೊಳ್ಳಿರಿ.

. . . . .

## ಜಾಹಿರಾತಿನ ದರ:

| | | | | |
|---|---|---|---|---|
| ಇಡೀ | ಪುಟ | ರೂಪಾಯಿ | ೧೦—೦—೦ | ಒಂದು ಸರ್ತಿಗೆ |
| ಅರ್ಧ | ,, | ,, | ೫—೦—೦ | ,, |
| ಕಾಲು | ,, | ,, | ೩—೦—೦ | ,, |
| ಅರೆಕಾಲು | ,, | ,, | ೨—೦—೦ | ,, |
| ಕಲಮು ಇಂಚಿಗೆ | | ,, | ೧—೦—೦ | ,, |

## ಜಾಹಿರಾತು ಕೊಡುವವರಿಗೆ ಸಲಹೆ:

೧. ಜಾಹಿರಾತಿನ ವಿಷಯಗಳು ಅಯೋಗ್ಯವಾಗಿ ಕಂಡುಬಂದಲ್ಲಿ ಮುದ್ರಿಸಲಾಗುವುದಿಲ್ಲ.

೨. ಒಂದೇ ಬದಿಯಲ್ಲಿ ವಿವರವಾಗಿ ಬರೆಯಬೇಕು.

೩. ಬದಲಾವಣೆಯಲ್ಲಿ ಒಂದು ವಾರ ಮುಂಚಿತವಾಗಿ ತಿಳಿಸಬೇಕು

೪. ಬ್ಲೋಕುಗಳು ವಾಪಾಸು ಬೇಕಾದಲ್ಲಿ ಅವರವರ ಖರ್ಚಿನಿಂದಲೇ ವಾಪಾಸು ಪಡೆಯಬೇಕು.

೫. ಜಾಹಿರಾತಿನ ಬಾಬ್ತು ಹಣವನ್ನು ಮುಂಗಡವಾಗಿಯೇ ಕೊಡಬೇಕು.

**ಮಾ[illegible]ರು ಮುದ್ರಕರು ವ ಪ್ರಕಾಶಕರು:**

ಸಪ್ಲೈ [illegible]ಜೆನ್ಸಿ ಲಿಮಿಟೆಡ್ ಉಡುಪಿ.

**ಮುದ್ರಣ ವ ಪ್ರಕಟನಾ [illegible]ಳ: ಮಣಿಪಳ ಪವರ್ ಪ್ರೆಸ್, ಮಣಿಪಳ, ಉಡುಪಿ.**

# ಸಪ್ಲೈ ಏಜೆನ್ಸಿ ಲಿಮಿಟೆಡ್ ಉಡುಪಿ.

ಮಾಲಕರು:-

ಮುನಿಸಿಪಳ ಪವರ್ ಪ್ರೆಸ್, ಶ್ರೀ ಭಾರತವಸ್ತುಮಂದಿರ, ಅಂತರಂಗ,
ತುಳುನಾಡ್ ಸ್ಟೇಶನರಿ ಮಾರ್ಟ್, ತುಳುನಾಡ್ ಪ್ರೆಸ್ ಇತ್ಯಾದಿ.

**ಹೆಡ್ ಆಫೀಸು:**
ಬೊಬ್ಬರ್ಯ ಜಂಕ್ಷನ್,
**ಉಡುಪಿ.**

ಅಧಿಕೃತ ಮೂಲಧನ ರೂ. ೧,೦೦,೦೦೦
ಚಂದಾತೆತ್ತ ,, ,, ೩೦,೩೦೦

**ಫೈನಾನ್ಸ್ ಡಿಪಾರ್ಟ್‌ಮೆಂಟ್:**
ನ್ಯಾಯಭವನಂ,
**ಉಡುಪಿ.**

**ನಿರಖು ಠೇವಣಾತಿಗಳು ಈ ಕೆಳಗಣ ಬಡ್ಡಿಯಲ್ಲಿ ಸ್ವೀಕರಿಸಲ್ಪಡುತ್ತವೆ.**

| | | | | | | |
|---|---|---|---|---|---|---|
| ೩ | ತಿಂಗಳಿಂದ | ೬ | ತಿಂಗಳ ವರೆಗೆ | ಶೇಕಡ | ೪ | ಸಲೆಯಲ್ಲಿ |
| ೭ | ,, | ೧೧ | ,, | ,, | ೫ | ,, |
| ೧೨ | ,, | ೧೮ | ,, | ,, | ೬ | ,, |

**೨ ವರ್ಷ ಯಾ ಅದಕ್ಕಿಂತ ಹೆಚ್ಚಿನ ಸಮಯಕ್ಕಿಡುವ ಬಡ್ಡಿ ದರವನ್ನು ಬರೆದು ತಿಳಕೊಳ್ಳಿರಿ.**

ಮೆನೇಜರ್,

**ಫೈನಾನ್ಸ್ ಡಿಪಾರ್ಟ್‌ಮೆಂಟ್,**
ನ್ಯಾಯಭವನಂ, ತೇರಬೀದಿ, **ಉಡುಪಿ.**

---

ಪ್ರಭುಪ್ರಜೆಗಳ ಹೋರಾಟ!
**ಪೋಲೀಸರ ಅತ್ಯಾಚಾರ!!**
ಸ್ವಾತಂತ್ರ್ಯ ಸಂಗ್ರಾಮದ
ಕ್ರಾಂತಿಕಾರಕ ಚಿತ್ರ
**ಹೊಸ ನಾಟಕ ಪುಸ್ತಕ**

## 'ದೇಶಭಕ್ತ'

**ಬೆಲೆ ಆಣೆ ಹತ್ತು**
**ಪ್ರತಿಯೊಬ್ಬ ಕನ್ನಡಿಗನೂ**
**ಓದಬೇಕು.**

ವಿಚಾರ ಜ್ಯೋತಿಯನ್ನು
ಬೆಳಗಿಸುವ
ಆನಂದ ಲಹರಿಯನ್ನೆಬ್ಬಿಸುವ
**ಹೊಸ ಪುಸ್ತಕ**

## 'ನಂದಾದೀಪ'

**ಕೊರಡ್ಕಲ್ಲರ 11 ಕತೆಗಳ ಸಂಗ್ರಹ**
**ಕರ್ನಾಟಕದಲ್ಲಿ**
**ಇಂತಹ ಸಂಗ್ರಹ ತೀರಾ ಕಡಿಮೆ.**

## ನವಭಾರತ ಬುಕ್ ಡಿಪೊ -- ಉಡುಪಿ.

---

ನವಯುಗಕ್ಕೆ ಏಜಂಟರು ಇಲ್ಲದ ಸ್ಥಳಗಳಲ್ಲಿ

## ಏಜಂಟರು ಬೇ

**ನವಯುಗ ಆಫೀಸು,**

# ಅಂತರಂಗ

ಶ್ರೀಮತಿ ಕಮಲಾದೇವಿಯವರನ್ನು ತಿರುವಾಂಕೂರು ಸರಕಾರದವರು ಕೈದು ಮಾಡಿದರಂತೆ.

ತಿರುವಾಂಕೂರಿಗೆ "ಜವಾಬ್ದಾರಿ ಸರಕಾರ"ವು ಸಿಗುವುದೂ, "ಪ್ರಜಾಪ್ರಭುತ್ವ"ವು ಸದ್ಯದಲ್ಲಿಯೇ ಜಾರಿಗೆ ಬರುವುದೂ ಸತ್ಯವೆಂದಾಯಿತು.

೦ ೦ ೦

ಬೆಂಗಳೂರು ಪೌರಸಭೆಯವರು ಜಪಾನ್ ಸಾಮಾನುಗಳನ್ನು ಬಹಿಷ್ಕರಿಸಲು ನಿರ್ಣಯ ಮಾಡಿರುವುದಲ್ಲದೆ ಜಪಾನಿಯರು ಚೀನದ ಹಳ್ಳಿ ಪಟ್ಟಣಗಳ ಮೇಲೆ ಬಾಂಬೆಸೆದುದಕ್ಕೆ ತಮ್ಮ ಖಂಡನೆಯನ್ನು ಸೂಚಿಸಿರುವರಂತೆ.

"ಶಹಭಾಸ್"! ಸಾಮ್ರಾಜ್ಯಶಾಹಿ ಶಕ್ತಿಯನ್ನು ದೂರಿದುದಕ್ಕೆ ಇಂಗ್ಲೆಂಡಿನಿಂದ ಎಚ್ಚರಿಕೆ ಬರಬಹುದೆ?

೦ ೦ ೦

ಕ್ರಿಮಿನಲ್ ಲಾ ತಿದ್ದುಪಡಿ ಮಸೂದೆಗೆ ಮದ್ರಾಸ್ ಎಸೆಂಬ್ಲಿಯಲ್ಲಿ ಶ್ರೀ. ರಾಜಾಜಿಯವರು ವಿರೋಧಿಸಿರುವುದು ಶೋಚನೀಯವೆನ್ನುತ್ತಿದೆ "ಮುಂಬಯಿ ಕ್ರಾನಿಕಲ್"

ಇದು "ಅಹಿಂಸಾತ್ಮಕ ಅಪರಾಧ"ವಾದುದರಿಂದ ಕ್ಷಮಿಸಬಹುದು!

೦ ೦ ೦

"ಸತ್ಯಮೂರ್ತಿಯವರ ದ್ವಂದ್ವ ಯುದ್ಧ"

—ಪತ್ರಿಕೆಯ ಶಿರೋನಾಮ.

ಇಬ್ಬರೂ [illegible]ವಾಗಲಿಲ್ಲವಷ್ಟೆ, ಸಂತೋಷ.

ನಂದಿ ಗುಡ ..

ಕಂಡಕ... ಟಿಕೇಟು ಮಾರಬೇಕು — ದಕ್ಷಿಣ ಕನ್ನಡ ಜಿ... ಟ್ರಾಫಿಕ್ ಬೋರ್ಡಿನ ಆಜ್ಞೆ.

ನೂರಾರು ಬಸ್ ಏಜಂಟ್...

ಹೊಡೆ... ತೂರೆ... ತುಂಗ... ಅನ್ನ ಸ... ಯುನ್ನು ಬ...

ಕಾಂಗ್ರೆಸಿನ ... ಸಮಕಾ... ಕಾಮ್ರೇಡ್ ... ಯಂತೆ.

# ಅರಸಿ • • • • • • • • ಅರಿಸಿದ್ದು

ಕಡಿವಾಣವನ್ನು ತುಂಡು ಮಾಡಿ ಸವಾರನನ್ನು ಕೆಳಗೆಸೆದು ಕುದುರೆ ಮುನ್ನಡೆಯಬಹುದೋ ಎಂಬ ಸಂದೇಹ! ಹೇಗಾದರೇನು? ಕಡಿವಾಣ ಕೈಗೆ ದೊರಕುವುದಿಲ್ಲವೆ?

೦ ೦ ೦



ಸ್ಪೈನಿನ ದಂಗೆಗಾರರ ಧುರೀಣರಿವರು

ಸರ್ವಾಧಿಕಾರಿಗಳ ಕೃಪೆಯಿಂದ ಸರಕಾರವನ್ನು ಸದೆ ಬಡಿಯುವುದರಲ್ಲಿ ನಿರತ

ರಾಜರು ಹೇಳಬಹುದು. ಆದರೆ ಯಂ. ಸಿ. ರಾಜರ ಮಗು ಮಸೂದೆಗೂ, ರಾಜಾಜಿಯವರ ಶಿಶು ಮಸೂದೆಗೂ ವ್ಯತ್ಯಾಸವಿರಬಹುದು. ದೊಡ್ಡ ಸುಧಾರಣೆಗಳನ್ನು ಸರಕಾರವೇ ತರುವುದು ಭೂಷಣವಲ್ಲವೆ?

೦ ೦ ೦

"ಜಪಾನ್ ಅಥವಾ ರಷ್ಯದ ಸೈನ್ಯವು ಭಾರತವನ್ನು ಮುತ್ತುವಾಗ "ಶಾಂತಿ ಅಹಿಂಸೆ"ಗಳ ಬಾಂಬೆಸೆಯುವುದೇ"? ಎಂದು ಕೇಂದ್ರ ಎಸೆಂಬ್ಲಿಯಲ್ಲಿ ಮಿ| ಗುಲಾಂಭಿಕ್ ನಾರಂಗರ ಪ್ರಶ್ನೆ.

ಅದಕ್ಕೇನು ತೊಂದರೆ? ಮನೆ ಕೈಗಾರಿಕೆಯಾಗಿ ಆ ಬಾಂಬುಗಳನ್ನು ಮಾಡುವುದಿದ್ದರೆ ಅದಕ್ಕೆ ಗಾಂಧಿಜಿಯವರ ಆಕ್ಷೇಪವಿರಲಿಕ್ಕಿಲ್ಲ.

೦ ೦ ೦

ಮೌಲಾನಾ ಝುಫರಾಲಿಯವರು ನಗಾಡಿದುದನ್ನು ಕಂಡು ಶ್ರೀ. ಶ್ರೀಪ್ರಕಾಶರು "ಅದನ್ನು ಹಿಂತೆಗೆಯಬೇಕು" ಎಂದು ವಾದಿಸಿದೊಡನೆಯೇ ಢಿಲ್ಲಿ ಎಸೆಂಬ್ಲಿಯ ಮಾಡು ಕಳಚಿ ಬೀಳುವ ತನಕ ಎಲ್ಲರೂ ನಗಾಡಿದರಂತೆ.

ಎಲ್ಲರೂ ಹಿಂತೆಗೆಯಬೇಕೆಂದು ಶ್ರೀ ಪ್ರಕಾಶರು ವಾದಿಸಿದ್ದರೆ ಗೋಡೆಗಳೂ ನಗುತ್ತಿದ್ದುವು!

೦ ೦ ೦

ಡಾ| ಖರೆಯವರು ಕಾಂಗ್ರೆಸಿನಲ್ಲಿಯೇ ಇರುವರಂತೆ. ಮುಂದಿನಬಾರಿ ಅವರನ್ನೇ ಪ್ರಧಾನಮಂತ್ರಿಗಳನ್ನಾಗಿ ಮಾಡಬಹುದು!

೦ ೦ ೦

ಮಾಜಿ ಗವರ್ನರ್ ಸರ್ ಮಹಮದ್ ... ಜಸ್ಟಿಸ್ ಪಕ್ಷದಿಂದ ದೂರ ...

ಅವರ


ಆನಂದ ಅಗ...

ಆನಂದ ಪರ್ಫ್ಯೂ...

Stockists:—Messrs


ದವ...

೧. ತುಂಬ ...

...ರಿಂದಲೇ ಗೋವಿಂದನು ಈಕೆ ... ಮೋಹಗೊಂಡುದು. ... ಗೋವಿಂದನಿಗೆ ರೈಲ್ವೇ ಸ್ಟೇಶನಲ್ಲೊಂದು ಚಿಕ್ಕ ಉದ್ಯೋಗ.

...ಪನೇ ... ಈಶ್ವರ, ...ಳಿತಿದ್ದನ್ನು ನೇಮಿಸ ... ಅಡುಗೆಯ ಮುದುಕಿ ...ಭಿಸಿದ್ದಾರೆ. ... ನಿದ್ದೆಹೋಗಿದ್ದಳು. ತನ್ನ ... ದೀಪವನ್ನು ನೊಂದಿಸಿ ಮಲಗುವ ಸನ್ನಾಹದಲ್ಲಿ ಗೋವಿಂದನಿದ್ದನು.

# ನಿಮಗೆ ಬೇಸರವಾದಾಗ ನನಗೆ ಬರೆಯಿರಿ

## ಶ್ರೀ. ಪಿ. ಜಿ. ಎ ಉಡುಪಿ

೧. ''ಯಾವುದಾದರೊಂದು ಹಬ್ಬ ಬಂದೊಡನೆಯೇ ಜನರು ನಾನಾ ವೇಷಗಳನ್ನು ಹಾಕಿ ರಾತ್ರಿಹಗಲೆನ್ನದೆ ಸಿಕ್ಕಿದವರನ್ನು ಉಪದ್ರವಿಸುತ್ತಾರೆ. ನಗರ ಸಭೆಯು ಇದನ್ನು ತಡೆಯಲು ಯಾವುದಾದರೊಂದು ಉಪಾಯವನ್ನು ಮಾಡಬಾರದಿತ್ತೆ?''

ಈ ವಿಷಯ ಕಳೆದ ವರುಷ ಪ್ರಯತ್ನಗಳು ನಡೆದು ಅವು ನಿಷ್ಪ್ರಯೋಜಕವಾದುದು ನಿಮಗೆ ಗೊತ್ತಿಲ್ಲವೆಂದು ತೋರುತ್ತದೆ. ಪ್ರತಿದಿನವೆಂಬಂತೆ ಮನೆಮನೆಗೆ ಹೋಗಿ ಬೇಡುವವರ ಪೀಡೆಯನ್ನು ತಪ್ಪಿಸಲು ಸರಕಾರವಾಗಲಿ, ಸ್ಥಾನಿಕ ಸಂಸ್ಥೆಯಾಗಲೀ ಏನನ್ನೂ ಮಾಡಲಾರದಿರುವಾಗ ವರ್ಷಕ್ಕೊಮ್ಮೆ ವೇಷಹಾಕುವವರ ಮೇಲೆ ಕಾನೂನು ಮಾಡುವುದು ಹೇಗೆ?

೦ ೦ ೦

೨. ''ಹೀಗೆ ವೇಷಗಳನ್ನು ಹಾಕುವುದು ಜನಮನೋರಂಜನೆಗೆಂದಾದರೆ ವರ್ಷವರ್ಷ ಅವುಗಳಲ್ಲಿ ಹೊಸತನವು ಏಕೆ ಕಂಡು ಬರುವುದಿಲ್ಲ?

೧೯೩೮ರ ವರೆಗೂ ...

ಲಾದವು

## ಎಸ್. ಜಿ. ದೇಶಪಾಂಡೆ, ಧಾರವಾಡ

''ನಿಮ್ಮ ಪತ್ರಿಕೆಯ 'ಅಂತರಂಗದ ಸುದ್ದಿ'ಯಲ್ಲಿ ಕರ್ನಾಟಕವು ಸ್ವತಂತ್ರ ಪ್ರಾಂತವಾದರೆ ಮಂಗಳೂರು ರಾಜಧಾನಿಯಾಗಿ ಮಾಡಲ್ಪಡುವುದೆಂದು ಬರೆಯಲಾಗಿದೆ. ಕರ್ನಾಟಕದ ಒಂದು ಮೂಲೆಯಲ್ಲಿರುವ ಮಂಗಳೂರನ್ನು ರಾಜಧಾನಿಯನ್ನಾಗಿ ಮಾಡಿದರೆ ತೊಂದರೆಯಾಗದೆ?''

ಮಂಗಳೂರು ಕರ್ನಾಟಕದ ಒಂದು ಮೂಲೆಯಲ್ಲಿರುವುದರಿಂದಲೇ ಅದನ್ನು ರಾಜಧಾನಿಯನ್ನಾಗಿ ಮಾಡಬೇಕಾಗಿದೆ. ದಕ್ಷಿಣಕನ್ನಡದ ಕೆಲವು ಭಾಗಗಳನ್ನು ಕೇರಳದವರು ಆಕ್ರಮಿಸಿರುವುದು ನಿಮಗೆ ಗೊತ್ತಿರಬಹುದು. ಮಂಗಳೂರನ್ನು ಪೂರ್ತಿಯಾಗಿ ಕೇರಳದವರು ಹೊಂದದಿರಬೇಕಾದರೆ ಕರ್ನಾಟಕದ ಎಲ್ಲಾ ಶಕ್ತಿಯನ್ನೂ ಅಲ್ಲಿ ಕೇಂದ್ರೀಕರಿಸುವ ಅಗತ್ಯವಿರುವುದರಿಂದ ಅದನ್ನೇ ರಾಜಧಾನಿಯನ್ನಾಗಿ ಮಾಡುವುದು ಅಗತ್ಯವಿದೆ.

೦ ೦ ೦

ಶ್ರೀ. ರಾಜಗೋಪಾಲಾಚಾರ್ಯರು ನಂಬುತ್ತಾರೆ. ಒಂದು ವೇಳೆ ಅವರ ನಂಬಿಕೆಯು ತಪ್ಪಾಗಿದ್ದರೆ ಅಕ್ಷರಸ್ಥರಲ್ಲಿ ಕೆಲವರು ಅಜಾಗ್ರತೆಯಿಂದ ಆಕಾಶ ನೋಡಿ ನಡೆದು ಕೆರೆ ಬಾವಿಗಳಲ್ಲಿ ಬಿದ್ದು ಸಾಯುವುದಾದರೂ ನಿಂತೀತು ಪ್ರಾಯಶಃ ರಾಜಾಜಿಯವರು ಅದನ್ನು ತಮಾಷೆಗಾಗಿ ಹೇಳಿರಲೂ ಬಹುದು.

೦ ೦ ೦

## ಕೆ. ಆರ್. ಕುಂದರ್, ಮುಂಬಯಿ.

ಮದ್ರಾಸಿನ ಮಾನ್ಯ ಗಿರಿಯವರು ಸರ್ ಯಂ. ವಿಶ್ವೇಶ್ವರಯ್ಯನವರೇ ಮೊದಲಾದವರು ಮುಂಬಯಿಯಲ್ಲಿ ಸಭೆ ಸೇರಿ ಭಾರತಕ್ಕೆ ಸ್ವತಂತ್ರವಾದೊಂದು ಮೋಟಾರ್ ತಯಾರಿಸುವ ಸಂಸ್ಥೆಯನ್ನು ಸ್ಥಾಪನೆ ಮಾಡಲಿದ್ದಾರೆಂದೂ, ಆ ಸಭೆಯನ್ನು ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಸುಭಾಷ ಬೋಸರು ಕರೆದಿರುವರೆಂದೂ, ನೀವು ಪತ್ರಿಕೆಗಳಿಂದ ತಿಳಿದಿರಬಹುದು. ಮಹಾತ್ಮಾಜಿಯವರು ... ಕೆ ತಯಾರಿ

... ತ್ವಕ್ಕೆ ವಿರೋಧವ... ಗ ಕಾಂಗ್ರೆಸ್ ... ನ್ಯಕ್ಷರು ಈ ಸಭೆಯನ್ನು ಕರೆದುದು ...ಯುವೆ?''

... ಗಾರಿಕೆಯನ್ನು

...ನ್ನಾಗಿ

...ತ್ರದಾದರೆ

...ಸಂಖ್ಯಾತ

...ಬಹುದು.

...ಶದ

...ಶ್ರೀ

...ರಿಕೆಂ

...ಪುವಂತೆ

ಕಾಂಗ್ರೆಸ್ ಅಧ್ಯಕ್ಷರಿಗೆ ಅವರೇ ಸೂಚನೆ ಕೊಟ್ಟಿರಬೇಕು!

ೂ ೂ ೂ

ಶ್ರೀ. ನಾರಾಯಣ ಸ್ವಾಮಿ,
ಬೆಂಗಳೂರು.

"ವಿದುರಾಶ್ವತ್ಥ ವಿಚಾರಣಾ ಕಾಲದಲ್ಲಿ ಶ್ರೀ. ಕೆ. ಟಿ. ಭಾಷ್ಯಮ್‌ರವರು ಮೈಸೂರು ಸಂಸ್ಥಾನದ ೫೦೦೦ ಗ್ರಾಮಗಳಿಗೆ ಒಂದು ಕುಡಿಯುವ ನೀರಿನ ಬಾವಿಯೂ ಇಲ್ಲ; ೮,೦೦೦ ಗ್ರಾಮಗಳಲ್ಲಿ ಪ್ರಾಥಮಿಕ ಶಾಲೆಗಳೇ ಇಲ್ಲ, ೧೧,೦೦೦ ಗ್ರಾಮಗಳಿಗೆ ಆಸ್ಪತ್ರೆಯೇ ಇಲ್ಲ ಎಂದು ಸರಕಾರದವರೇ ಸಂಗ್ರಹಿಸಿದ ಅಂಕೆ ಸಂಖ್ಯೆಗಳನ್ನು ಹೇಳಿದ್ದಾರೆ. ಇದು ಮಾದರಿ ಮೈಸೂರಿಗೆ ಭೂಷಣವೆ?"

ಕೆರೆ, ಬಾವಿ, ಶಾಲೆಗಳಿಂದ ಮಾದರಿ ಮೈಸೂರಿನ ಭೂಷಣವು ಹೆಚ್ಚುತ್ತದೆಂದು ನಿಮಗೆ ಹೇಳಿದ ಕಲಾವಿದರಾರು? ಸರ್. ವೇಪರಮೇಶವರ್‌ರವರು ಹೇಳಿದಂತೆ ಭೂಷಣವನ್ನು ಹೆಚ್ಚಿಸುವಂತಹ ವಿದ್ಯುಚ್ಛಕ್ತಿಯ ದೀಪಗಳನ್ನು ಸರಕಾರದವರು ಗ್ರಾಮ ಗ್ರಾಮಕ್ಕೂ ಪೂರೈಸಿದ್ದಾರೆ. ರಾತ್ರಿ ರೈಲಿನಲ್ಲಿ ಬೆಂಗಳೂರಿನಿಂದ ಮೈಸೂರಿಗೆ ಬರುವಾಗ ನಂದಿ ಗುಡ್ಡೆಯ ಭೂಷಣವನ್ನು ನೀವು ನೋಡಿಲ್ಲವೇ?

ೂ ೂ ೂ

ಶ್ರೀ ಸದಾನಂದ ಕಾಮತ್,
ಕುಂದಾಪುರ

ಸಿಂಧದಲ್ಲಿ ಓಂ ಸಂಘ ಸ್ಥಾಪನೆಯಾಗಿ ಸ್ತ್ರೀಯರು ಆಜನ್ಮ ಬ್ರಹ್ಮಚಾರಿಣಿಯರಾಗಿಯೇ ಉಳಿಯುವರೆಂದು ಕೇಳಿದ್ದೇನೆ. ಹಾಗಾದರೆ ಬ್ರಹ್ಮಚಾರಿಗಳಾಗಿ ಉಳಿಯಲಾಗದಿದ್ದ ಗಂಡಂದಿರ ಗತಿಯೇನ ?

ಸಿಂಧ ಪ್ರಾಂತ್ಯದ "ಓಂ" ಸ್ತ್ರೀಯರು ಗಂಡಂದಿರ "ಸಂಗ"ವನ್ನು ತ್ಯಜಿಸಿ ಭಾಯಿ ಲೇಖರಾಜರ "ಸತ್ಸಂಗ"ಕ್ಕಾಗಿ "ಓಂ ಸಂಘ" ವನ್ನು ಮಾಡಿದ್ದು.

ಇನ್ನು ಗಂಡಂದಿರು "ಶ್ರೀ ಸಂಘ"ವೆಂಬ ಹೊಸ ಸಂಘವನ್ನು ಸ್ಥಾಪಿಸಿ, ಮಾಯಿ ಲಕ್ಷ್ಮಿದೇವಿ ಎಂಬಾಕೆಯನ್ನು ಸಾಕ್ಷಾತ್ ರಾಧೆಯವತಾರವೆಂದು ಅವಳ 'ಸತ್ಸಂಗ' ವನ್ನು ಮಾಡಿದರೆ ತೀರಿತು. ಹೀಗಾದರೆ ಒಂದೇ ಧ್ಯೇಯದ ಎರಡು ಸಂಘಗಳೂ ಒಂದಾಗುವ ಸಂಭವವಿರುವುದರಿಂದ ನೀವು ಕೇಳಿದ ಪ್ರಶ್ನೆಯು ತನ್ನಂತೆಯೇ ಇತರ್ಥವಾಗುವುದು.

ೂ ೂ ೂ

ಕೆಲ ದಿನಗಳ ಹಿಂದೆ ಶ್ರೀ ಗರೂಡ ಸದಾಶಿವರಾಯರು "ಶ್ರೀ ಭುವನೇಶ್ವರೀ ಟಾಕೀಸ್" ಎಂಬ ಚಲನ ಚಿತ್ರ ಸಂಸ್ಥೆ ಪ್ರಕಟನೆಗಳನ್ನು ಹಲವು ಪತ್ರಿಕೆಗಳಲ್ಲಿ ಪ್ರಕಟಿಸಿದ್ದರು. ಈಗ ಅದರ ವಿಚಾರವೇನೂ ಇದ್ದಂತೆ ತೋರುವುದಿಲ್ಲ. ಕೆಲವು ದಿನಗಳ ಹಿಂದೆ ಮದ್ರಾಸಿನ ವಕೀಲರೊಬ್ಬರು ಸ್ವತಂತ್ರ ಭಾರತದಲ್ಲಿ ಪ್ರಕಟಿಸಿದ ವಿಚಾರಗಳು ಶ್ರೀಯುತರಿಗೆ ಈಗ ಸೂಕ್ತವಾಗಿ ಕಂಡುಬಂದುವೋ?

ನೀವೀ ಪ್ರಶ್ನೆಯನ್ನು ಕೇಳಿದ್ದು ಒಳ್ಳೆಯದಾಯಿತು. ಶ್ರೀ. ಗರೂಡ ಸದಾಶಿವರಾಯರು ಪ್ರಾರಂಭದಲ್ಲಿ ಪತ್ರಿಕಾ ಪ್ರಕಟನೆಗಳಲ್ಲಿ ನಿರತರಾಗಿ ಈಗ ಕಾರ್ಯಾರಂಭಿಸಿರಬಹುದು. ಈಗಲೂ ಹಾಗೆಯೇ ಪ್ರಕಟನೆಗಳನ್ನು ಕೊಡಲು ಅವರಿಗೆ ಸಮಯವಿಲ್ಲದಿರಬಹುದು. ಪ್ರಕಟನೆಯಲ್ಲಿ ನಿಮಗಿರುವ ಅಭಿರುಚಿಯನ್ನು ನೋಡುವಾಗ ಶ್ರೀ. ಗರೂಡರ ಪ್ರಕಟನಾ ಶಾಖೆಯ ಅಧಿಕಾರ ಸ್ಥಾನಕ್ಕೆ ನೀವು ಅರ್ಜಿ ಹಾಕುವುದು ಉತ್ತಮವಲ್ಲವೇ?

ಮದ್ರಾಸಿನ ವಕೀಲರ ಲೇಖನವನ್ನು ಶ್ರೀ. ಗರೂಡರು ಓದಿದ್ದಾರೋ ಇಲ್ಲವೋ ನಮಗರಿತಿಲ್ಲ. ವಕೀಲರ ಲೇಖನವು ನಿಮಗೆ ಸೂಕ್ತವೆಂದು ಕಂಡರೆ ಅದರ ಅಭಿಪ್ರಾಯಕ್ಕನುಸಾರವಾದ ಚಲಚ್ಚಿತ್ರ ಸಂಸ್ಥೆಯನ್ನು ನೀವೇ ಸ್ಥಾಪಿಸಬಹುದಲ್ಲವೆ?

ೂ ೂ ೂ

ಉತ್ತಮ

ಆನಂದ ಅಗ.

ಆನಂದ ಪರ್ಫ್ಯೂಮ್

Stockists:—Messrs

ದವಳ
ಗಿ. ತುಂಬ
ರಿಂದಲೇ ಗೋವಿಂದನು ಈಕೆ
ಮೋಹಗೊಂಡುದು.
ಗೋವಿಂದನಿಗೆ ರೈಲ್ವೇ ಸ್ಟೇಶನಲ್ಲೊಂದು ಚಿಕ್ಕ ಉದ್ಯೋಗ.

ಈಶ್ವರ,
ಳಿತಿದ್ದ ನೇಮಿಸ
ಅಡುಗೆಯ ಮುದುಕಿ/ಭಿಸಿದ್ದಾರೆ.
ನಿದ್ದೆಹೋಗಿದ್ದಳು. ತನ್ನ
ದೀಪವನ್ನು ನೊಂದಿಸಿ ಮಲಗುವ ಸನ್ನಾಹದಲ್ಲಿ ಗೋವಿಂದನಿದ್ದನು.

# ಹೊಟ್ಟೆಯ ಪೂಜೆಯೇ ಗಣಪತಿ ಪೂಜೆ !

ನಗೆ ಬರಹ — ಬರೆದವ: 'ವಿಟ್ಟು'.

'ಅದು ನಿನ್ನಂಥ ನಾಸ್ತಿಕರಿಗೆ! ಹೊಟ್ಟೆಯ ಪೂಜೆಯೇ ಗಣಪತಿ ಪೂಜೆ; ಆ ಮೇಲೆ ಮಾಡುವ ಧೂಮ ಸೇವನೆಯೇ ಯಜ್ಞೇಶ್ವರಾರಾಧನೆ. ಕೊನೆಗೆ ಕುಂಭೀಪಾಕ ನರಕವೇ ನಿನ್ನಂಥವರ ಶಾಶ್ವತ ಸ್ಥಾನ!' ಎಂದು ಒಮ್ಮೆಯೇ ರೇಗಿ ಬೀಳಬೇಡಿ. 'ಮತ್ತೆಂಥಾದ್ದಯ್ಯಾ? ಲೋಕದಲ್ಲಿ ಹೊಟ್ಟೆಯ ಪೂಜೆ ಮಾಡಿಕೊಳ್ಳದವರು ಯಾರೂ ಇಲ್ಲ. ಅದು ಗಣಪತಿ ಪೂಜೆಯೆಂದಾದರೆ, 'ಸಿಂಗಾರಪಾಟನಲ್ಲಿ..' ಹೇಳಿ ಹೊಟ್ಟೆಗೆ ಬಡಕೊಳ್ಳುವ ಗಟ್ಟದ ಮೇಲಿನ ಜಾತಿಯನ್ನು ಬಿಟ್ಟರೆ, ಮಿಕ್ಕವರೆಲ್ಲಾ ಸ್ವರ್ಗಕ್ಕೇ ಹೋಗಬೇಕಾಯಿತು!' ಎಂದು ನನ್ನನ್ನು ನೋಡಿ ಹೆಡ್ಡನೆಂದು ನಗುವದೂ ಬೇಡ. ಏನೂ ಆಧಾರವಿಲ್ಲದೆ ಹೊಟ್ಟೆ ಅಥವಾ ಗಣಪತಿಯಂತಹ ಭಾರವಾದ ವಿಷಯವನ್ನು ನಿಮ್ಮ ಮುಂದೆ ತಂದಿಟ್ಟೆನೆಂದು ನೆನಸಬೇಡಿ. ಕೇಳಿ, ಹೊಟ್ಟೆಯೆಂದರೆ ಗಣಪತಿ—ಗಣಪತಿಯೆ ಹೊಟ್ಟೆ. ಆದ್ದ ಗಿ

ಹಿಂದುಗಳಿಗೀಗ, ಸರ್ವಸಾಧಾರಣ ಒಬ್ಬೊಬ್ಬರಿಗೊಬ್ಬೊಬ್ಬರಂತೆ ೩೩ ಕೋಟಿ ದೇವತೆಗಳಿದ್ದಾರಲ್ಲಾ—ಈ ದೇವತೆಗಳ ಪೈಕಿ, ಪಣಂಬೂರು ಗುತ್ತಿನವನಂತೆ ಮೊದಲ ಪೂಜೆಯ ಮರ್ಯಾದೆ ಪಡೆಯುವವ ನಮ್ಮ ಗಣಪತಿ. ಸೀರಾಡಿ ಬೈದೆರ್ಕಳ ಗರಡಿಯ ಪ್ರಸಾದದ ಮೊದಲ ಮರ್ಯಾದೆಯನ್ನು, ವ್ಯಾಜ್ಯ ಸಿವಾಯಿ ದೂಮಸೆಟ್ಟಿಗೆ ಮಿಕ್ಕವರು ಬಿಟ್ಟುಕೊಡಲಿಲ್ಲ. ಹೀಗಿರುವಾಗ ಈ ಇಂದ್ರ, ಈ ವೀರಭದ್ರ, ಈ ಯಮ,—ಇವರೆಲ್ಲಾ ಮರ್ಯಾದೆ (ಪೂಜೆಯ) ಬಿಟ್ಟರೇಕೆ? ಅದಕ್ಕೆ ನ್ಯಾಯವಾದ ಕಾರಣವಿದೆ. ಕಿವಿಗೊಟ್ಟು ಕೇಳಿ ಬಿಡಿ. ಆದಿಯಲ್ಲಿ ಶ್ರೀಮನ್ನಾರಾಯಣನು ೧೪ ಲೋಕವನ್ನೂ ದೇವತೆಗಳನ್ನೂ ಬಹು ಸುಲಭದಲ್ಲಿ ನಿರ್ಮಿಸಿದನಾದರೂ, ಬಹು ಕಷ್ಟದ ಒಂದು ಪ್ರಶ್ನೆಯು ಕೊನೆಯಲ್ಲಿ [illegible]

ಸುತ್ತು ತೆಗೆದು ಯಾರು ಬೇಗ ಬಂದು ನನ್ನನ್ನು ಮುಟ್ಟುತ್ತಾರೋ ಅವರಿಗೆ ಮೊದಲು ಪೂಜೆ' ಎಂದು ದೇವತೆಗಳನ್ನು ಕಣ್ಣುಮುಚ್ಚಾಲೆ ಯಾಟಕ್ಕೆ ಬಿಟ್ಟ. 'ಹೂಂ' ಎಂದು ಗಣಪತಿ ಕೈಯ್ಯೂರಿ ಮೇಲಕ್ಕೆದ್ದು ನಿಲ್ಲುವಾಗ ಮಿಕ್ಕ ದೇವತೆಗಳು ಗಾವುದ ಗಾವುದ ಓಡಿಯಾಗಿದೆ. ಡೊಳ್ಳೊಟ್ಟೆಯವ ಓಡಿದರೆ ಎಷ್ಟು ಓಡಿಯಾನು? ಹಾಗೆ ಯೋಚಿಸಿದ- ಅಲ್ಲಿಯೇ ಶ್ರೀಮನ್ನಾರಾಯಣನಿಗೆ ಒಂದು ಸುತ್ತು ತೆಗೆದು ಇದಿರು ಬಂದು ನಿಂತ. 'ಸ್ವಾಮಿ! ಹದಿನಾಲ್ಕು ಲೋಕಗಳೂ ನಿನ್ನ ಹೊಟ್ಟೆಯೊಳಗಿವೆ. ಅದಕ್ಕೆ ಮೊದಲು ಸುತ್ತು ತೆಗೆದವ ನಾನು' ಎಂದ. ಮಿಕ್ಕವರು ಉಬ್ಬಸ ಬಿಡುತ್ತಾ ಬಂದು ಇದಿರು ನಿಂತಾಗ ಶ್ರೀಮನ್ನಾರಾಯಣನು 'ಗಣಪತಿಗೇ ಮೊದಲ ಪೂಜೆ' ಎಂದು ಮೇಲಿನ ಕಾರಣ ಸಮೇತ ತೀರ್ಪು ಕೊಟ್ಟ [illegible]

ಗಾರಿಕೆಯನ್ನು
ನ್ಯಾಗಿ
ಪ್ರದಾದರೆ
ಸಂಖ್ಯಾತ
ಬಹುದು.
ಶದ
೧ ಕಿ
ರಿಕೇ
ಸುವಂತೆ

ಓಡಿಯೋಡಿ ದುಡಿದರೂ ಮಿಕ್ಕ ದೇವತೆಗಳಂತೆ ಕೆಲಸ ಕೈಗೂಡದೆ ವ್ಯಸನದಲ್ಲಿ ಕೊರಗುತ್ತಿರುವಾಗ, ದೊಡ್ಡ ಹೊಟ್ಟೆಯವರ ಸುತ್ತು ತೆಗೆದೇ ಸುಲಭದಲ್ಲಿ ತಮ್ಮ ಕೆಲಸ ಮಾಡಿಕೊಳ್ಳುವ ಗಣಪತಿಗಳು ನಿಮ್ಮ ಮಧ್ಯದಲ್ಲಿ ಇಲ್ಲವೇನು? ಹೀಗೆ ಗಣಪತಿಯು, ಮಿಕ್ಕ ದೇವತೆಗಳಂತೆ ತನ್ನ ಡೊಳ್ಳೊಟ್ಟೆಯನ್ನು



ದಣಿಸದೆಯೂ ಹೊಟ್ಟೆಯ ಪೂಜೆ ಮಾಡಿಕೊಂಡ; ನಾರಾಯಣನ ತೆಗೆದೂ

ಪ್ರಭುತ್ವವಾದಿಗಳು ಹೌದಾದರೆ, ಬಹುಮತ ಸರಕಾರದ ಪದ್ಧತಿಯಂತೆ, ಆ ಹೊಟ್ಟೆಗೆ ಮಾಡಿದ ಪೂಜೆಯೇ ಗಣಪತಿಪೂಜೆಯಾಗುತ್ತದೆ. ಮಾನ್ಯ ಹಕ್ಕರ ಮೇಲಿನ ಅವಿಶ್ವಾಸ ಠರಾವಿಗೆ, ಎಸೆಂಬ್ಲಿಯ (ಒಳಗೂ ಹೊರಗೂ) ಬಹುಭಾಗವು ವಿರುದ್ಧವಿದ್ದಮಾತ್ರದಿಂದಲೇ ಇಡೀ ಬಂಗಾಳ ಎಸೆಂಬ್ಲಿಗೆ ಹಕ್ಕರ ಮೇಲೆ ವಿಶ್ವಾಸವುಂಟೆಂದು ನಿಶ್ಚಯವಾಗಲಿಲ್ಲವೇ- ಹಾಗೆ! ಇನ್ನು ನೀವು ಫೆಸಿಸ್ಟ್ ಪದ್ಧತಿಯವರಾದರೆ, ಗಣಪತಿಯ ಕೈಯ ಅಂಕುಶ ಪೂಜೆಯೇ ಗಣಪತಿ ಪೂಜೆ ಆದ್ದರಿಂದ ಬೇಕಾದರೆ ತಿದ್ದುಪಡಿ ಮಾಡಿಕೊ-

ಮೇಲಿನ

ಡುಳ

ಗಣಪತಿಯೇ ಹೊಟ್ಟೆ ಆದ್ದರಿಂದ ಹೊಟ್ಟೆಯಪೂಜೆ-ಅಂದರೆ ಗಣಪತಿಪೂಜೆ. ಅದು ಮಿಕ್ಕ ಪೂಜೆಗಳಿಗಿಂತ ಮೊದಲು ನಡೆಯಬೇಕು. ನಂತರ ಮಾಡುವ ಕೆಲಸಗಳು ನಿರ್ವಿಘ್ನವಾಗಿ ಸಾಗಬೇಕಾದರೆ ಈ ವಿಘ್ನೇಶ್ವರನ, ವಿನಾಯಕನ ಪೂಜೆಯನ್ನು ಮೊದಲು ಮಾಡಬೇಕು. ಆದರೆ ದುರದೃಷ್ಟವಶಾತ್ ನಮ್ಮಲ್ಲಿ ಹೆಚ್ಚಿನ ಪೂಜಾರಿಗಳು ಈ ಗಣಪತಿ ಪೂಜೆಯನ್ನು ಪ್ರಥಮತಃ ಮಾಡಿಕೊಳ್ಳದೆ ತಮ್ಮ ಪೂಜೆಯಲ್ಲಿ ಹಲವು ವಿಧದ ವಿಘ್ನಗಳನ್ನು ಬರಮಾಡಿಕೊಳ್ಳುತ್ತಾರೆ. ನೋಡಿ, ನಮ್ಮಲ್ಲಿಯ ಭಟ್ಟರು ಬೆಳಿಗ್ಗೆ ಎದ್ದು ಹಿಮನೀರಿನಲ್ಲಿ ಗುಳುಮ್ಮನೆ ಮುಳುಗಿದರು; ಕವಳಿಗೆ, ತುಳಸೀದಳ ಹಿಡಿದುಕೊಂಡು ಮಹಾಲಿಂಗೇಶ್ವರನ ದೇವಸ್ಥಾನಕ್ಕೋ, ವೆಂಕಟರಮಣನ ಸನ್ನಿಧಾನಕ್ಕೋ, ಮಹಾಂಕಾಳಿ ಗುಡಿಗೋ ಹೊರಟರು. ಗಣಪತಿಪೂಜೆ ಮೊದಲು ಮಾಡಿಕೊಳ್ಳುವ ಅಭ್ಯಾಸವೇ ಇಲ್ಲ. ಹೋಗುವಾಗಲೇ ಹೊಟ್ಟೆಯುರಿ, ತಲೆ ತಿರುಗುವಿಕೆ. ದೇವಸ್ಥಾನದ ಬಾಗಿಲಿನ ತಡಿಮೆ ತಾಗಿ ಬೀಳುವದೂ ಉಂಟು. ಗಂಧ ಸವೆಯಲು ಕೈಯೇ ಬಾರದು. ಎಲ್ಲಾ ಒಂದಕ್ಕೊಂದೂವರೆ. ಶಾಸ್ತ್ರೋಕ್ತ ವಿಧಿಯಂತೆ, ಕಡಿಮೆಯೆಂದರೆ ಮೂರು ಘಂಟೆ ಬೇಕಾಗುವ ಪೂಜೆ

ಮಾಡಿಬರುತಿದ್ದರೆ ಈ ವಿಘ್ನಗಳು ಖಂಡಿತವಾಗಿ ಒದಗುತ್ತಿದ್ದಿಲ್ಲ. ಪ್ರಥಮದ ಪೂಜೆಯೇ ನಡೆಯಲಿಲ್ಲವೆಂದಾದಮೇಲೆ ನಂತರದ ಪೂಜೆಗಳಲ್ಲಿ ವಿಘ್ನಗಳು ಒದಗುವದರಲ್ಲಿ ಆಶ್ಚರ್ಯವೇನು? ಇದಕ್ಕೆ ಬದಲಾಗಿ ಹೊಟ್ಟೆಯ ಪೂಜೆಯನ್ನು, ಅರ್ಥಾತ್ ಗಣಪತಿ ಪೂಜೆಯನ್ನು ಪ್ರಥಮತಃ ತೀರಿಸಿಕೊಂಡು ಪೂಜಾರಿಗಳು ಹೋದಲ್ಲಿ, ಹೊಟ್ಟೆಯುರಿ, ತಲೆತಿರುಗು ಮೊದಲಾದ ವಿಘ್ನಗಳು ಹೇಗೂ ಇಲ್ಲವಲ್ಲ- ಒಂದೊಮ್ಮೆಗೆ ಬಾಗಿಲು ಎಡವಿ ಹೊಟ್ಟೆಯಡಿಗೆ ಹಾಕಿ ಬಿದ್ದರೂ, ದೇಹದ ಮಿಕ್ಕಭಾಗವೆಲ್ಲಾ ಅರ್ಧ ಅಡಿ ಮೇಲ್ಭಾಗದಲ್ಲಿ ನಿಂತು, ಕೈಯ ಹರಿವಾಣ ಕವಳಿಗೆ ಮಣ್ಣಿಗೆ ತಾಗಿ ಭ್ರಷ್ಟವಾಗುವ ಹೆದರಿಕೆ ಕೂಡಾ ಇಲ್ಲ! ತಿಳಿಯಿತಲ್ಲಾ, ಪ್ರಥಮತಃ ಮಾಡುವ ಗಣಪತಿಪೂಜೆ ಯಾನೆ ಹೊಟ್ಟೆಯ ಪೂಜೆಯ ಮಹತ್ವ; ಹಾಗೆಯೇ ಹೊಟ್ಟೆಯ ಪೂಜೆಯೇ ಗಣಪತಿಪೂಜೆಯೆಂಬ ರಹಸ್ಯ!

ಮೇಲಿನ ನಮೂನೆಗಳಿಂದ ನನ್ನ ವಾದವನ್ನು ರುಜುಪಡಿಸಿ ಆಯಿತಲ್ಲಾ—ಇನ್ನು ವ್ಯವಹಾರದ ರೀತಿಯಿಂದ ನೋಡೋಣ. ನೀವೆಲ್ಲಾ ಗಣಪತಿ ಪೂಜೆ ಮಾಡುವದೇ ಹೊಟ್ಟೆಗಲ್ಲವೆ! ಅಲ್ಲವೆನ್ನಬೇಡಿ. ಯಾರ ಹೊಟ್ಟೆಯು ಮುಂದೆ ಮುಂದೆ ಬಂದಿದೆಯೋ ಅವರಿಗೆ ಪೂಜೆ ಸನ್ಮಾನಗಳೂ ಮುಂದೆ ಮುಂದೆ ಪೂಜೆ ಅಂದರೆ—ಗಣಪತಿಪೂಜೆ ಮಾಡದೆ ಎಷ್ಟೋ ವಿಘ್ನಗಳು ಒದಗಿದ ದಾಖಲೆಗಳಿವೆ. ಬಾಕಿಬಿಡಿ—ಲಗ್ನಕ್ಕೆ ಕೂಡ ವಿಘ್ನ ಬಂದುದಿದೆ. ಬೀರೂರಿನಲ್ಲಿ ಲಗ್ನವಾಗುವಾಗ ಡೊಳ್ಳೊಟ್ಟೆ ಗಣಪತಿರಾಯರಿಗೆ (ಗಣಪತಿಗಲ್ಲ) ಮೊದಲಪೂಜೆ ನ್ಯಾಯಪ್ರಕಾರ ಸಲಬೇಕಷ್ಟೆ! ಬೀರೂರಿನ ಸೂರಪ್ಪನ ಮದುವೆ ಚಪ್ಪರಕ್ಕೆ ಸದ್ರಿ ಗಣಪತಿರಾಯರು ಕಾಲಿಟ್ಟಮೇಲೂ ಕೂತುಕೊಳ್ಳಿಸುವ ಪೂಜೆ ಕೊಡುವವರಿಲ್ಲದೆ ಐದು ಮಿನಿಟು ನಿಲ್ಲಬೇಕಾಯಿತಂತೆ. ಕೃಷ್ಣನಂತಹ ದನಕಾಯುವವನು ಏಳು ದಿನ ಗೋವರ್ಧನ ಗಿರಿಯನ್ನು ಹೊತ್ತು ನಿಂತನೆಂದು, ನಮ್ಮ ರಾಯರಂತಹ ಮಹಾನುಭಾವರು ಐದು ಮಿನಿಟಾದರೂ ಉದರಗಿರಿಯನ್ನು ಹೊತ್ತು ನಿಲ್ಲುವ ಹಲ್ಕಾ ಕಾರ್ಯವನ್ನು ಮಾಡುವ ಹಾಗುಂಟೆ? ಹೀಗೆ ಗಣಪತಿಪೂಜೆ ಮಾಡದುದರಿಂದ ಎಂಥಾ ವಿಘ್ನವೊದಗಿತು ಗೊತ್ತೆ? ಚಪ್ಪರದಲ್ಲಿದ್ದ ಗುತ್ತಿನವರೆಲ್ಲಾ ಗಣಪತಿ ರಾಯರಂತೆಯೇ ಎದ್ದು ನಿಂತು, ಗೊಂದಲವೆಬ್ಬಿಸಿ, ಆ ಗಾಜಿಯಿಂದ ಮದುಮಕ್ಕಳು ಮುಹೂರ್ತದಾಟಿ ಐದು ಘಂಟೆಯ ವರೆಗೂ ಧಾರೆಗೆ ಕುಳಿತು ಕೊಳ್ಳಲಾಗದೆ (ರಾಯರು ಕೂತುಕೊಳ್ಳಲಿಲ್ಲವೆಂದಾದ ಮೇಲೆ ಕೂತು ಕೊಳ್ಳುವ ಕ್ರಮವೇ ಲೋಕದಲ್ಲಿ ಇರಬಾರದೆಂಬ ಅರ್ಥ...) ಧಾರೆಗಾದದ್ದು ರೊಳಗೆ ಎಂತೆಂಥಾ ವಹಿವಾಟುಗಳಿವೆ ಬಲ್ಲಿರಾ? ಅದರ ಪ್ರಾಮುಖ್ಯತೆಯು ಇಂದು ನಿನ್ನೆಯದಲ್ಲ-ಶ್ರೀಮನ್ನಾರಾಯಣನಿಂದ ಬಂದುದು. ಆದಿಯಲ್ಲಿ ಅವ ಹದಿನಾಲ್ಕು ಲೋಕಗಳನ್ನು ಹೊಟ್ಟೆಯೊಳಗಿಟ್ಟುಕೊಂಡಂದಿನಿಂದ ಮೊದಲಾಗಿದೆ. ಆದ್ದರಿಂದ ಹೊಟ್ಟೆಯ ಪೂಜೆಯೇ ಗಣಪತಿ (ಪ್ರಥಮ) ಪೂಜೆ. ಈ ತತ್ವವು ನಮಗೆ ನಿಮಗಲ್ಲ-ಸ್ವತಃ ಗಣಪತಿಗೇ ಗೊತ್ತಿದ್ದುದರಿಂದ, ತಿಂದು ತಿಂದು ಹೊಟ್ಟೆ ಬಿರಿಯಿತು ಎಂದಾದೊಡನೆ 'ನನ್ನ ಸರ್ವಸ್ವ ಹೋಯಿತಲ್ಲಾ' ಎಂದು ಸರ್ಪನನ್ನು ತೆಗೆದು ಹೊಟ್ಟೆಗೆ ಕಟ್ಟಿಹಾಕಿಕೊಂಡ; ಹಾಗೆಯೇ ದಾಡೆ ಮುರಿದು ಏಕದಂತನೆಂಬ ಅಪಕೀರ್ತಿ ಬಂದರೂ ಅದಕ್ಕೆ ಬೆಸಿಗೆ ಹಾಕುವ ಕೆಲಸ ಮಾಡಲಿಲ್ಲ! ನೋಡಿದಿರಾ ಹೊಟ್ಟೆಯ ಪ್ರಾಮುಖ್ಯತೆ.

ಇವೆಲ್ಲಾ ಕಾರಣಗಳು ಒತ್ತಟ್ಟಿಗಿರಲಿ, ನಾಳೆ ಚೌತಿಯ ದಿನ ನೀವು ಮಾಡುವ ಗಣಪತಿಪೂಜೆಯೆಂದರೆ ಹೊಟ್ಟೆಯ ಪೂಜೆಯೇ ಅಲ್ಲವೆ?

---


ಗಳು

...ಕ್ಕೆ
ಬರೆದುಕೊಳ್ಳಿರಿ.

...ಗಳೂ,
ಕೊಳ್ಳು...ಗುತ್ತಿವೆ.

ನವಭಾರತ ಬುಕ್ ಡಿಪೋ...ಣೀಯವಾದ
ಧ್ಯೇಯವನ್ನು ಕಾಯ್ದುಕೊಂಡಿದೆ

ನವಯುಗಕ್ಕೆ ಏಜಂಟರು

ಏಜಂಟರು ಬೇ...
ನವಯುಗ ಆಫೀಸು, ...

ಬಿಡಿ ಸಂಚಿಕೆ 0-2-0
ಹಿಂದಿನ ಸಂಚಿಕೆ 0-3-0

ದಕ್ಷಿಣ ಭಾರತ.

# ಚಿನ್ನ!

> "ಚಿನ್ನ" ಎಂದೊಡನೆಯೇ ಅಮೂಲ್ಯವಾದ ಆ ಹಳದಿ ಲೋಹದ ನೆನಪಾಗುತ್ತದೆ. ಅದನ್ನು ಹೊಂದುವುದಕ್ಕಾಗಿ ಸಮಗ್ರ ಜಗತ್ತೇ ಹೋರಾಡುತ್ತಿದೆ. ಮಮತೆಯ ಮಡದಿಯನ್ನು ಕೂಡಾ ಪ್ರೀತಿಯಿಂದ "ಚಿನ್ನಾ" ಎಂದು ಕರೆಯುವ ಅನುಭವವು ಹಲವರಿಗಿರಬಹುದು. ಅದೇ ಚಿನ್ನದ ಮೇಲೆ ಜಗತ್ತಿನ ಆಗು-ಹೋಗುಗಳು ಹೊಂದಿಕೊಂಡಿವೆಯೆಂದು ನಿಮಗರಿತಿದೆಯೆ?

ಇತರ ರಾಷ್ಟ್ರಗಳ ವಿಷಯ ವಂತಿರಲಿ. ಅಫಘಾನಿಸ್ಥಾನವು ಕೂಡಾ ತನ್ನಲ್ಲಿರುವ ಚಿನ್ನವು ಹೊರಗೆ ಹೋಗಬಾರದೆಂಬ ಆಜ್ಞೆಯನ್ನು ಮಾಡಿದೆ. ಆದರೆ ಭಾರತದಿಂದ ಮಾತ್ರ ಬೇಕಾದಷ್ಟು ಚಿನ್ನವು ಪರದೇಶಗಳಿಗೆ ನೀರು ಹರಿದಂತೆ ಹೋಗಬಹುದಾಗಿದೆ.

ಚಿನ್ನದ ಕುರಿತು ಯೋಚಿಸುವಾಗ ಅದು ಎಲ್ಲಿಂದ ಬರುತ್ತಿದೆಯೆಂಬುದನ್ನು ಹೇಳುವುದುತ್ತಮ. ಪ್ರತಿ ವರುಷ ಸುಮಾರು ಮೂವತ್ತು ಮಿಲಿಯ ಔನ್ಸುಗಳಷ್ಟು ಚಿನ್ನವು ಜಗತ್ತಿನ ವಿವಿಧ ಭಾಗಗಳಲ್ಲಿ ಸಂಗ್ರಹಿಸಲ್ಪಡುತ್ತದೆ. ಈಗಿನ ಕ್ರಯಕ್ಕನುಸಾರವಾಗಿ ಒಂದು ಔನ್ಸ್ ಚಿನ್ನಕ್ಕೆ ೭ ಪವನುಗಳು ದೊರಕುತ್ತವೆ. ಅಂದರೆ ಪ್ರತಿ ವರುಷ ಸಂಗ್ರಹಿಸಲ್ಪಡುವ ಚಿನ್ನದ ಬೆಲೆಯು ೨೦೦,೦೦೦,೦೦೦ ಪವನುಗಳಿಗಿಂತಲೂ ಮಿಕ್ಕುತ್ತದೆ. ಬಂಡೆಗಳನ್ನೊಡೆದು ಪುಡಿಮಾಡಿ ಜಾಗರೂಕತೆಯಿಂದ ಚಿನ್ನವನ್ನು ಶೇಖರಿಸಿದನರಿಗೆ ಅದನ್ನುಪಯೋಗಿಸಲ್ಪಡುತ್ತದೆ. ಹಾಗಿರುವ ಚಿನ್ನಕ್ಕೆ ಒಂದು ತರದ ಬೆಲೆಯಿದ್ದರೂ ಅದು ಚಲಾವಣೆಯಲ್ಲಿರದೆ 'ಸೋಮಾರಿ' ಯಾಗಿರಬೇಕಾಗುತ್ತದೆ. ಅದರ ಒಡೆತನವನ್ನು ವಹಿಸಿಕೊಂಡವರು ರಾತ್ರಿ ಹಗಲೆನ್ನದೆ ಕಾಯಬೇಕಾಗುತ್ತದೆ.

ಮಹಾಯುದ್ಧದ ಮೊದಲು ಚಿನ್ನವು ಅತ್ಯುಪಯುಕ್ತವಾದ ನಾಣ್ಯವಾಗಿತ್ತು. ಹಲವು ನಾಗರಿಕ ರಾಷ್ಟ್ರಗಳಲ್ಲಿ ಅದೇ ಪ್ರಾಮುಖ್ಯವಾದ ನಾಣ್ಯವಾಗಿತ್ತು. ಎಲ್ಲಾ ಸಾಧನಗಳು ಅದರ ಬೆಲೆಯ ಮೇಲೆ ಹೊಂದಿಕೊಂಡಿದ್ದುವು. ಆದರೆ ಇಂದಿನ ಪರಿಸ್ಥಿತಿಯು ಹಾಗಿಲ್ಲ. ಅಮೇರಿಕದ ಯುನೈಟೆಡ್ ಸ್ಟೇಟ್ಸ್‌ನಂತಹ ರಾಷ್ಟ್ರಗಳು ಚಿನ್ನದ ನಿಜ ಬೆಲೆಗಿಂತಲೂ ಹೆಚ್ಚು ಹಣ ಇತರ ರಾಷ್ಟ್ರ ಲೋಹವನ್ನು

೧೦,೫೦,೦೦೦ ಔನ್ಸುಗಳು ತಯಾರಾಗುತ್ತವೆ. ರಷ್ಯವು ಎರಡನೆ ಸ್ಥಾನವನ್ನು ಪಡೆಯುತ್ತದೆ. ಅಲ್ಲಿ ಸುಮಾರು ೫ ಮಿಲಿಯ ಔನ್ಸುಗಳಷ್ಟು ಚಿನ್ನವಾಗುತ್ತದೆ. ಮೂರನೆಯಸ್ಥಾನವು ಯುನೈಟೆಡ್ ಸ್ಟೇಟ್ಸ್ ಮತ್ತು ಪಿಲಿಪ್ಪೈನ್ ದ್ವೀಪಗಳಿಗೆ ಸಲ್ಲುತ್ತದೆ. ಅಲ್ಲಿ ಸುಮಾರು ೩,೦೮೦,೦೦೦ ಔನ್ಸುಗಳಷ್ಟು ಚಿನ್ನವಾಗುತ್ತದೆ. ಆ ಬಳಿಕ ಕೆನಡಾ; ಅಲ್ಲಿ ೨,೯೭೦,೦೦೦ ಔನ್ಸುಗಳು. ಆಸ್ಟ್ರೇಲಿಯ ಮತ್ತು ನ್ಯೂಝಿಲೇಂಡಿನಲ್ಲಿ ೧,೨೬೦,೦೦೦ ಔನ್ಸುಗಳಷ್ಟು ಚಿನ್ನವು ತಯಾರಾಗುತ್ತದೆ. ಜಪಾನ್ ಮತ್ತು ಕೊರಿಯದಲ್ಲಿ ೮೪೦,೦೦೦, ಮತ್ತು ದಕ್ಷಿಣ ರೊಡೇಸಿಯದಲ್ಲಿ ೭೨೦ ೦೦೦. ಭಾರತ, ನ್ಯೂಗಿನಿಯ, ದಕ್ಷಿಣಾಫ್ರಿಕ, ಮೆಕ್ಸಿಕೊ, ಬೆಲ್ಜಿಯನ್, ಕೊಂಗೊ ಮೊದಲಾದಲ್ಲಿ ಕೂಡಾ ಸ್ವಲ್ಪ ಮಟ್ಟಿಗೆ ಚಿನ್ನವು ತಯಾರಾಗುತ್ತದೆ.

ಇದರಲ್ಲಿ ಅತ್ಯಂತ ಆಶ್ಚರ್ಯದ ಸಂಗತಿಯೆಂದರೆ ಚಿನ್ನವು ಚಲಾವಣೆಯಲ್ಲಿಲ್ಲದಿದ್ದರೂ ಎಂದಿಗಿಂತಲೂ ಹೆಚ್ಚಿನ ಪ್ರಮಾಣದಲ್ಲಿ ಅಗೆದು ಶೇಖರಿಸ್ಪಡುತ್ತದೆ. ೧೯೩೪ ರಿಂದ ಚಿನ್ನವು ಹೆಚ್ಚುತ್ತಾ ಬರುತ್ತಿದೆ.

ಬಂತು. ಮೂರು ಸಾವಿರ ವರುಷಗಳ ಹಿಂದೆ ಮನುಷ್ಯನು ಆವರ ಹೊಳೆತಕ್ಕೆ ಮರುಳಾದಂದಿನಿಂದ ಇಂದಿನ ತನಕವೂ ಚಿನ್ನವು ತನ್ನ ಮಹತ್ವವನ್ನು ಕಳೆದು ಕೊಂಡಿಲ್ಲ. ಐಗುಪ್ತದ ನೀಲನದಿಯ ತೀರಗಳಲ್ಲಿ ಮೊದಲಿನವರು ಮರಳಿಂದ ಚಿನ್ನವನ್ನು ಪ್ರತ್ಯೇಕಿಸಿದ ಬಳಿಕ, ಜಗತ್ತು ಅದಕ್ಕಾಗಿ ಯಾವ ಕಷ್ಟವನ್ನನುಭವಿಸಲೂ ಸಿದ್ಧವಾಗಿದೆ.

ಚಿನ್ನ, ಚಿನ್ನ, ಚಿನ್ನ, ಚಿನ್ನ
ಶುದ್ಧ, ಶಕ್ತ, ಪೀತ ವರ್ಣ
ಪಿಡಿಯೆ ಹಗುರ, ಪಡೆಯೆ ಬನ್ನ
ಕದ್ದ ಕಡದ, ಕಳೆದ, ಚಿನ್ನ
ಕಿರಿಯರೊಗೆದ, ಮಸಣದನ್ನ
ಹಿರಿಯರಪ್ಪಿ ಹಿಡಿದ ಚಿನ್ನ
ಜಗಳ, ಕಳವು, ಕೊಲೆಯು ಕನ್ನ
ವೆಲ್ಲ ನಿನ್ನ ಪಡೆಯೆ ಚಿನ್ನ!
ಚಿನ್ನ ಚಿನ್ನ ಚಿನ್ನ ಚಿನ್ನ

ಕವಿಯು ಚಿನ್ನದ ನಿಜವಾದ ಮಹತ್ವವನ್ನು ಕಂಡು ಸ್ಫೂರ್ತಿಯಿಂದ ಬರೆದ ಕವನವಿದು. ಜಗತ್ತಿನ ಹೆಚ್ಚಿನ ಕೊಲೆಗಳೆಲ್ಲಾ ಚಿನ್ನಕ್ಕಾಗಿಯೇ ಮಾಡಲ್ಪಡುತ್ತವೆ. ಇತರರಂತಿರಲಿ, ಪತ್ರಿಕೋದ್ಯಮವು ಚಡಪಡಿಸುವುದೂ ಇದಕ್ಕಾಗಿಯೆ!

ಈ ನಾಣ್ಯದ ಪ್ರಾಮುಖ್ಯತೆಯನ್ನು ಕಲ್ಲು ಎಂದಾದರೂ ಪಡೆಯುವುದೆ? ಹಾಗಾದರೆ ಕಾರ್ಕಳವು ಭಾರತದ 'ಕಲ್ಲಿನ ಗನಿ'ಯಾಗಿ ಪರಿಣಮಿಸಬಹುದು.


**ADVERTISE IN ANTARANGA**

ನೀವು ಪ್ರಪಂಚದ ವೈಶಿಷ್ಟ್ಯಗಳನ್ನು ತಿಳಿಯಬಯಸುವಿರಾ : : : ?

ಹಾಗಾದರೆ

ಪ್ರತಿ ತಿಂಗಳ ತಾ. 15ಕ್ಕೆ ಪ್ರಕಟವಾಗುವ

**ವರ್ತಕ ಧುರೀಣ**

ಆಧುನಿಕ ಭಾರತಕ್ಕೊಪ್ಪುವ ರಾಷ್ಟ್ರೀಯ ಧ್ಯೇಯದ ಮಾಸ ಪತ್ರಿಕೆಯನ್ನು ಅಗತ್ಯವಾಗಿ ಓದಲೇಬೇಕು

ಈ ಪತ್ರಿಕೆಯಲ್ಲಿ ವಿದ್ವಜ್ಜನರಿಂದ ಬರೆಯಲ್ಪಡುವ ರಾಜಕೀಯ, ಸಾಮಾಜಿಕ, ಐತಿಹಾಸಿಕ ಪ್ರಾಪಂಚಿಕ, ಧಾರ್ಮಿಕ ಮೊದಲಾದ [illegible] ಲೇಖನಗಳೂ, ಕಥೆಗಳೂ [illegible]ಗಳೂ, ಟೀಕೆ-ಟಿಪ್ಪಣಿಗಳೂ [illegible] ಕೊಳ್ಳಲಾಗುತ್ತಿವೆ.

ಪ್ರತಿಯೊಂದು ಸಂಚಿಕೆಯಲ್ಲೂ ಪ್ರಕಟವಾಗುವ ಮಿಸ್ಟರ್ ಜಮದಗ್ನಿ ಯವರ ರಿಪೋರ್ಟು - ಯಾ - ಸಿಂಹಾವಲೋಕನವನ್ನು ಓದಲು ಮರೆಯಬೇಡಿರಿ

ಯಾವುದೇ ಸರಕಿನ ಪ್ರಚಾರವಾಗಬೇಕಾದರೂ - ಈ - ಪತ್ರಿಕೆಯು ಜಾಹೀರಾತು [illegible]ಗೊಂದು ಸಾಧನ ದರಕ್ಕೆ ಬರೆದುಕೊಳ್ಳಿರಿ.

# ಭೇತಾಳ ಸುಂದರಿ!

ಕತೆಗಾರರು:— ಶ್ರೀ. ಪಿ. ಎನ್. ಬನ್ನಂಜೆ ರಾಮಾಚಾರ್ಯರು.

"ಯಾರು . . . ?"

". . . . ."

"ಯಾರು ನೀನು ವಿಮಲೆಯಾ?"

"ಹುಂ ಹುಂ! ಉಂ ಹುಂ!!"

"ಏನು? ವಿಮಲೆಯಾ?"

"ಹೌದು?"

"ನನ್ನ ವಿಮಲಾ"

". . . . . . ."

"ವಿಮಲಾ— ಬಂದೆಯಾ? ಆನಂದವಾಯ್ತೆ. ನಿನಗಾಗಿ ಕೆಲ ದಿನಗಳಿಂದ ಪಾಡು ಪಡುತ್ತಿದ್ದೇನೆ. ಊಟ ನಿದ್ದೆ ಬಿಡುತ್ತಿದ್ದೇನೆ ಎಲ್ಲಿ ಹೋದರೂ—ಏನಾದರೂ ನಿನ್ನದೇ ...ಲಾ! ನನ್ನ

ಕಂಪ!
ಮಾತ
...ಕಡೆ
...ನ್ನು
...ನ್ನ
ಪರೀ... ...ಗಿ
...ಬೇಕಂ ...ಗಿದೆ.
...ಗೆ
...ಡೆ ಬಾ
..."
...ಲಾ."
...ವನು
ತನ್ನ
ಬಿಲ
ಶ್ವಸ
ಎದ್ದಿ

ಆನಂದದ ಅವಧಿಯನ್ನು ಹೇಳಲೇ ಕೆಲಸವಿಲ್ಲ. ಆಕೆಗೂ ಹಾಗೇ ಆಯಿತೆನ್ನಿ!

"ವಿಮಲಾ—ಮುದ್ದು ವಿಮಲಾ" ಆಕೆಯ ತಲೆಯನ್ನು ಸವರುತ್ತಾ ಹೇಳಿದ. ಆಕೆ ತನ್ನ ಮುಖವನ್ನು ಆತನ ವಕ್ಷಸ್ಥಳದಲ್ಲಿ ಒತ್ತಿಟ್ಟಳು ಅಷ್ಟೆ! ಮಾತನಾಡಲಿಲ್ಲ. ಆಕೆಯ ಮಾತನ್ನು ಕೇಳಬೇಕೆಂಬ ಆಸೆ ಆತನಲ್ಲಿ ಬಲವಾಗಿತ್ತು. ಆದರೆ ಆಕೆ ಮಾತ್ರ ವ್ರತತೊಟ್ಟಂತಿದ್ದಳು. ಇವನು ಮಾತಿನ ಸುರಿಮಳೆಯನ್ನೇ ಸುರಿದರೂ ಆಕೆ ಒಂದೂ ಮಾತನಾಡಿಲ್ಲ. ಇದೂ ಒಂದು ಶೃಂಗಾರ ಚೇಷ್ಟೆಯೇ ಇರಬಹುದೆಂದು ಭ್ರಮಿಸಿ ಆತನು ಆಕೆಯನ್ನು ಹೆಚ್ಚು ಮಾತನಾಡಿಸುವ ಗೋಜಿಗೆ ಹೋಗಲಿಲ್ಲ.

ಅಂತೂ ಆತನಿಗೆ ತುಂಬ ತೃಪ್ತಿಯಾಯಿತು. ತಾನೊಲಿದ ನಲ್ಮೆ ತನ್ನ ಸುಖಕ್ಕೆ ದೊರೆತಳೆಂದು! ಆ ಬ್ರಹ್ಮಾನಂದದಿಂದ ಅವನಿಗೆ ಸ್ವರ್ಗ ಮೂರೇ ಗೇಣು.

o o o

ಗೋವಿಂದನಿಗೆ ವಿಮಲೆಯಲ್ಲಿ ತುಂಬ ಪ್ರೇಮ. ವಿಮಲೆ ಗೋವಿಂದನ ನೆರೆಮನೆಯವಳು. ಹೊಸತಾಗಿ ಬಂದವಳು. ಚಿಕ್ಕ ಪ್ರಾಯದ ... ತುಂಬ ಚೆಲುವೆ. ...ವಿಂದನು ಈಕೆ

**ಕಾಸರಗೋಡು**

ದಕ್ಷಿಣ ಕನ್ನಡದ ಕಾ...ಡು ದು. ತಾಲೂಕನ್ನು ಕೇರಳಕ್ಕೆ ಸೇರಿಸಲು ಬೋರ್ಡರ್ ಕಮಿಷನಿನವರು ಸಮ್ಮತಿಸಿದ್ದಾರೆಂದು ಸುದ್ದಿ.

s s s s

ಮನೆಯಲ್ಲಿ ಅವನೊಬ್ಬನೇ. ಅಡಿಗೆ ಮಾಡಿ ಹಾಕಲು ಒಬ್ಬ ಮುದುಕಿ ಇರುತ್ತಿದ್ದಳು. ಇನ್ನಾರೂ ಇರಲಿಲ್ಲ. ವಿಮಲೆಯ ನೆರೆಯಲ್ಲಿ ಇನ್ನೊಬ್ಬಾಕೆ ರವೆ. ರವೆಯ ರೂಪು ತುಂಬ ವರ್ಣನೀಯ- ಮಸಿಯಂತಹ ಮೈಸಿರಿ. ಅಡ್ಡದಿಡ್ಡಾಗಿ ಬೆಳೆದ ದೊಡ್ಡ ದೇಹ. ಪ್ರಪಂಚದ ಪರಾಮರ್ಶೆಗೆಂದು ಹೊರ ಬಂದ ಹಲ್ಲುಗಳು. ಕುಂಭಕರ್ಣನ ಕಿವಿ. ದಪ್ಪವಾದ ಕಪ್ಪಡರಿದ ತುಟಿಗಳು. ಕೊಳಕು ಕೊಳಕಾದ ಮೈ. ಹರಕು ಹರಕಾದ ಒಂದು ಬಟ್ಟೆ. ಆಕೆಗೆ ಬೇರಾರೂ ಗತಿಯಿದ್ದಿಲ್ಲ. ಗೋವಿಂದನನ್ನು ಕಂಡು ಆಕೆಗೊಂದು ಆಸೆ- ಇವನು ತನ್ನ ಬಲೆಗೆ ಬಿದ್ದರಾಗಬಹುದೆಂದು. ಆದರೆ ಆ ಭೇತಾಳ ಸುಂದರಿಯನ್ನು ಗೋವಿಂದನು ಮೆಚ್ಚುವನೇ?

ವಿಮಲೆಗೆ ಗೋವಿಂದನನ್ನು ಕಂಡರಾಗುತ್ತಿದ್ದಿಲ್ಲ. ಆಕೆಗೆ ಅನುರೂಪನಾದ ಪತಿಯಿದ್ದನು. ಅಂದ ಬಳಿಕ ಗೋವಿಂದನನ್ನೇಕೆ ಆಕೆ ಆಶಿಸುವಳು?

ಆದರೆ ಗೋವಿಂದ ಆಕೆಯ ಹಂಬಲದಲ್ಲಿ ಬಿದ್ದು ವ್ಯರ್ಥ ಶ್ರಮ ತೆಗೆದುಕೊಳ್ಳುತ್ತಿದ್ದ.

ಆ ರಾತ್ರಿ ಒಬ್ಬನೇ ...ನ ಕೋಣೆಯಲ್ಲಿ ಕುಳಿತಿದ್ದ... ಅಡುಗೆಯ ಮುದುಕಿ... ನಿದ್ದೆಹೋಗಿದ್ದಳು. ತನ

ಈಶ್ವರ...ನ್ನು ನೇಮಿಸ...ಭಿಸಿದ್ದಾರೆ.

s

...ಪ್ರ ಮಂತ್ರಿಮಂಡಲ

ಸಿಂಧ ಪ್ರಾಂತ್ಯದಲ್ಲಿ ಕಾಂಗ್ರೆಸ್ ಮಿಶ್ರ ಮಂತ್ರಿಮಂಡಲವಾಗುವುದಂತೆ.

ಹನ್ನೊಂದು ಘಂಟೆ ರಾತ್ರಿಯಿರಬಹುದು. ಕೈ ಬಳೆಗಳ ಸದ್ದು ಕೇಳಿಸಿತು. ವಿಮಲೆಯ ಹಂಬಲದಲ್ಲಿದ್ದ ಗೋವಿಂದನಿಗೆ ಮೈ ಜುಮ್ಮೆಂದಿತು!

ಮತ್ತೆ ನಡೆದುದು ಓದುಗರಿಗೆ ತಿಳಿದೇ ಇದೆ.

o o o

ಮರುದಿನ ಮುಂಜಾನೆ ಗೋವಿಂದನು ಬಹಳ ಉತ್ಸಾಹದಿಂದಲೇ ಎದ್ದನು. ವಿಮಲೆಯ ಪತಿಯು ಇಲ್ಲದಿರುವುದು ಆತನಿಗೆ ಗೊತ್ತಿತ್ತು. ಆದುದರಿಂದಲೇ ಆಕೆ ನಿನ್ನೆ ರಾತ್ರಿ ಬಂದಳು. ತನ್ನ ಬಹುಕಾಲದ ಆಸೆ ನೆರವೇರಲು ಅದೇ ಕಾರಣ. ಅದನ್ನರಿತ ಗೊವಿಂದನು ಒಡನೆಯೇ ಆಕೆಯೊಡನೆ ಮಾತನಾಡಿ ಬರಬೇಕೆಂದು ಆಕೆಯ ಮನೆಗೆ ಹೊರಟನು.

ಮನೆಯ ಬಾಗಿಲು ಹಾಕಿತ್ತು. ದೂಡಿ ಬಾಗಿಲನ್ನು ತೆರೆದು ಮನೆಯೊಳಗೆ ನುಗ್ಗಿದ. ವಿಮಲೆ ಒಳಗಿದ್ದವಳು ಬಾಗಿಲ ಸದ್ದು ಕೇಳಿ ಓಡಿ ಬಂದಳು. ಗೋವಿಂದ! ಆಕೆಗೆ ಆಶ್ಚರ್ಯವಾಯಿತು!

"ಏಕೆ ಬಂದಿರಿ?"

"ನನ್ನ ವಿಮಲಾ!—ನಾನು ಧನ್ಯ!!. . . . ."

"ಇ–ಸ್ಸಿ–!!" ಮೊಗ ಸುರುಟಿದಳು.

"ಏನೇ-ನಿನ್ನೆ. . . ."

"ನಿಮಗೇನಾಗಿದೆ – ಅಯ್ಯೋ" ಆ ಕೂಗು ಸ್ವಲ್ಪ ಕರ್ಕಶವಾಗಿತ್ತು. ಕೆ ಒದ ಬೆದರಿದನು. ನಿನ್ನೆ ನ್ನನ್ನು ಸೇರಿದ ವಿಮಲೆ ಗೇಕೆ? ಎಂದು ಅವನು ಜಿಗಪಟ್ಟನು.

"ವಿಮಲಾ–ನಿನ್ನೆಯಾದರೂ ಈ ನಿರ್ಭಾಗ್ಯನ ಮೇಲೆ ಕರುಣೆ ಬಂತಲ್ಲ–ಭಗವಂತಾ ಅಷ್ಟೇ ಸಾಕು. ನಿನಗಾಗಿ – ವಿಮಲಾ—ನಿನಗಾಗಿ ನಾನು ಪಡುತ್ತಿದ್ದ ಪಾಡನ್ನು ನೀನೇನು ಬಲ್ಲೆ ವಿಮಲಾ?" ಅವಸರವಸರವಾಗಿ ನುಡಿದನು ಗೊವಿಂದ.

ವಿಮಲೆಯ ಮೊಗ ಕೆಂಪೇರಿತು. ಕಣ್ಣುಗಳಲ್ಲಿ ಕ್ರೌರ್ಯವು ಹೊರ ಹೊಮ್ಮುತ್ತಿತ್ತು.

"ತಲೆಗೆಟ್ಟದೆಯೋ? ಕೂಗಲೇ ಯಾರನ್ನಾದರೂ–ಹೋಗುವಿರಾ?" ಸಿಂಹಿಣಿಯಂತೆ ಘರ್ಜಿಸಿದಳು.

ಗೋವಿಂದನ ಎದೆ ಅದುರಿತು. ಭಯಭೀತನಾಗಿ ಮಾತನಾಡದೆ ಬಂದುಬಿಟ್ಟನು.

ಆದರೆ ಅದೊಂದು ವಿಚಿತ್ರ ಸಮಸ್ಯೆಯಾಗಿ ತೋರಿತವನಿಗೆ.

o o o

ಆ ರಾತ್ರಿ ಊಟಗೀಟ ತೀರಿಸಿ ಸುಮಾರು ೧೧ ಘಂಟೆಯ ವರೆಗೆ ರಾತ್ರಿ-ಬೆಳಗುಗಳ ಸಮಾಚಾರವಾಗಿ ತುಂಬ ಚರ್ಚಿಸಿದ–ಮನಸ್ಸಿನಲ್ಲಿಯೇ! ಆದರೂ ಸಮಾಧಾನ ದೊರೆಯಲಿಲ್ಲ. ನಿನ್ನೆ ರಾತ್ರಿ ಬಂದಂತೇ ಇಂದೂ ಬರಬಹುದೆಂದು ಭಾವಿಸಿ ಕಾದು ಕುಳಿತ. ಸುಳಿವಿಲ್ಲ.

ಕೊನೆಗೆ ಹತಾಶನಾಗಿ ದೀಪವನ್ನು ನೊಂದಿಸಿ ಮಲಗಿದ. ೧೨ ಘಂಟೆಯಿರಬಹುದು. ಬಾಗಿಲು ತಟ್ಟಿದಂತಾಯಿತು. ಗೋವಿಂದ ಪುಳಕಿತನಾದ. ಎದ್ದು ಕುಳಿತ. ಪುನಃ ತಟ್ಟಿದ ಶಬ್ದ. ಬಂದ ಬಾಗಿಲು ತೆರೆದನು.

"ಯಾರು—?" ಗೋವಿಂದ ಕೇಳಿದ.

"....."

"ವಿಮಲೆಯೇ?"

"ಉಹುಂ–ಉಹುಂ"

ತುಂಬ ಆಶ್ಚರ್ಯ ಗೋವಿಂದನಿಗೆ. "ಹಗಲಲ್ಲಿ ಏನಾದರೂ ಆವೇಶವಾಗುವುದುಂಟೇ ಇವಳಿಗೆ?" ಎಂದು ಮನಸ್ಸಿನಲ್ಲಿಯೇ ಯೋಚಿಸಿ "ವಿಮಲಾ ಬಾ ಒಳಗೆ" ಎಂದನು. ಆಕೆ ಒಳಗೆ ಬಂದಳು.

ಗೋವಿಂದನು ನಿನ್ನೆ ರಾತ್ರಿ ಆಕೆ ಬಂದ ಆನಂದದ ಸಂಭ್ರಮದಲ್ಲಿ ದೀಪವನ್ನು ಹೊತ್ತಿಸಲಿಲ್ಲ. ಆದರೆ ಇಂದು ಮರೆಯಲಿಲ್ಲ. ಕೂಡಲೇ ಆತ ದೀಪ ಹೊತ್ತಿಸಿದನು. ಬಂದಾಕೆ ಗಾಬರಿಯಿಂದ ಒಡಲನು ವಾದಳು. "ನನ್ನ-ವಿಮಲಾ-"ಎಂದು ಕೈ ಹಿಡಿದು ಮೆಲ್ಲನೆ ನೋಡುತ್ತಾನೆ ಗೋವಿಂದ-ಅವನಿಗೆ ಆಕಾಶವೇ ಕಳಚಿ ಬಿದ್ದಂತಾಯಿತು!

ಅದು ವಿಮಲೆಯಲ್ಲ! ಭೇತಾಳ ಸುಂದರಿ ರಮೆ!!

ಗಾಬರಿಯಿಂದ ಕೈ ಬಿಟ್ಟು ಟಕಮಕ ನೋಡುತ್ತನಿದ್ದನು ಗೋವಿಂದ. ಅವನೆದೆಯಲ್ಲಿ ಈ ಪಿಶಾಚಿಯ ಪ್ರತೀಕಾರ ಭಾವನೆಯು ಉದಿಸತೊಡಗಿತ್ತು.

ಆದರೆ ಅಷ್ಟರಲ್ಲಿ ಆತನ 'ಭೇತಾಳವನಿತೆ'ಯು ಮನೆ ಸೇರಿದ್ದಳು!

*For best*
**ASAFOETIDA**
Approach
Sri Bharata Vastu Mandira
UDIPI

# ಅಂತರಂಗದ ಸುದ್ದಿಗಳು

**ಅಂತರಂಗದ ವಿಶೇಷ ಪ್ರತಿನಿಧಿಯ ಗುಟ್ಟಿನ ಡೈರಿಯ ಪೂರ್ಣ ನಿರಾಧಾರವಾದ ಸುದ್ದಿಗಳು. ಓದಿ ಗಡಿಬಿಡಿ ಮಾಡಿದರೆ ಅವರು ಜವಾಬ್ದಾರರಲ್ಲ.**

●

## ಸರ್ ಉಸ್ಮಾನರು ಕಾಂಗ್ರೆಸಿಗೆ.

ಮಾಜಿ ಗವರ್ನರರಾದ ಸರ್ ಮಹಮದ್ ಉಸ್ಮಾನ್‌ರವರು ಕಾಂಗ್ರೆಸ್ ಪಕ್ಷಕ್ಕೆ ಸೇರುವರೆಂದು ತಿಳಿದು ಬಂದಿದೆಯಂತೆ.

S S S S

## ಭಾರತಕ್ಕೆ ಯೆಹೂದಿಯರು.

ಜರ್ಮನಿ ಇಟಲಿಗಳಿಂದ ಅಟ್ಟಲ್ಪಟ್ಟ ಯೆಹೂದಿಯರು ಭಾರತಕ್ಕೆ ಬರುವರೆಂದು ತಿಳಿಯಲಾಗಿದೆ.

S S S S

## ಶ್ರೀ. ಲಠ್ಠೆಯವರ ಸಂಚಾರ.

ಮುಂಬಯಿಯ ಆರ್ಥಿಕ ಮಂತ್ರಿಗಳಾದ ಶ್ರೀ ಎ. ಬಿ. ಲಠ್ಠೆಯವರು ಕರ್ನಾಟಕ ಏಕೀಕರಣ ಪ್ರಚಾರಕ್ಕಾಗಿ ನವಂಬರ ತಿಂಗಳಲ್ಲಿ ಕರ್ನಾಟಕದಲ್ಲಿ ಸಂಚರಿಸುವರೆಂದು ವಿಶ್ವಸನೀಯವಾಗಿ ತಿಳಿದು ಬರುತ್ತದೆ.

S S S S

## ಮೈಸೂರಿಗೆ ಸುಧಾರಣೆ

ದಶಂಬರ ತಿಂಗಳಲ್ಲಿ ಮೈಸೂರಿಗೆ ಜವಾಬ್ದಾರೀ ಸರಕಾರವನ್ನು ಕೊಡುವರೆಂದು ಕಿಂವದಂತಿ.

S S S S

## ಗಾಂಧಿಯವರ ಸಂಚಾರ.

ಮಹಾತ್ಮಾ ಗಾಂಧಿಜಿಯವರು ತನ್ನ ಹೊಸ ಯೋಜನೆ ಮುಗಿದೊಡನೆ ಅಖಿಲ ಭಾರತದಲ್ಲಿ ಸಂಚರಿಸುವರೆಂದು ವಿಶ್ವಸನೀಯವಾಗಿ ತಿಳಿದುಬಂದಿದೆಯೆಂದು ಸುದ್ದಿ ಹಬ್ಬಿದೆ.

S S S S

## ಕಾಂಗ್ರೆಸ್ ಲೀಗ್ ಐಕ್ಯ.

ಮಾರ್ಚ್ ೧೯೪೯ರಲ್ಲಿ ಕಾಂಗ್ರೆಸ್ ಮತ್ತು ಮುಸ್ಲಿಮ್ ಲೀಗುಗಳು ಒಂದಾಗುವುವೆಂದು ವಾರ್ತೆ.

S S S S

## ಕೊಚ್ಚಿ ಸಂಸ್ಥಾನದಲ್ಲಿ.

ಶ್ರೀ. ಶ್ರೀನಿವಾಸ ಮಲ್ಯರು ಸಮತಾವಾದಿ ಪಕ್ಷಕ್ಕೆ ಸೇರಿರುವರೆಂದೂ, ಅವರೂ ಕೊಚ್ಚಿ ಸಂಸ್ಥಾನದ ಯುವಕ ಪರಿಷತ್ತಿನ ಅಧ್ಯಕ್ಷತೆಯನ್ನು ವಹಿಸುವರೆಂದೂ, ಕೊಚ್ಚಿ ಸರಕಾರದವರು ಅವರು ಭಾಷಣ ಮಾಡಬಾರದೆಂದು ನಿಷೇಧಾಜ್ಞೆಯನ್ನು ಮಾಡಿದರೆ ಅವರದನ್ನು ಮುರಿಯುವರೆಂದೂ ರಾಜಕೀಯ ಕ್ಷೇತ್ರಗಳಲ್ಲಿ ಭಾವಿಸಲಾಗಿದೆಯೆಂದು ಹೇಳುತ್ತಿದ್ದಾರೆ.

S S S S

## ಪಕ್ಷಾಂತರ.

ಶ್ರೀ ಗಂಗಾಧರರಾವ್ ದೇಶಪಾಂಡೆಯವರನ್ನು ಸಮತಾವಾದಿ ಪಕ್ಷಕ್ಕೆ ಸೇರಿಸುವ ಯತ್ನಗಳು ಭರದಿಂದ ನಡೆಯುತ್ತಿವೆಯೆಂದು ತಿಳಿದುಬಂದಿದೆಯಂತೆ.

S S S S

## ಕಾಸರಗೋಡು ಕೇರಳಕ್ಕೆ

ದಕ್ಷಿಣ ಕನ್ನಡದ ಕಾಸರಗೋಡು ತಾಲೂಕನ್ನು ಕೇರಳಕ್ಕೆ ಸೇರಿಸಲು ಬೋರ್ಡರ್ ಕಮಿಷನಿನವರು ಸಮ್ಮತಿಸಿದ್ದಾರೆಂದು ಸುದ್ದಿ.

S S S S

## ಸದಾಶಿವರಾಯರ ಪ್ರತಿಮೆ.

ಮಂಗಳೂರು ಮೈದಾನಿನಲ್ಲಿ ದಿವಂಗತ ಕಾರ್ನಾಡು ಸದಾಶಿವರಾಯರ ಬಿಳಿ ಶಿಲೆಯ ಪ್ರತಿಮೆಯನ್ನು ಮಾಡಿಸಿ ಸ್ಥಾಪಿಸುವ ಕುರಿತು ಪ್ರಬಲ ಯೋಜನೆಯನ್ನು ಮಂಗಳೂರು ಟೌನ್ ಕಾಂಗ್ರೆಸ್ ಕಮಿಟಿಯವರೂ, ನಗರಸಭೆಯವರೂ, ಮಾಡಲಾರಂಭಿಸಿರುವರೆಂದು ಸುದ್ದಿ ಹಬ್ಬಿಬಿಟ್ಟಿದೆ. ಇದಕ್ಕೆ ಪ್ರಾಂತಿಕ ಕಾಂಗ್ರೆಸ್ ಕಮಿಟಿಯವರು ರೂ. ೫೦೦ನ್ನು ಕೊಡಲು ನಿರ್ಣಯ ಮಾಡಲು ಸಭೆ ಸೇರುವರಂತೆ.

S S S S

## ಹೊಸ ಪತ್ರಿಕೆ.

ಗಾಂಧಿಜಿಯವರ ಕಾಂಗ್ರೆಸನ್ನು ಬಲಗೊಳಿಸುವ ಯೋಜನೆಯು ಜಾರಿಗೆ ಬಂದೊಡನೆಯೇ ಶ್ರೀ. ಹಿ. ರಾಮರಾಯ ಮಲ್ಯರು ''ಅಹಿಂಸೆ''ಯೆಂಬ ವಾರಪತ್ರಿಕೆಯನ್ನು ಹೊರಡಿಸುವರೆಂದು ಭಾವಿಸಲಾಗಿದೆಯಂತೆ.

S S S S

## ಹೊಸ ಪಾರ್ಲಿಮೆಂಟರಿ ಸೆಕ್ರೆಟರಿಯರು

ಮದ್ರಾಸ್ ಮಂತ್ರಿಮಂಡಲದಲ್ಲಿ ಖಾಲಿಯಾಗಿರುವ ಪಾರ್ಲಿಮೆಂಟರಿ ಸೆಕ್ರೆಟರಿಯ ಸ್ಥಾನಕ್ಕೆ ಮಂಗಳೂರಿನ ಹರಿಜನ ಧುರೀಣರಾದ ಶ್ರೀ. ಕೆ. ಈಶ್ವರ, ಎಮ್. ಎಲ್. ಎ. ಅವರನ್ನು ನೇಮಿಸಲಾಗುವದೆಂದು ಹೇಳಲಾರಂಭಿಸಿದ್ದಾರೆ.

S S S S

## ಮಿಶ್ರ ಮಂತ್ರಿಮಂಡಲ

ಸಿಂಧ ಪ್ರಾಂತ್ಯದಲ್ಲಿ ಕಾಂಗ್ರೆಸ್ ಮಿಶ್ರ ಮಂತ್ರಿಮಂಡಲವಾಗುವುದಂತೆ.

# ಜಗತ್ಪ್ರಸಿದ್ಧ ವ್ಯಕ್ತಿಗಳ ಮಹಾ ಮಡದಿಯರು!

**ಕಾರ್ಯ ಭಾರವನ್ನು ಹೊರುವ**
**ಕೆಲಸ ಮಡದಿಯರದು-**
**ಕೀರ್ತಿ ಹೊಂದುವ ಭಾರ**
**ಅವರ ಗಂಡಂದಿರದು**

*

## ಗಂಡಂದಿರು ವಿಜಯಿಗಳಾಗಬೇಕೆಂದೇ ಈ ನಿಸ್ವಾರ್ಥ ಮಡದಿಯರ ಆಶೆ

ಜಗತ್ತಿನ ಎಷ್ಟು ಮಹತ್ವದ ವ್ಯಕ್ತಿಯಾದರೂ ಅವನು ತನ್ನ ಮಮತೆಯ ಮಡದಿಯಾಡಿದ ಮಾತನ್ನು ಅಲ್ಲಗಳೆಯುವುದಿಲ್ಲ. ಚತುರರಾದ ಮಡದಿಯರು ತಮ್ಮ ಗಂಡಂದಿರ ಕಾರ್ಯಕಲಾಪಗಳಲ್ಲಿ ಪ್ರಾಮುಖ್ಯ ಭಾಗವನ್ನು ವಹಿಸಿ, ಅವರ ಕೀರ್ತಿ ಸಾಧನೆಯಲ್ಲಿ ಸಹ ಭಾಗಿನಿಯರಾಗುತ್ತಾರೆ. ಜಗತ್ತಿನ ಅದೆಷ್ಟೋ ಪ್ರಸಿದ್ಧ ಪುರುಷರು ತಮ್ಮ ಪ್ರಿಯ ಮಡದಿಯರ ಸಹಾಯದಿಂದ ಕೀರ್ತಿಯ ತುತ್ತತುದಿಗೇರಿದ್ದಾರೆ ಸಾಮ್ರಾಜ್ಯಗಳನ್ನು ಆಳಿದ್ದಾರೆ. ಮಾತ್ರವಲ್ಲ, ಇನ್ನು ಕೆಲವು ನಿದರ್ಶನಗಳನ್ನು ನೋಡಿದರ ಮಡದಿಯರಿಂದಲೇ ಹಲವು ಪ್ರಸಿದ್ಧ ಪುರುಷರ ಜೀವನವು ಕೆಟ್ಟು ಹೋಗಿರುವುದುಂಟು.

❖

ನಮ್ಮ ದೇಶದ ಮಹತ್ಪುರುಷರ ಜೀವನವನ್ನು ನೋಡುವುದಿದ್ದರೆ ಪಂಡಿತ ನೆಹರುಗಳ ವೀರ ಪತ್ನಿಯರಾದ ಕಮಲಾ ನೆಹರುರವರು ತನ್ನ ಗಂಡನ ಸಾಹಸಕೃತ್ಯಗಳಿಗೆ ಹೇಗೆ ನೆರವಾಗಿದ್ದಾರೆಂದು ನೆಹರುಗಳ ಆತ್ಮಕಥೆಯನ್ನೋದಿದರೆ ವ್ಯಕ್ತವಾಗುತ್ತದೆ.



**ಸತೀ ಮುಸ್ಸೋಲಿನಿ.**

ಪಾಶ್ಚಾತ್ಯ ರಾಷ್ಟ್ರಗಳ ಕಡೆಗೆ ನಮ್ಮ ದೃಷ್ಟಿಯನ್ನು ಹರಿಸಿದರೆ ನಮಗೆ ಯಾವ ಸ್ತ್ರೀಯೂ ಮೊದಲು ಕಾಣಿಸುವುದಿಲ್ಲ. ಆದರೆ ಪ್ರಕಟನೆಯ ಗೋಜಿಗೆ ಹೋಗದೆ ಅವರು ಶಾಂತವಾಗಿ ತಮ್ಮ ಗಂಡಂದಿರ ಕೆಲಸಕ್ಕೆ ನೆರವಾಗುತ್ತಾರೆ.

❖

ಇಟಲಿಯ ಸರ್ವಾಧಿಕಾರಿಯಾದ ಮುಸ್ಸೋಲಿನಿಯ ಮಡದಿಯ ಹೆಸರನ್ನು ಕೇಳುವುದು ಅತ್ಯಂತ ಅಪರೂಪವೆನ್ನಬೇಕಾಗಿದೆ. ಆಕೆಗೆ ತನ್ನ ಗಂಡನು ಯಾವ ಕೆಲಸಗಳನ್ನು ಮಾಡುತ್ತಿದ್ದಾನೆ ಎಂಬಿ: ಮೊದಲಾದ ಎಲ್ಲಾ ರಾಜಕೀಯ ರಹಸ್ಯಗಳು ಅರಿತಿವೆ. ಆದರೆ ಆಕೆಯು ರಾಜಕಾರಣದಲ್ಲಿ ತನ್ನ ಕೈಹಾಕುವಂತಿಲ್ಲ. ಸ್ತ್ರೀಯರಿಗೂ ಪುರುಷರಿಗೂ ಪ್ರತ್ಯೇಕ ಕಾರ್ಯಗಳಿವೆಯೆಂದು ಆಕೆಯ ವಿಶ್ವಾಸ. ಗಂಡನು ಮನೆಗೆ ಬಂದೊಡನೆ ಅವನ ಮನೋಗತಿಯನ್ನು ತಿಳಿದುಕೊಂಡು ಅದಕ್ಕನುಸಾರವಾಗಿ ವರ್ತಿಸಿ, ಅವನ ಮನೋಶಾಂತಿಯನ್ನು ಕಾಯುವುದು ಆಕೆಯ ಕೆಲಸ.

ಸತಿ ಮುಸ್ಸೋಲಿನಿಯು ಸ್ವತಃ ಪೇಟೆಗೆ ಹೋಗಿ ಬೇಕಾದ ತರಕಾರಿ ಕಾಯಿಪಲ್ಯ ಮೊದಲಾದುವು

ಗಳನ್ನು ತರುತ್ತಾಳೆ. ಮನೆಗೆಲಸದಲ್ಲಿ ಆಕೆಯು ತುಂಬಾ ಚತುರೆ. ತನ್ನ ಪಾಲಿನ ಕೆಲಸವನ್ನು ಯಶಸ್ವಿಯಾಗಿ ಮಾಡಬೇಕೆಂಬುದೇ ಆಕೆಯ ಧ್ಯೇಯ.

❖

ಎಂದಾದರೊಮ್ಮೆ ಮುಸ್ಸೋಲಿನಿಯು ವಿನೋದಕ್ಕಾಗಿ 'ಇಂದಿನ ಅಡಿಗೆಯೇನೂ ಒಳ್ಳೆಯದಾಗಿಲ್ಲ' ವುದಿದೆ. ರಾಷ್ಡೇಲ್ ಬವಿಲ್ಲದೆ 'ಪಾಕ ಶಾಸ್ತ್ರವು ನಗೆ ಚೆನ್ನಾಗಿ ತಿಳಿದಿದೆ. ಇನ್ನಾರೂ ನನಗೆ ಕಲಿಸಬೇಕಾಗಿಲ್ಲ'ವೆನ್ನುವುದುಂಟು.

❖

ಪ್ರಾತಃಕಾಲ ೬ ತಾಸಿನಿಂದ ರಾತ್ರಿ ಹತ್ತು ತಾಸಿನ ತನಕ ವಿವಿಧ ವಿಚಾರಗಳನ್ನು ಯೋಚಿಸಿ ಬಳಲಿ ಸುಣ್ಣವಾದ ಮುಸ್ಸೋಲಿನಿಯು ಮನೆಗೆ ಬಂದಾಗ ಅವನ ಮಡದಿ ರಾಷ್ಡೇಲಳು ಯೋಗ್ಯವಾದ ವಿಶ್ರಾಂತಿಯನ್ನೂ, ಉತ್ತಮವಾದ ಆಹಾರವನ್ನೂ ಒದಗಿಸುತ್ತಾಳೆ. ಹೀಗೆ ಮಾಡುವುದರಿಂದ ಅವನ ವೃದ್ಧಾಪ್ಯ ಜೀವನವು ಸುಗಮವಾಗಿ ನಡೆಯುತ್ತಿದೆ; ತನ್ನ ೫೭ನೆ ವಯಸ್ಸಿನಲ್ಲಿದ್ದರೂ ಮುಸ್ಸೋಲಿನಿಯು ಇನ್ನೂ ತರುಣರಂತೆ ಉತ್ಸುಕತೆಯಿಂದ ತುಂಬಿ ತುಳುಕುತ್ತಿದ್ದಾನೆ. ಒಮ್ಮೆಯಾದರೂ ಅವನು ಅಸ್ವಸ್ಥತೆಗೆ ತುತ್ತಾದುದಿಲ್ಲ.

❖

ಜನಾಂಗ ಸಭೆಯ ಈಗಿನ ಅಧ್ಯಕ್ಷರಾದ ಆಗಾಖಾನರು ಒಮ್ಮೆ ಪ್ಯಾರಿಸಿನ ಒಂದು ಹೋಟೆಲಿನಲ್ಲಿ ಊಟಕ್ಕಾಗಿ ತೆರಳಿದರು. ಅಲ್ಲಿ ಅಡಿಗೆ ಮಾಡುತ್ತಿದ್ದ ಸೂಯ್ಸಲ್ ಕಾರ್ಸನ್ ಎಂಬ ಫ್ರೆಂಚ್ ತರುಣಿಯು ಅವರಿಗೆ ಸಿಹಿಯಾದ ರೊಟ್ಟಿಗಳನ್ನು ಮಾಡಿ ಬಡಿಸಿದಳು. ರೊಟ್ಟಿಯನ್ನು ತಿನ್ನುವಾಗ ಆಗಾಖಾನರು—'ಹೋ, ರೊಟ್ಟಿ ಬಹಳ ಚೆನ್ನಾಗಿದೆ' ಯೆಂದರಂತೆ. ಇಷ್ಟು ಹೇಳಿದ್ದೇ ತಡ, ಕಾರನ್ಸ್ ಇನ್ನೂ ಕೆಲವು ರೊಟ್ಟಿಗಳನ್ನು ಬಡಿಸಿದಳು. ನೋಡಲಿಕ್ಕೆ ಕಾರನ್ಸ್ ರೂಪವತಿ ತರುಣಿ. ಆಗಾಖಾನರು ಆಕೆಗೆ ಮನಸೋತು



**ಸತೀ ರೂಸವೆಲ್ಟ್.**

ಬಿಟ್ಟರು. "ನನ್ನನ್ನು ವರಿಸುವೆಯಾ" ಎಂದು ಕೇಳಿಯೇ ಬಿಟ್ಟರವರು. ಅತ್ಯಂತ ಧನಿಕರನ್ನು ವರಿಸಲು ಅಡಿಗೆ ಮನೆಯ ಹುಡುಗಿಗೇನು ಬೇಸರ? ಪೂರ್ಣ ಸಮ್ಮತಿ ಕೊಟ್ಟಳಾಕೆ. ಖೋಜಾ ಪಂಗಡದ ಮುಸ್ಲಿಮರ ಜಗದ್ಗುರುಗಳಾದ ಆಗಾಖಾನರ ಈಗಿನ ಮಡದಿ ಅಂದು ಪ್ಯಾರಿಸಿನಲ್ಲಿ ಸಿಹಿ ರೊಟ್ಟಿಗಳನ್ನು ಮಾಡುತ್ತಿದ್ದ ಸೂಯಲ್ ಕಾರ್ಸನ್. ಇಂದು ಆಗಾಖಾನರ ಬೇಗಮಳಾಗಿ ಮಹಾ ಸಿರಿವಂತೆಯಾಗಿದ್ದಾಳೆ.

❖

ಜರ್ಮನಿಯ ಪ್ರಾಮುಖ್ಯ ರಾಜಕೀಯ ಧುರಂಧರರಲ್ಲೊಬ್ಬನಾದ ಜನರಲ್ ಗೋರಿಂಗನು ಸಿನೆಮದಲ್ಲಿ ಅಭಿನಯಿಸುತ್ತಿದ್ದ ಸುಂದರಿಯೊಬ್ಬಳನ್ನು ಮದುವೆಯಾದನು. ಈಕೆಯು ಅವನ ಶರೀರ ಪೋಷಣೆ ಮಾಡುವುದರಿಂದಲೇ ಈಗಲೂ ಅವನ ಮಡದಿಯಾಗಿರುತ್ತಾಳೆ. ತನ್ನ ಗಂಡನಿಗೆ ಬೇಕಾದ ಎಲ್ಲಾ ಸೌಕರ್ಯಗಳನ್ನೊದಗಿಸಿ ಅವನ ಗೃಹ ಜೀವನವು ಸುಖಮಯವಾಗುವಂತೆ ಮಾಡುವುದೊಂದೇ ಈಕೆಯ ಕೆಲಸ.

❖

ಇಷ್ಟು ಮನೆಗಳಲ್ಲಿ ಗಂಡಂದಿರ ಜೀವನವನ್ನು ಯಶಸ್ವಿಯಾಗಿ ಮಾಡುವ ಸ್ತ್ರೀಯರ ಕುರಿತಾಯಿತು. ಇನ್ನು ರಾಜಕಾರಣದಲ್ಲಿ ಪ್ರತ್ಯಕ್ಷವಾಗಿ ಭಾಗ ವಹಿಸಿದ ಹಲವು ಧೀರ ಮಹಿಳೆಯರಿದ್ದಾರೆ.

❖

ಕರ್ನಲ್ ಬ್ಯಾಟಿಸ್ಟ್ ಎಂಬ ಮಹಾಶಯನು ಅಮೇರಿಕದ ಸಮೀಪದಲ್ಲಿರುವ ಕ್ಯೂಬಾ ಎಂಬ ದ್ವೀಪದ ಸೈನ್ಯಾಧಿಕಾರಿ. ಇವನನ್ನು ಪ್ರಾರಂಭದಲ್ಲಿ ಇತರರು ಮೆಚ್ಚುತ್ತಿದ್ದಿಲ್ಲ, ಮಾತ್ರವಲ್ಲದೆ ಅವನನ್ನು ಹೇಗಾದರೂ ಪದಚ್ಯುತನನ್ನಾಗಿ ಮಾಡಬೇಕೆಂದು ಹಲವರು ಯತ್ನಿಸುತ್ತಿದ್ದರು. ಗಂಡನ ಕೀರ್ತಿಗೆ ಕೊಡಲಿ ಪ್ರಯೋಗವಾಗಬಾರದೆಂದು ಕರ್ನಲ್ ಬ್ಯಾಟಿಸ್ಟನ ಸುಂದರಿಯಾದ ಮಡದಿ ಅವನ ವಿರೋಧಿಗಳ ಸ್ನೇಹಾಚಾರವನ್ನು ಮಾಡಿಕೊಂಡು ತನ್ನ ರೂಪಲಾವಣ್ಯಗಳನ್ನು ಅವರಿಗೆ ಮಾರಿ ಗಂಡನನ್ನು ವಿರೋಧಿಸದಂತೆ ಮಾಡಿ

ದಳು. ಈಕೆಯ ರೂಪಕ್ಕಾಗಿ ಬ್ಯಾಟಿಸ್ಟನ ಅನೇಕ ವಿರೋಧಿಗಳು ಅವನ ಮಿತ್ರರಾಗಿ ಪರಿಣಮಿಸಿದರು. ಆದರೆ ಆಕೆಯು ತನ್ನ ಗಂಡನಿಗಾಗಿ ಮಾತ್ರ ಸೌಂದರ್ಯವನ್ನು ಮಾರಿದ್ದಲ್ಲದೆ ಅನ್ಯಥಾ ಇಲ್ಲ. ಅವನಲ್ಲಿ ಆಕೆಗಿದ್ದ ಗೌರವಾದರಗಳು ಎಳ್ಳನಿತೂ ಕಡಿಮೆಯಾಗಲಿಲ್ಲ.

ಇಂದು ಚೀನದ ಜನರನ್ನು ಹುರಿದುಂಬಿಸಿ ಜಪಾನ್ ಸಾಮ್ರಾಜ್ಯಶಾಹಿಯನ್ನು ಯಶಸ್ವಿಯಾಗಿ ವಿರೋಧಿಸುತ್ತಿರುವ ಚೀನದ ವಿಧಾತನಾದ ಶಾಂಗ್ ಕೈಶೇಕರ ವ್ಯಕ್ತಿತ್ವದ ಹಿಂದಿರುವ ಪ್ರಬಲ ಶಕ್ತಿಯೆಂದರೆ ಅವರ ಮಡದಿಯಾದ ಸತೀ ಶಾಂಗ್‌ಕೈಶೇಕ್. ಅಮೇರಿಕದಲ್ಲಿ ವಿದ್ಯಾಭ್ಯಾಸವನ್ನು ಪಡೆದು ತನ್ನ ಗಂಡನ ಮಹತ್ವದ ಕಾರ್ಯದರ್ಶಿಯಾಗಿ ಕೆಲಸಮಾಡುತ್ತಿರುವ ಅವರ ಸಾಹಸವೇನೂ ಸಾಮಾನ್ಯವಾದುದಲ್ಲ.

ಅಧ್ಯಕ್ಷರಾದ ರೂಸ್‌ವೆಲ್ಟರಿಗೆ ಇಂದಿನ ಕೀರ್ತಿಯನ್ನು ಗಳಿಸಿಕೊಟ್ಟ ಖ್ಯಾತಿಯು ಅವರ ಮಡದಿಗೆ ಸಿಲ್ಲುತ್ತದೆ. ರೂಸ್ ವೆಲ್ಟರು ಬಾಲ್ಯಾಪಘಾತಕ್ಕೊಳಗಾದಂದಿನಿಂದ ಅವರ ಲಾಲನೆ ಪಾಲನೆಯನ್ನು ದಕ್ಷತೆಯಿಂದ ವಹಿಸಿ ಇಂದಿನ ಪ್ರಜಾಸತ್ತಾತ್ಮಕ ಅಮೇರಿಕದ ಅಧ್ಯಕ್ಷರನ್ನಾಗಿ ಮಾಡಿದ ವೀರ ಮಹಿಳೆಯೇ ಅವರ ಪತ್ನಿ. ಸಾರ್ವಜನಿಕವಾಗಿ ಭಾಷಣ ಮಾಡುವುದು, ಪತ್ರಿಕೆಗಳಿಗೆ ಹೇಳಿಕೆಗಳನ್ನು ಕೊಡುವುದು, ರಾಜಕಾರಣದಲ್ಲಿ ಪ್ರಾಮುಖ್ಯ ಭಾಗ ವಹಿಸಿ ಗಂಡನಿಗೆ ಉಪಯುಕ್ತ ಸಲಹೆಗಳನ್ನೀಯುವುದು, ಇವೇ ಮೊದಲಾದ ಕೆಲಸಗಳನ್ನು ಆಕೆಯು ತನ್ನ ಗಂಡನಿಗಾಗಿ ಮಾಡುತ್ತಾಳೆ. ರೂಸ್ ವೆಲ್ಟರ ವ್ಯಕ್ತಿತ್ವದ ಆಧಾರ ಸ್ತಂಭವೋದಿದ್ದರೆ ಅವರ ಮಡದಿಯೆಂದರೆ ಅತಿಶಯೋಕ್ತಿಯೆನಿಸದು.

ಆಧುನಿಕ ರಷ್ಯದ ಸ್ಥಾಪನಾಚಾರ್ಯನಾದ ಲೆನಿನನ ಮಡದಿಯು ಅವನ ಜೀವನದ ಪ್ರಾಮುಖ್ಯಾಂಶವಾಗಿದ್ದಳು. ನಿರಾಶನಾದಾಗ ಅವನನ್ನು ಹುರಿದುಂಬಿಸಿ, ಬೇಸರದಲ್ಲಿದ್ದಾಗ ಸಂತೈಸಿ, ಜಟಿಲ ಸಮಸ್ಯೆಗಳನ್ನು ಬಿಡಿಸುವುದರಲ್ಲಿ ಸಹಭಾಗಿನಿಯಾಗಿ, ಸತಿ ಲೆನಿನಳು ತನ್ನ ಗಂಡನ ಅಂತಿಮ ಕಾಲದ ವರೆಗೂ ಜೀವಿಸಿದಳು. ಈಗಲೂ ಆಕೆಯು ತನ್ನ ಪಾಲಿನ ಸೇವೆಯನ್ನು ರಷ್ಯದಲ್ಲಿ ಮಾಡುತ್ತಿದ್ದಾಳೆ.

ಇತ್ತೀಚೆಗೆ ತೀರಿಕೊಂಡ ಸ್ಟಾಲಿನನ ಮುದ್ದು ಮಡದಿಯು ಅವನ ರಾಜಕೀಯ ಜೀವನದ ಆಶಾಜ್ಯೋತಿಯಾಗಿದ್ದಳು. ಅವಳು ಹೇಳಿದ ಮಾತುಗಳನ್ನು ಅವನು ಒಮ್ಮೆಯಾದರೂ ಮೀರುತ್ತಿದ್ದಿಲ್ಲ. ಅವಳ ಮರಣಾನಂತರ ಮದುವೆಯಾಗುವುದಿಲ್ಲವೆಂದು ಸ್ಟಾಲಿನನು ಶಪಥ ಮಾಡಿಕೊಂಡಂತಿದೆ.

ಬ್ರಿಟನಿನ ಪ್ರಧಾನರಾದ ಚೇಂಬರ್ಲೇನರ ಮಡದಿಯೂ ಅವರ ಯಶಸ್ವಿಗೆ ಮೂಲಕಾರಣಳು. ಚೇಂಬರ್ಲೇನರು ಬಹಮ್ ದ್ವೀಪಗಳಿಗೆ ಹೋಗಿ ಕಾಡುಗಳನ್ನು ಕಡಿಸುವ ಉದ್ಯೋಗದಲ್ಲಿ ನಿರತರಾಗಿದ್ದಾಗ ಅವರ ಪತ್ನಿಯು ಅವರೊಂದಿಗೆ ತೆರಳಿ ಉಪಯುಕ್ತ ಸಲಹೆಗಳನ್ನಿತ್ತಿದ್ದಳು. ಇಂದು ಕೂಡಾ ಆಕೆಯು ಚೇಂಬರ್ಲೇನರ ರಾಜಕಾರಣದ ಹಿಂದಿರುವ ಆದಿ ಶಕ್ತಿಯಾಗಿದ್ದಾಳೆ.

ಪ್ರತಿಯೋರ್ವ ಪತ್ನಿಯೂ ಹೀಗೆ ತಮ್ಮ ಗಂಡಂದಿರ ಕರ್ತವ್ಯದಲ್ಲಿ ಭಾಗಿಗಳಾದರೆ ಗಂಡಂದಿರ ಜೀವನವು ಯಶಸ್ವಿಯಾಗಲಾರದೆ?

---

## ಪತ್ರವ್ಯವಹಾರ

**ಅಂತರಂಗದ ಸಂಪಾದಕರಲ್ಲಿ–**

ಸ್ವಾಮಿ,

ಕರ್ನಾಟಕದಲ್ಲಿ ಈಗ ಕನ್ನಡ ಚಿತ್ರಗಳನ್ನೂ ತಯಾರಿಸುವ ಹಲವು ಕಂಪೆನಿಗಳಿವೆಯೆಂದು ನನ್ನ ನಂಬುಗೆ. ಈ ಕಂಪೆನಿಗಳು ಅರೆಜೀವಾವಸ್ಥೆಯಲ್ಲಿರುವುದರ ಬದಲು ಸಮಸ್ತ ಕರ್ನಾಟಕದಲ್ಲಿರುವ ಎಲ್ಲಾ ಚಲಚ್ಚಿತ್ರಾಭಿಮಾನಿಗಳು ಒಂದುಗೂಡಿ ಈಗಿರುವ ಕಂಪೆನಿಗಳನ್ನೂ ಒಂದು ಮಾಡಿ, ಕರ್ನಾಟಕದ ಎಲ್ಲಾ ಭಾಗಗಳ ಜನರಿಗೆ ಸಮಾನ ಸವಲತ್ತುಗಳನ್ನು ಕೊಡುತ್ತಾ ಬಂದರೆ, ನಮ್ಮ ಕರ್ನಾಟಕದಲ್ಲಿ ಗಣನೀಯವಾದೊಂದು ವಾಕ್ಚಲನಚಿತ್ರ ಸಂಸ್ಥೆಯನ್ನು ತಯಾರಿಸಬಹುದಾಗಿದೆ. ದುರ್ಗಮಾವಸ್ಥೆಯಲ್ಲಿ ಕಂಪೆನಿಗಳನ್ನು ಪ್ರಾರಂಭಿಸುವುದರಿಂದ ಅವುಗಳಿಗೆ ಬಾಲಗ್ರಹವು ತಗಲುವುದು ಖಂಡಿತವಾದುದರಿಂದ ಈ ಕೈಗಾರಿಕೆಯಲ್ಲಿಯೂ ಏಕೀಕರಣ ಮಾಡಿದರೆ ಯೋಗ್ಯವಾದ ಚಲಚ್ಚಿತ್ರ ಕಂಪೆನಿಯ ಅಭಾವವನ್ನು ಕರ್ನಾಟಕದಿಂದ ದೂರಗೊಳಿಸಿದಂತಾಗಬಹುದು.

**ಶಿವರಾಮು,** ಬೆಂಗಳೂರು



# ಷೋಕೀ ಜಗತ್ತಿನ ಝೋಕೀ ಪುರಾಣ

## ಹೋರ್ ಬೆಲೀಷರ ಯಾತ್ರೆ.

ಬ್ರಿಟನಿನ ಯುದ್ಧಮಂತ್ರಿಗಳಾದ ಹೋರ್ ಬೆಲೀಷರು ರಹಸ್ಯವಾಗಿ ಫ್ರಾನ್ಸಿಗೆ ಹೋಗಿ ಫ್ರಾನ್ಸ್, ಜೆಕೊಸ್ಲೊವೇಕಿಯ ಮತ್ತು ರಷ್ಯಗಳೊಳಗಿನ ಮೈತ್ರಿಯನ್ನು ಕಡಿದುಹಾಕಲೆತ್ನಿಸಿದರಂತೆ. ಫ್ರೆಂಚರೊಡನೆ ಅವರು ವಾದಿಸಿದ ವಿಷಯಗಳು ಬಹಳ ಸ್ವಾರಸ್ಯವಾಗಿವೆ. ರಷ್ಯದ ಸೈನ್ಯವು ಏನೂ ಪ್ರಯೋಜನವಿಲ್ಲ. ಬ್ರಿಟಿಷ್ ಸೈನ್ಯದ ಶಕ್ತಿಯು ಅತ್ಯಂತ ಪ್ರಬಲವಾಗಿರುವುದರಿಂದ ಫ್ರಾನ್ಸು ರಷ್ಯದ ಮೇಲೆ ಹೊಂದಿಕೊಂಡಿರಬೇಕಾಗಿಲ್ಲ! ಫ್ರೆಂಚರಿಗೆ ದಿನ ದಿನದ ವಾರ್ತೆಯು ರಷ್ಯದಿಂದ ಬರುತ್ತಿರುವುದರಿಂದ "ಅದು ಹಾಗಿಲ್ಲ ಬೆಲಿಷರೇ, ಅವರ ಸೈನ್ಯವು ಪ್ರಬಲವಾಗಿದೆ, ಆದರೆ ನಿಮ್ಮ ಗುಟ್ಟುಗಳೆಲ್ಲಾ ರಟ್ಟಾಗುತ್ತಿವೆ" ಯೆಂದರಂತೆ. ನರಿಯೊಡನೆ ಕುಂದಿಲಿಯು ಚಾಣಾಕ್ಷತೆ ನಡಿಸಿದಂತಾಯಿತು ಹೋರ್‌ಬೆಲೀಷರ ಪಾಡು!

* * *

## ಹಿಟ್ಲರನ ಧ್ಯೇಯ

ಜೆಕೊಸ್ಲೊವೇಕಿಯವನ್ನು ಹಲವು ಭಾಗಗಳಾಗಿ ವಿಂಗಡಿಸಿ, ಬಲಶೂನ್ಯವಾಗಿ ಮಾಡುವುದೇ ಹಿಟ್ಲರನ ಧ್ಯೇಯವಂತೆ. ಈ ಸತ್ಕಾರ್ಯಕ್ಕೆ ಬ್ರಿಟಿಷರ ಪೂರ್ಣ ಬೆಂಬಲ. ಈ ಬೆಂಬಲವನ್ನು ಬ್ರಿಟಿಷ್ ಅಜ್ಜಿಯು ಬೆದರಿ ಕೊಟ್ಟಿದ್ದಲ್ಲದೆ ಅನ್ಯಥಾ ಅಲ್ಲ. ಜೆಕೊಸ್ಲೊವೇಕಿಯವು ಬಲಶೂನ್ಯವಾದರೆ ಎಲ್ಲಾ ರಾಷ್ಟ್ರಗಳಿಗೆ ತೊಂದರೆಯಾಗುವುದರಿಂದ ಇದಕ್ಕೆ ಅವುಗಳ ಹಾರ್ದಿಕ ಬೆಂಬಲವಿಲ್ಲ. ಅದಂತಿರುವಾಗ ಹಿಟ್ಲರನು ಫ್ರಾನ್ಸಿನಲ್ಲಿ ಅಂತಃಕಲಹವನ್ನು ತಂದೊಡ್ಡಲು ಸಾಧ್ಯವಾದ ಪ್ರಚಾರ ಕಾರ್ಯವನ್ನು ನಡೆಸುತ್ತಿದ್ದಾನೆ. ಅಲ್ಲಿಯೂ ಅಲ್ಪ ಸಂಖ್ಯಾಕರದೇ ಪ್ರಶ್ನೆ. ಉದಾಹರಣೆಗಾಗಿ ಬ್ರಿಟಾನಿ ವಿಭಾಗದಲ್ಲಿ ಫ್ರಾನ್ಸಿನ ಜರ್ಮನ್ ಪ್ರಜೆಗಳು ಈಗಾಗಲೆ ತಮ್ಮ ಗೋಡೆಗಳಲ್ಲಿ "ಬ್ರಿಟಾನಿಯು ಸ್ವತಂತ್ರವಾಗಬೇಕು" ಎಂಬ ನೋಟೀಸುಗಳನ್ನು ಹಚ್ಚಿಸಿರುವರಂತೆ. ಡಾ। ಗೇಬಲ್ಸರು ಫ್ರಾನ್ಸಿಗೆ ವಿರುದ್ಧವಾದ ಸುಳ್ಳು ಕತೆಗಳನ್ನು ಈಗಾಗಲೇ ಹಬ್ಬಿಸುತ್ತಿದ್ದಾರೆ. ಜರ್ಮನಿಯ ಹೊಸ ಯುದ್ಧವಿಧಾನ ಇದು!

* * *

## ಇಟಲಿಯ ನವನಿರ್ಧಾರ.

"ಎಲ್ಲರೂ ನೆಟ್ಟಗಾದ ಗೆರೆಗಳಲ್ಲಿ ಬರೆಯಬೇಕು" —"ಯಾರೂ ನೆಕ್‌ಟೈಗಳನ್ನು ಧರಿಸಬಾರದು" ಎಂಬೆರಡು ಠರಾವುಗಳು ಫ್ಯಾಸಿಸ್ಟ್ ಗ್ರೇಂಡ್ ಕೌನ್ಸಿಲಿನಲ್ಲಾಗಿವೆಯಂತೆ. ಮೊದಲನೆಯ ಠರಾವು ದೃಷ್ಟಿಯನ್ನು ಕೆಡಿಸದಂತೆ. ಎರಡನೆಯದಾದ ನೆಕ್‌ಟ್ಯಾಗಳ ಠರಾವು ಫ್ರೆಂಚರ ಅನುಕರಣೆ ಮತ್ತು ರಕ್ತಸಂಚಾರಕ್ಕೆ ತೊಡಕುಂಟಾಗುವುದರಿಂದ ಎಂದು ಕೌನ್ಸಿಲು ವಿವರಿಸಿದೆ. ವಿಚಿತ್ರ ಜಗತ್ತಿನ ವಿಚಿತ್ರ ಠರಾವಿದು!

* * *

## ಜಪಾನಿನ ಒಲಿಯಂಪಿಕ್ಸ್!

೧೯೪೦ರಲ್ಲಿ ಜಪಾನಿನಲ್ಲಿ ಜರಗಬೇಕಾಗಿದ್ದ ಒಲಿಯಂಪಿಕ್ ಆಟಗಳನ್ನು ಯಾವ ವಿವರಣೆಯೂ ಇಲ್ಲದೆ ಜಪಾನಿನವರು ತಮ್ಮಲ್ಲಾಗುವುದಿಲ್ಲವೆಂದುದರಿಂದ ಜಪಾನಿನ ಪ್ರಮುಖ ವರ್ತಕರು ಬಹಳ ಬೇಸರವನ್ನು ವ್ಯಕ್ತಪಡಿಸಿದ್ದಾರೆ. ಈ ಆಟಗಳಿಂದಾಗಿ ಜಗತ್ತಿನ ಎಲ್ಲಾ ಭಾಗಗಳಿಂದ ಜನರು ಜಪಾನಿಗೆ ಬರಲಿದ್ದುದರಿಂದ ಅಲ್ಲಿಯ ವರ್ತಕರಿಗೆ ಮಿಲಿಯಗಟ್ಟಲೆ ನಷ್ಟವಾಗಿದೆಯೆಂದು ಭಾವಿಸಲಾಗಿದೆ. ಜಪಾನ್ ಸರಕಾರದ ಭಂಡಾರವು ಬರಿದಾದುದರಿಂದ ಈ ಆಟಗಳನ್ನು ತೆಗೆದುಹಾಕಿದರೆಂದು ಅಮೇರಿಕದ ಪತ್ರಿಕೆಗಳನ್ನುತ್ತಿವೆ. ಜಪಾನಿನ ಜನರು ವಿಚಿತ್ರಮನೋವೃತ್ತಿಯವರಾಗಿರುವುದರಿಂದ ಇದೊಂದೇ ನಿದರ್ಶನದಿಂದ ಈಗಿನ ಸೈನಿಕ ಸರಕಾರವು ಮರೆಪಾಲಾಗಲು ಸಾಧ್ಯವಿದೆಯಂತೆ.

ಒಳಗೂ ಯುದ್ಧ, ಹೊರಗೂ ಯುದ್ಧವೆಂದಾದರೆ ಜಪಾನು ದೊಡ್ಡ ಒಲಿಯಂಪಿಕ್ ಆಟ ನಡೆಸಿದಂತಾಗಲಾರದೆ?

## ಹೊಸ ಕೃಷ್ಣ.

ಸಿಂಧ ಪ್ರಾಂತ್ಯದ ಹೈದರಾಬಾದಿನಲ್ಲಿ ಮುಡದಿಯರು ಮುಷ್ಕರ ಮಾಡಿದರಷ್ಟೆ. ಆ ಕುರಿತು "ಸಿಂಧ ಒಬ್ಸರ್ವರ್" ಪತ್ರಿಕೆಯ ವಿಶೇಷ ಪ್ರತಿನಿಧಿಗಳು ಬರೆದಿರುವ ಸಂಗತಿಯು ಸ್ವಾರಸ್ಯವಾಗಿದೆ.

೧೫೦ ಸ್ತ್ರೀಯರು ತಮ್ಮ ಗಂಡಂದಿರನ್ನು ಬಿಟ್ಟು ಭಾಯಿಲೇಖರಾಜರ ಓಂ ಮಂಡಲಿಯನ್ನು ಸೇರಿದ್ದಾರೆ. ಈ ಸಂಸ್ಥೆಯ ಅವತಾರ ಪುರುಷರಾದ "ಆಧುನಿಕ ಕೃಷ್ಣ"ರು ಬಹಳ ವೈಭವದ ಬಟ್ಟೆಗಳನ್ನು ಧರಿಸುತ್ತಾರೆ. ಮಧುರವಾದ ಹಾಲು, ಉತ್ತಮವಾದ ಹಣ್ಣುಗಳನ್ನು ತಿನ್ನುತ್ತಾರೆ. ಭವ್ಯವಾದ ಮಂದಿರದಲ್ಲಿ ಹಾಸಿಗೆ ತಲೆದಿಂಬುಗಳ ಮೇಲೊರಗುತ್ತಾರೆ. ಅವರು ನೋಡಲು ಸುಂದರರಾಗಿದ್ದಾರೆ.

* * *

## ಇನ್ನೊಂದು ಕೃಷ್ಣ ಮೂರ್ತಿ.

ಅಮೇರಿಕದಲ್ಲಿ ಜೆ. ಕೃಷ್ಣ ಮೂರ್ತಿಯವರು ಹೇಟು ಬೂಟುಗಳನ್ನು ಹಾಕಿ

ಕೊಂಡು ಧರ್ಮವನ್ನು ಘೋಷಿಸಿದಂತೆ ಈ ಆಧುನಿಕ ಶ್ರೀ ಕೃಷ್ಣನು ತನ್ನೆಡೆಗೆ ಸಿಂಧ ಪ್ರಾಂತ್ಯದ ಮಹಿಳೆಯರನ್ನು ಆಕರ್ಷಿಸಿಕೊಂಡಿದ್ದಾನೆ.

* * *

## ಮದುವೆಯಾದ ಕೃಷ್ಣ.

ಸಿಂಧದಲ್ಲುದಯಿಸಿದ ಈ "ಶ್ರೀಕೃಷ್ಣ"ನಿಗೆ ಒಬ್ಬ ಮಗನಿದ್ದಾನೆ. ಈ ಮಹಾಶಯನು ತನ್ನ ಮಡದಿಯೊಂದಿಗೆ ತುರಿಯಾಶ್ರಮದಲ್ಲಿದ್ದಾನೆ. ಇವನ ಪುತ್ರಿಯರಿಗೂ, ಮಗನಿಗೂ ಮದುವೆಯಾಗಿದೆ. ಅವನ ಸೊಸೆ ಮತ್ತು ಅಳಿಯಂದಿರೇ ಓಂ ಮಂಡಲಿಗೆ ಮೊತ್ತಮೊದಲು ಸೇರಿದವರು. ಭಾಯಿ ಲೇಖರಾಜರ ಬಳಿಕ ದೊಡ್ಡ ಭಕ್ತೆಯೆಂದರೆ ಹತ್ತೊಂಭತ್ತು ವರುಷದ ಅವರ ಸೊಸೆ!



ಮಾಸ್ತು:– ಏನೋ, ಕಾಗದ ಕೆಳಗೆ ಬಿದ್ದರೂ ಮೇಲೆ ನೋಡಿ ಏನು ಟೈಪ್ ಮಾಡುತ್ತಿಯೋ, ಬೆಪ್ಪ?

ವಿದ್ಯಾರ್ಥಿ:-ಟೈಪ್ ಮಾಡುವಾಗ ಮೇಲೆ ನೋಡಿಕೊಂಡಿರಬೇಕೆಂದು ನೀವು ಹೇಳಿಲ್ವೇ ಸಾರ್?

* * *

## ಪತ್ರಿಕೋದ್ಯಮಿಗಳಿಗೆ ಭಕ್ತಿಯ ಬೋಧೆ.

ಒಬ್ಬ ಪತ್ರಿಕೋದ್ಯಮಿಗಳು ಈ ಜವ್ವನೆಯ ಬಳಿಗೆ ಹೋಗಿ ಓಂ ಮಂಡಲಿಯ ರಹಸ್ಯವೇನೆಂದು ಕೇಳಿದರಂತೆ. ಆ "ಗೋಪಿ"ಯು ಸರಳ ಸ್ವಭಾವದ, ಆಭರಣಗಳಿಲ್ಲದ ತನ್ನ ತನುವನ್ನು ಬಳುಕಿಸಿ ಭಕ್ತಿಯ ಚಾಕಚಕ್ಯತೆಯನ್ನು ಪ್ರದರ್ಶಿಸಿ, ಪತ್ರಿಕೋದ್ಯಮಿಯೂ ಭಜನೆಯಲ್ಲಿ ಸೇರುವಂತೆ ಯತ್ನಿಸಿದರೂ ಈ ಮಹಾಶಯನಿಗೆ ವಾರ್ತೆಯು ಬೇಕಾಗಿದ್ದರಿಂದ ಅದು ನಿಷ್ಫಲವಾಯಿತು. ಪ್ರತಿ ದಿನ ಬೆಳಿಗ್ಗೆ ಗಂಡಂದಿರ ಸೈನ್ಯಾಧಿಪತಿಯು ಮಂಡಲದ ಬಳಿಯಲ್ಲಿ ತಿರುಗುತ್ತಾನೆ. ಮುಷ್ಕರ ಮಾಡಿದ ಮಡದಿಯರ ಮುಂದಾಳು ಕೂಡಾ ಅಲ್ಲಿಯೇ ತಿರುಗುವನಂತೆ. ಭಾಗ್ಯವಶಾತ್ ಇಷ್ಟರ ತನಕ ಘರ್ಷಣೆಯಾಗಲಿಲ್ಲ!

* * *

## ಪೋಲೀಸರು ಕೈಹಾಕುವುದಿಲ್ಲ!

ಈ ನವೀನ ಗೃಹಕಲಹದಲ್ಲಿ ಪೋಲೀಸರು ಕೈಹಾಕಲೊಪ್ಪುವುದಿಲ್ಲ. ಚಿಂತಕರು ಈ ಚಳವಳವನ್ನು ಬೇರೆಯೇ ದೃಷ್ಟಿಯಲ್ಲಿ ಕಾಣುತ್ತಿದ್ದಾರೆ. ಈಗಿನ ವಿವಾಹ ಪದ್ಧತಿಯು ಕಾಲಕ್ಕೆ ಸರಿಯಾಗಿಲ್ಲದಿರುವುದರಿಂದ ಅವರು ಅದನ್ನು ಮುರಿದೊಗೆಯಲು ಈ ಹೊಸ ಉಪಾಯವನ್ನು ಮಾಡಿದ್ದಾರೆಂದು ಅವರ ಅಂಬೋಣ. ಇಂತಹ ಒಂದು ಮುಷ್ಕರವು ಬುದ್ಧನ ಕಾಲದಲ್ಲೂ ನಡೆದಿರುವುದು ಚರಿತ್ರೆಯನ್ನೋದಿದವರಿಗೆ ತಿಳಿಯಬಹುದು. ಹೈದರಾಬಾದಿನ ಮುಷ್ಕರವು ಕೃಷ್ಣ ತತ್ವದಿಂದುಂಟಾಯಿತೋ ಅಥವಾ ಬುದ್ಧ ತತ್ವದಿಂದುಂಟಾಯಿತೋ ಎಂದು ತಿಳಿದುಬಂದಿಲ್ಲ.

* * *

## ವಿವಾಹ ಪದ್ಧತಿಯಲ್ಲಿ ಸುಧಾರಣೆಯಾಗಬೇಕು

ಈ ಮುಷ್ಕರದಿಂದ ಒಂದು ವಿಷಯವು ಸ್ಪಷ್ಟವಾಗುತ್ತದೆ. ಬುದ್ಧನ ಕಾಲದಲ್ಲಿಯೂ ಮಹಮ್ಮದೀಯರ ಕಾಲದಲ್ಲಿಯೂ ವಿವಾಹ ಸಂಬಂಧದ ಕಟ್ಟು ಕಟ್ಟಳೆಗಳು ಮತ್ತಷ್ಟು ಬಿಗಿಯಲ್ಪಟ್ಟಿದ್ದುವು. ಅಂದಿನಿಂದ ನಡೆಯುತ್ತಾ ಬಂದಿರುವ ಈಗಿನ ವಿವಾಹ ಪದ್ಧತಿಯಲ್ಲಿ ಸ್ತ್ರೀಯರಿಗೂ ಪುರುಷರಿಗೂ ಪೂರ್ಣ ಸಮಾಧಾನವಿಲ್ಲದಾಗಿದೆ. ಆದುದರಿಂದ "ಓಂ ಮಂಡಲಿ"ಯು ಆ ಅಸಮಾಧಾನವನ್ನು ಎತ್ತಿ ತೋರಿಸಿದಂತಾಗುತ್ತಿದೆ.

* * *

## ಬೇಡವಾದ ಮಗು!

"ತಂದೆಯಿಲ್ಲದ ಮಗು ಇರುವುದು ಹೊಸತಾದುದಲ್ಲ. ಉಪನಿಷತ್ತುಗಳ ಕಾಲದಲ್ಲಿಯೂ ಬೇಡವಾದ ಮಕ್ಕಳಿದ್ದ ನಿದರ್ಶನಗಳು ಹಲವಿವೆ. ನವನಾಗರಿಕತೆಯು ಹೆಚ್ಚುತ್ತಿರುವಂತೆ ಇಂಥ ಮಕ್ಕಳೂ ಹೆಚ್ಚುತ್ತಿದ್ದಾರೆ. ಇತ್ತೀಚೆಗೆ ಇಂಗ್ಲೆಂಡಿನಲ್ಲಿ ಹದಿನಾಲ್ಕು ವರುಷದ ಹುಡುಗಿಗೆ ಸೈನಿಕರು ಹಠ ಸಂಭೋಗಮಾಡಿದುದರ ಪರಿಣಾಮವಾಗಿ ಆಕೆಯು ಗರ್ಭಿಣಿಯಾಗಲು ಡಾ| ಅಲೆಕ್ ಬಾರ್ನ್‌ರವರು ಅವಳಿಗೆ ಶಸ್ತ್ರಕ್ರಿಯೆಯನ್ನು ಮಾಡಿ ತನ ಕೃತ್ಯವು ಕಾನೂನಿಗೆ ವಿರುದ್ಧವಾದುದರಿಂದ ಸರಕಾರಕ್ಕೆ ತಿಳಿಸಲು ಅವರು ಮಾಡಿದು ನ್ಯಾಯಸಮ್ಮತವಾದುದೆಂದು ಹೇಳಲ್ಪಟ್ಟಿತ್ತು. ಇಷ್ಟೇ ಅಲ್ಲ, ವೈದ್ಯಕೀಯ ಲೋಕವೂ ಸಾರ್ವಜನಿಕರೂ ಇದಕ್ಕೆ ತಮ್ಮ ಸಮ್ಮತಿಯನ್ನಿತ್ತಿದ್ದಾರೆ. ಪ್ರಾಯಶಃ ಭಾರತದಲ್ಲಿಯೂ ಇದು ನ್ಯಾಯಸಮ್ಮತವಾಗಿ ಪರಿಗಣಿಸಲ್ಪಡಬಹುದು. ಜನನಿಯನ್ನು ರಕ್ಷಿಸುವುದಕ್ಕಾಗಿ ಗರ್ಭವಿಚ್ಛೇದನ ಮಾಡುವುದು ನ್ಯಾಯಬಾಹಿರವಲ್ಲವೆಂಬೀ ತತ್ವವನ್ನು ಒಪ್ಪಿರುವುದನ್ನು ನೋಡುವಾಗ ಕಾಯಿದೆಯು ಇದನ್ನು ವಿರೋಧಿಸಿದರೂ ಜನಾಭಿಪ್ರಾಯವು ಆಕ್ಷೇಪಿಸುವದಿಲ್ಲವೆಂಬುದು ಸ್ಪಷ್ಟವಾಗುತ್ತಿದೆ.

# ನಮ್ಮ ಪಾಶ್ಚಾತ್ಯ ಪತ್ರ

ಪಾಶ್ಚಾತ್ಯ ವಾತಾವರಣವು ಯಾವ ದೃಷ್ಟಿಯಲ್ಲಿಯೂ ಸುಧಾರಿಸಿಲ್ಲ. ಪರಸ್ಪರ ವಂಚನೆಯ ಹಾಣಾಕ್ಷತೆಯು ಎಂದಿನಂತೆಯೇ ನಡೆಯುತ್ತಿದೆ

**ಜೆಕೊಸ್ಲೊವೇಕಿಯದಲ್ಲಿ—** ಬ್ರಿಟಿಷ್ ಪ್ರತಿನಿಧಿಗಳಾದ ಲಾರ್ಡ್ ರನ್ಸಿಮಾನರು ಅಲ್ಲಿಯ ಪ್ರಜಾಸತ್ತಾತ್ಮಕ ಸರಕಾರವು ಅಲ್ಪಸಂಖ್ಯಾತರಿಗೆ ಅರ್ಥಾತ್ ಜರ್ಮನಿಗೆ ಸಾಧ್ಯವಿರುವ ಎಲ್ಲಾ ಸವಲತ್ತುಗಳನ್ನು ಕೊಡುವಂತೆ ಸಂಧಿ ಯತ್ನಗಳನ್ನು ಮಾಡುತ್ತಿದ್ದಾರೆ. ಈ ಚಿಕ್ಕ ರಾಷ್ಟ್ರವನ್ನು ಹಲವಾರು ಭಾಗಗಳಾಗಿ ವಿಂಗಡಿಸಿ ಅವನ್ನು ಬಲಶೂನ್ಯವಾಗಿ ಮಾಡಬೇಕೆಂಬುದೇ ಸರ್ವಾಧಿಕಾರಿ ಹಿಟ್ಲರನ ಮಹತ್ವದ ಆಶೆಯಾಗಿದೆ. ಜೆಕ್ ಸರಕಾರವು ಅಲ್ಪಸಂಖ್ಯಾತರಿಗೆ ಕೊಡುವ ಸವಲತ್ತುಗಳಲ್ಲಿ ಜರ್ಮನರಿಗೆ ಸಮಾಧಾನವಿಲ್ಲವೆಂದಾದರೆ ಲಾರ್ಡ್ ರನ್ಸಿಮನರ ಸಂಧಿ ಸಂಚಾರವು ನೀರಮೇಲಿನ ಹೋಮದಂತಾಗುವುದು.

**ಬ್ರಿಟಿಷ್ ಸರಕಾರವು—** ಈಗ ಅನುಸರಿಸುತ್ತಿರುವ ಧೋರಣೆಯು ತೀರಾ ವಿಚಿತ್ರವಾಗಿದೆ. ಫ್ರಾನ್ಸ್ ಮತ್ತು ರಷ್ಯಗಳೊಳಗಿನ ಸಖ್ಯವನ್ನು ಮುರಿದೊಗೆಯಲು ಮೊನ್ನೆ ಮೊನ್ನೆ ಯುದ್ಧ ಮಂತ್ರಿ ಹೋರ್ ಬೆಲೀಷರು ಪ್ಯಾರಿಸಿಗೆ ಗುಟ್ಟಿನ ಪಯಣವನ್ನು ಬೆಳಿಸಿದರೂ ರಷ್ಯದ ಬಲಶೂನ್ಯತೆಯ ಅವರ ವಿವರಣೆಯು ಫ್ರೆಂಚರಿಗೆ ರುಚಿಸಲಿಲ್ಲ. ಹಿಟ್ಲರನು ಮಧ್ಯ ಯುರೋಪಿನಲ್ಲಿ ಯಜಮಾನಿಕೆಯನ್ನು ವಹಿಸಲಿಕ್ಕಾಗಿ ಯತ್ನಿಸುತ್ತಿರುವಾಗ ಅವನ ನಾಝೀ ಹಾಣಾಕ್ಷತೆಗೆ ಮರುಳಾಗಿ ಚೇಂಬರ್ಲೇನ್ ಮಂತ್ರಿಮಂಡಲವು ಎಲ್ಲಾ ವಿಧಗಳಿಂದಲೂ ಜರ್ಮನಿಗೆ ಬೆಂಬಲ ವೀಯುತ್ತಿದೆ. ಉದಾಹರಣೆಗಾಗಿ

**ಡಾ| ಗೇಬಲ್ಸ್**



ಜರ್ಮನಿಯ ಪ್ರಚಾರಾಧಿಕಾರಿ ಡಾ| ಗೇಬಲ್ಸರು ಫ್ರಾನ್ಸಿನಲ್ಲಿ ಅಂತಃಕಲಹವು ತಲೆದೋರುವಂತೆ ಹಾನಿಕಾರಕ ಪ್ರಚಾರ ಕಾರ್ಯವನ್ನು ತೊಡಗಿದ್ದಾರೆ.

ಜೆಕೊಸ್ಲೊವೇಕಿಯದ ವಿಚಾರದಲ್ಲಿ ಬ್ರಿಟನು ಆರಿಸಿಕೊಂಡ ವಿಧಾನದಿಂದಾಗಿ ಹಿಟ್ಲರನಿಗೆ ಯುರೋಪಿನಲ್ಲಿ ವಿಶೇಷಾಧಿಕಾರವನ್ನು ಕೊಟ್ಟಂತಾಗುತ್ತದೆಂದೂ, ಅವನ ಬಲೆಯಲ್ಲಿ ಚೇಂಬರ್ಲೇನರು ಬಿದ್ದಂತಾಗುತ್ತದೆಂದೂ ರಷ್ಯವು ಅಭಿಪ್ರಾಯಪಟ್ಟಿದೆ.

**ಭಾಗ್ಯಹೀನ ಯೆಹೂದಿಯರು-** ಜರ್ಮನಿಯಿಂದಲೂ ಇಟಲಿಯಿಂದಲೂ ಪ್ರತಿ ದಿನ ಹೊರಗಟ್ಟಲ್ಪಡುತ್ತಿದ್ದಾರೆ. ಈ ಭಾಗ್ಯಹೀನರಿಗೆ ಎಡೆಗೊಡುವ ವಿಚಾರದಲ್ಲಿ ಬ್ರಿಟಿಷ್ ಸರಕಾರವು ಈ ತನಕ ಯಾವ ಏರ್ಪಾಡುಗಳನ್ನು ಮಾಡಲಿಲ್ಲ ನಾಝಿಗಳು ಈ ರೀತಿಯಾಗಿ ಯೆಹೂದಿಯರನ್ನೂ ಕಷ್ಟಕ್ಕೀಡು ಮಾಡುವುದು ಜರ್ಮನಿಯ ಅಧಃಪತನಕ್ಕೆ ಒಂದು ಕಾರಣವಾಗಿ ಪರಿಣಮಿಸುವುದರಲ್ಲಿ ನಿರ್ವಿವಾದ. ಇಂಗ್ಲೆಂಡಿನ ಜನರು ಸಾರ್ವಜನಿಕ ಸಭೆಗಳನ್ನು ಮಾಡಿ ಈ ಹತಭಾಗಿಗಳಿಗೆ ಎಡೆಗೊಡಬೇಕೆಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

**ಸ್ಪೈನಿನ ರಣರಂಗದಲ್ಲಿ—** ಏಕಪ್ರಕಾರವಾಗಿ ಯುದ್ಧವು ನಡೆಯುತ್ತಿದೆ. ತಾಟಸ್ಥ್ಯ ಧೋರಣೆಯು ನಡೆಯದ ನಾಣ್ಯದಂತಾಗಿದೆ. ಇಟಲಿಯ ಸೈನಿಕರು ಸ್ಪೈನಿನಿಂದ ಹೊರಗೆ ಹೋಗುವ ಬದಲು ಸಾವಿರಗಟ್ಟಲೆಯಲ್ಲಿ ಸ್ಪೈನಿಗೆ ಹೋಗುತ್ತಿದ್ದಾರೆ. ದಂಗೆಗಾರರ ಧುರೀಣ ಜನರಲ್ ಫ್ರೇಂಕನು ಯಶಸ್ವಿಯಾಗಬೇಕೆಂಬುದೇ ಮುಸ್ಸೋಲಿನಿಯ ಮಹದಭಿಲಾಷೆಯೆಂದು ಅವನು ಹೇಳಿದ್ದಾನೆ. "ಮೊಲಗಳಂತೆ ಕೊಲ್ಲಲ್ಪಡುವುದಕ್ಕಿಂತ ಯುದ್ಧರಂಗದಲ್ಲಿ ಹೋರಾಡಿ ಮಡಿಯುವುದು ಲೇಸೆ"ಂದು ಸ್ಪಾನಿಷ್ ಜನರು ಹೋರಾಡುತ್ತಿದ್ದಾರೆ. ಹಿಟ್ಲರ್, ಮುಸ್ಸೋಲಿನಿಯರು

ಫ್ರೇಂಕನಿಗೆ ಬೆಂಬಲವೀಯದಿದ್ದರೆ ಸ್ಪೈನ್ ಯುದ್ಧವು ಅಂತಃಕಲಹವಾಗಿದ್ದು ಎಂದೋ ಸರಕಾರವು ವಿಜಯ ಪತಾಕೆಯನ್ನು ಮೇಲೇರಿಸುತ್ತಿತ್ತು. ಆದರೆ ಪ್ರಬಲವೆಂದು ಪರಿಗಣಿಸಲ್ಪಟ್ಟಿರುವ ಬ್ರಿಟನಿನ ಧೋರಣೆಯಿಂದ ಸರ್ವಾಧಿಕಾರಿಗಳು ತಮ್ಮ ಇಚ್ಛಾನುಸಾರ ವರ್ತಿಸಿ, ಸಾವಿರಗಟ್ಟಲೆ ಜನರು ಮಡಿಯುತ್ತಿದ್ದಾರೆ. ಸ್ಪೈನಿನ ಮಂತ್ರಿಮಂಡಲದಲ್ಲಿ ಇತ್ತೀಚೆಗೆ ಕೆಲವು ಚಿಕ್ಕ ವ್ಯತ್ಯಾಸಗಳಾದರೂ ಸರಕಾರೀ ಪಕ್ಷವು ಶಿಸ್ತಿನಿಂದ ಮುನ್ನಡೆಯುತ್ತಿರುವುದಲ್ಲದೆ ಪ್ರಜಾಸತ್ತೆಯ ರಕ್ಷಣೆಗಾಗಿ ಹೋರಾಡುವವರು ದಕ್ಷತೆಯಿಂದ ತಮ್ಮ ಸೇವೆಯನ್ನು

**ಡಾ| ಬೆನೆಷ್**



ಪಂಡಿತ ನೆಹರುಗಳು ಜೆಕೊಸ್ಲೋವೇಕಿಯದ ಅಧ್ಯಕ್ಷ ಡಾ| ಬೆನೆಷರವರೊಡನೆ ಕಳೆದವಾರ ಮಾತುಕತೆಗಳನ್ನು ನಡೆಸಿದರು.

ಸಲ್ಲಿಸುತ್ತಿದ್ದಾರೆ. ಸರಕಾರಕ್ಕೆ ಸಿಗುವ ಬೆಂಬಲವು ಕಡಿಮೆಯಾಗಿದೆ. ಬ್ರಿಟನಿನ ವಿಚಿತ್ರಧೋರಣೆಯಿಂದಾಗಿ ಫ್ರೆಂಚರ ಬೆಂಬಲದ ಬಾಗಿಲು ಸರಕಾರದ ಪಾಲಿಗೆ ಮುಚ್ಚಲ್ಪಟ್ಟಿದೆ.

ಆದರೂ ಎಬ್ರೋ ರಣರಂಗದಲ್ಲಿ ಸರಕಾರವು ತನ್ನ ಯಶೋಪತಾಕೆ

**ನೆವಿಲ್ ಚೇಂಬರ್ಲೆನ್**



ಬ್ರಿಟಿಷ್ ಮಂತ್ರಿಮಂಡಲದಲ್ಲಿ ಚೇಂಬರ್ಲೆನರಿಗೂ ಲಾರ್ಡ್ ಹೆಲಿಫೇಕ್ಸರಿಗೂ ಕಠಿನ ಅಭಿಪ್ರಾಯ ವ್ಯತ್ಯಾಸಗಳುಉಂಟಾಗಿವೆಯೆಂಬುದನ್ನು ನಿರಾಕರಿಸಲ್ಪಟ್ಟರೂ ಅವ್ಯವಸ್ಥೆಯುಂಟಾಗಿ ಸದ್ಯದಲ್ಲಿಯೇ ಕೆಲವು ಬದಲಾವಣೆಗಳಾಗಬಹುದೆಂದು ತಿಳಿಯಲಾಗಿದೆ.

ಯನ್ನು ಎತ್ತಿಹಿಡಿಯಿತು. ಪರದೇಶದ ಸೈನಿಕರನ್ನು ಹೊರಗೆ ಕಳುಹಿಸುವ ಕುರಿತು ಒಂದು ವರುಷದಿಂದ ಮಾತುಕತೆಗಳು ಬ್ರಿಟಿಷ್ ಸರಕಾರಕ್ಕೂ ಫ್ರೇಂಕೊನಿಗೂ ನಡೆಯುವುದಿದ್ದರೂ ಇನ್ನೂ ಅದರ ತೀರ್ಮಾನವಾಗಲಿಲ್ಲ. ಬ್ರಿಟಿಷ್ ಸರಕಾರವು ಇತರರ ಕಣ್ಣಿಗೆ ಮಣ್ಣೆರಚಿ ಸಂತೋಷದಿಂದ ಸರ್ವಾಧಿಕಾರಿಗಳ ಕಾರ್ಯಕ್ರಮಕ್ಕೆ ತನ್ನ ಬೆಂಬಲವೀಯುತ್ತಿದೆ. ಸ್ಪೈನಿನ ಪಾಡು ಏನಾಗುವುದೆಂಬುದು ಇಂಗ್ಲೆಂಡ್ ಫ್ರಾನ್ಸುಗಳ ಧೋರಣೆಯ ಮೇಲೆ ಹೊಂದಿಕೊಂಡಿದೆ.

**ನವ ಬಾಲ್ಕನ್ ಒಪ್ಪಂದ**—ವು ಇತ್ತೀಚೆಗೆ ಸಹಿ ಮಾಡಲ್ಪಟ್ಟಿತು. ಬಾಲ್ಕನ್ ತಂಡದಲ್ಲಿ ಟರ್ಕಿ, ಗ್ರೀಸ್, ರುಮೇನಿಯಾ ಮತ್ತು ಯುಗೊಸ್ಲೇವಿಯಾ ರಾಷ್ಟ್ರಗಳೊಳಗೊಂಡಿವೆ. ಹಲವು ತಿಂಗಳುಗಳಿಂದ ಯುಗೊಸ್ಲೋವಿಯದ ಪ್ರಧಾನರಾದ ಸ್ಟೊಯಡಿನೊವಿಚಾರವರು ಬಲ್ಗೇರಿಯದ ಮೇಲೆ ಹೊರಿಸಲ್ಪಟ್ಟ ಸೈನಿಕ ಶರ್ತಗಳನ್ನು ಮುರಿದೊಗೆಯಲು ಯತ್ನಿಸುತ್ತಿದ್ದರು. ಈ ಒಪ್ಪಂದವು ತಾಟಸ್ಥ್ಯ ಧೋರಣೆಯದ್ದಾಗಿದೆ. ಗ್ರೀಕಿನ ಸರ್ವಾಧಿಕಾರಿಯಾದ ಜನರಲ್ ಮೆಟಾಕ್ಸಸ್‌ರವರು ಟರ್ಕಿಯೊಡನೆ ತನ್ನ ಸಂಬಂಧವನ್ನು ಬೆಳೆಸಿದ್ದಕ್ಕಾಗಿ ಸಮಾಧಾನವನ್ನು ವ್ಯಕ್ತಪಡಿಸಿದ್ದಾರೆ. ಬಲ್ಗೇರಿಯವನ್ನು ಈ ತಂಡಕ್ಕೆ ಸೇರಿಸಿ ಕೊಂಡಿರುವುದರಿಂದ ಇಟೆಲಿಗೆ ಬೇಸರ

**ಕಮಾಲ್‌ಪಾಶಾ**



ಬಾಲ್ಕಾನ್ ರಾಷ್ಟ್ರಗಳ ಕೂಟಕ್ಕೆ ಬಲ್ಗೇರಿಯವನ್ನು ಸೇರಿಸಿಕೊಂಡು ಟರ್ಕಿಯ ಕಮಾಲ್‌ಪಾಶರು ಮುಸ್ಸೋಲಿನಿಯ ಬಲ್ಗೇರಿಯಾ ಯೋಜನೆಯನ್ನು ನುಚ್ಚುನೂರುಗೊಳಿಸಿದ್ದಾರೆ.

ವಾಗಿದೆ. ಬಲ್ಗೇರಿಯವನ್ನು ಬಾಲ್ಕಾನ್ ಕೂಟಕ್ಕೆ ಸೇರಿಸಿರುವುದರಿಂದ ಮುಸ್ಸೋಲಿನಿಯ ಹಂಚಿಕೆಯ ಬುಡಕ್ಕೆ ಕೊಡಲಿಯಿಕ್ಕಿದಂತಾಗಿದೆ,

## ಗ್ರೀಸಿನ ದಂಗೆ-

ಯಿಂದಾಗಿ ಸರ್ವಾಧಿಕಾರಿ ಮೆಟಾಕ್ಸಸ್‌ರವರು ತುಂಬಾ ತೊಂದರೆಗೊಳಗಾಗಿದ್ದಾರೆ. ಕ್ರೀಟಿಯೆಂಬಲ್ಲಿ ದಂಗೆಗಾರರ ಧುರೀಣರಾದ ಮಿಟ್ಸೊಟಾಕಿಸ್ ಎಂಬವನು ತನ್ನ ೫೦೦ ಮಂದಿ ಅನುಯಾಯಿಗಳೊಂದಿಗೆ ಕೇನಿಯದಲ್ಲಿ ಸರಕಾರೀ ಕಟ್ಟಡಗಳನ್ನು ಕೈವಶ ಪಡಿಸಿಕೊಂಡರೂ ಸರ್ವಾಧಿಕಾರಿ ಮೆಟಾಕ್ಸಸ್‌ರವರು ಅದನ್ನು ಕ್ಲಪ್ತಕಾಲದಲ್ಲಿಯೇ ನಿಲ್ಲಿಸಿರುವರು. ಈ ದಂಗೆಯ ಹಿಂದೆ ಮುಸ್ಸೋಲಿನಿಯ ಕೈಯಿದೆಯೆಂದು ರಾಜಕೀಯ ಕ್ಷೇತ್ರಗಳಲ್ಲಿ ಹೇಳಲಾಗಿದೆ.

## ಲಂಡನಿನಲ್ಲಿ ಆಸ್ಪೆರೇಂಟೊ ಪರಿಷತ್ತು

ಇತ್ತೀಚೆಗೆ ಜರಗಿತು. ೧೭೦೦ ಮಂದಿ ವಿವಿಧ ರಾಷ್ಟ್ರಗಳಿಂದ ನೆರೆದಿದ್ದರು. ಆಸ್ಪೆರೇಂಟೊ ವಿಶ್ವ ಭಾಷೆಯಾಗಬೇಕೆಂದೂ ಅದೇ ಲೋಕಶಾಂತಿಗೆ ಯೋಗ್ಯವಾದ ಭಾಷೆಯೆಂದೂ ಹಲವರು ಅಭಿಪ್ರಾಯಪಟ್ಟರು. ಆಸ್ಪೆರೇಂಟೊ ಡಾ. ಝುಮೆನೋಫರವರಿಂದ ಕಂಡು ಹಿಡಿಯಲ್ಪಟ್ಟಿತು. ಈ ಭಾಷೆಯಲ್ಲಿ ಅತ್ಯಲ್ಪ ಶಬ್ದಗಳಿರುವುದರಿಂದ ಲೋಕದ ಏಕೀಕರಣಕ್ಕೆ ಸಹಾಯಕಾರಿಯಾಗುವುದೆಂದು ತಿಳಿಯಲಾಗಿದೆ. ಮುಂದಿನ ವರುಷ ಈ ಪರಿಷತ್ತು ಜುಲ್ಯಾ ತಿಂಗಳಲ್ಲಿ ಸ್ವಿಸ್ ರಾಷ್ಟ್ರದ ಬರ್ನೆಯೆಂಬಲ್ಲಿ ಜರಗುವುದು.

## ಬರ್ನಾರ್ಡ್ ಷಾರವರ 'ಜಿನೇವಾ'

ಎಂಬ ಹೊಸ ನಾಟಕವಾಗಿದೆ. ಈ ನಾಟಕವು ಇಂದಿನ ಯುರೋಪನ್ನು ಕೂಲಂಕಷವಾಗಿ ಚಿತ್ರಿಸುತ್ತದೆ. ಮೂರನೆಯ ಅಂಕದಲ್ಲಿ ಅಂತರ್ ರಾಷ್ಟ್ರೀಯ ನ್ಯಾಯ ಸಮಿತಿಯ ಒಂದು ನ್ಯಾಯಸ್ಥಾನದ ದೃಶ್ಯವಿದೆ. ಹಾಲೆಂಡ್ ನ್ಯಾಯಾಧೀಶ, ಇಂಗ್ಲೆಂಡಿನ ವಿದೇಶ ಮಂತ್ರಿಯು 'ವಿದೇಶಿಯರು ಯಾವಾಗಲೂ ವಿದೇಶಿಯರೇ' ಎನ್ನುತ್ತಾರೆ.

**ಡಾ। ಹಾಝ್ಜಾ**



ಜೆಕೊಸ್ಲೊವೇಕಿಯದ ಅಧ್ಯಕ್ಷ ಡಾ। ಹಾಝ್ಜಾರವರು ರನ್ಸಿಮೇನ್‌ರವರ ಸಂಧಿಯು ಯಶಸ್ವಿಯಾಗುವಂತೆ ಕೈಲಾದ ಯತ್ನಗಳನ್ನು ಮಾಡುತ್ತಿದ್ದಾರೆ.

ಯುರೋಪಿನ ಸರ್ವಾಧಿಕಾರಿಗಳು ಹಾಜರಿರುತ್ತಾರೆ. ಒಬ್ಬರು ರೋಮನ್ ಬಟ್ಟೆಗಳನ್ನು ಧರಿಸಿದ ಸೀನರ್ ಬೊಂಬಾರ್ಡೋನ್ (ಗುಲ್ಲೆಬ್ಬಿಸುವವ) ಇನ್ನೊಬ್ಬ ಜರ್ಮನ್ ಯುವಕ. ಹೆಸರು ಹೆರ್ ಬಟ್ಲರ್. ಇಷ್ಟಲ್ಲದೆ ರಷ್ಯ ಮತ್ತು ಜನರಲ್ ಫ್ಲೇಂಕೋ ಎಂಬೊಂದು ಪಾತ್ರವೂ ಅದರಲ್ಲಿದೆ. ಎರಡನೆ ದೃಶ್ಯದಲ್ಲಿ ಜಗತ್ತು ತನ್ನ ಅಕ್ಷ್ದಿಂದ ಹೊರ ಸಾಗುವುದೆಂದೂ, ಮನುಷ್ಯನು ಯೋಗ್ಯ ರಾಜಕೀಯ ಪ್ರಾಣಿಯಲ್ಲವೆಂದೂ ಹೇಳಲಾಗುತ್ತದೆ. ಬರ್ನಾರ್ಡ್ ಷಾರವರು ತನ್ನ ಮುನ್ನುಡಿಯಲ್ಲಿ 'ಈ ನಾಟಕವು ನಿಮ್ಮನ್ನು ನಗಿಸಿ, ಆಶ್ಚರ್ಯಚಕಿತರನ್ನಾಗಿ ಮಾಡಿ ಭಯಕ್ಕೊಳಗಾಗಿಸಿ ಪುನಹ ಮಹತ್ವದ ಆನಂದವನ್ನು ನಿಮಗುಂಟು ಮಾಡದಿದ್ದರೆ, ಅದು ಒಳ್ಳೆಯದಿಲ್ಲ, ಮತ್ತು ನಾನು ಪ್ರಯೋಜನವಿಲ್ಲವೆಂದಾಗುತ್ತದೆ.' ಎಂದಿದ್ದಾರೆ.

## ಇರಾಸಿನಲ್ಲಿ ಜರ್ಮನಿಯು

ಸಾವಧಾನವಾಗಿ ತನ್ನ ಅಧಿಕಾರವನ್ನು ಸ್ಥಾಪಿಸುತ್ತಿರುವುದರಿಂದ ರಷ್ಯವು ತಬ್ಬಿಬ್ಬಾಗಿದೆ. ಜರ್ಮನರು ರಷ್ಯದ ಮಧ್ಯ ಏಸ್ಯ ಗಡಿನಾಡಿನಲ್ಲಿ ತಮ್ಮ ವಿಮಾನಪಡೆಯನ್ನು ತಂಗಿದ್ದಾರೆ. ಲುಫ್ತಾನ್ಸಾ ಎಂಬ ಜರ್ಮನ್ ವಿಮಾನ ಕಂಪನಿಯು ಟೆಹರಾನಿನಿಂದಾಗಿ ಕಾಬೂಲಿಗೆ ಸಾಪ್ತಾಹಿಕ ವಿಮಾನ ದಾರಿಯನ್ನು ಸ್ಥಾಪಿಸಿದೆ. ಈ ವಿಮಾನ ದಾರಿಯು ಕೇವಲ ರಾಜಕೀಯ ದೃಷ್ಟಿಯಿಂದ ಅಲ್ಲಿಗೆ ಹೋಗುತ್ತಿರುವುದಲ್ಲದೆ ಪ್ರತಿಬಾರಿ ಸೈನಿಕರನ್ನು ಕೊಂಡೊಯ್ಯುತ್ತಿದೆಯೆಂದು ರಷ್ಯನರು ಅಭಿಪ್ರಾಯಪಟ್ಟಿದ್ದಾರೆ. ಸೊವಿಯೆಟ್ ತುರ್ಕಿಸ್ಥಾನದ ಗಡಿಯ ಬಳಿಯಲ್ಲೇ ಜರ್ಮನರ ವಿಮಾನಪಡೆಯನ್ನು ಸ್ಥಾಪಿಸಲು ಇರಾನ್ ಸರಕಾರವು ಎಡೆಗೊಟ್ಟಿರುವುದರಿಂದ ರಷ್ಯವು ಈ ಕುರಿತು ಕಠಿನವಾಗಿ ಯೋಚಿಸುತ್ತಿದೆ. ಇಷ್ಟು ಮಾತ್ರವಲ್ಲದೆ ಪರ್ಸಿಯದೊಡನೆ ರಷ್ಯವು ಈ ತನಕ ನಡೆಸು

ತ್ತಿದ್ದ ವ್ಯಾಪಾರಕ್ಕೆ ತುಂಬಾ ತೊಡಕುಂಟಾಗಿದೆ. ರಷ್ಯದ "ಪ್ರಾವ್ದಾ" ಪತ್ರಿಕೆಯನ್ನುವಂತೆ ಜರ್ಮನ್ ಕಂಪೆನಿಗಳಿಗೆ ಇರಾನ್ ಸರಕಾರವು ಎಲ್ಲಾ ದೃಷ್ಟಿಗಳಲ್ಲಿಯೂ ಬೆಂಬಲವನ್ನೀಯುತ್ತಿದೆ. ಈ ಕುರಿತು ಎಚ್ಚರಿಕೆಯನ್ನು ಆಗಸ್ಟ್ ೪ರಂದು ಜರಗಿದ ಜನಾಂಗ ಸಭೆಯು ಯೂನಿಯನು ಒಂದು ಠರಾವಿನ ಮೂಲಕ ವ್ಯಕ್ತಪಡಿಸಿದೆ.

## ಪೋಪ್ ಮತ್ತು ಮುಸ್ಸೋಲಿನಿ

ಯರಿಗೆ ಜನಾಂಗ ವಿಚಾರದಲ್ಲಿ ಮಹತ್ವದ ಅಭಿಪ್ರಾಯ ವ್ಯತ್ಯಾಸಗಳುಂಟಾಗಿವೆ. ಇಟಲಿಯು ಯೆಹೂದಿಯರನ್ನು ಬಹಿಷ್ಕರಿಸುವುದರಿಂದ ಜರ್ಮನಿಯನ್ನು ಅನುಕರಿಸಿದಂತಾಗುತ್ತದೆಂದು ಪೋಪ್ ಸಾಹೇಬರು ಹೇಳಿದ್ದಾರೆ. ಮುಸ್ಸೋಲಿನಿಯು ಕೆಥೋಲಿಕ್ ಚರ್ಚಿನ ನಿರ್ಣಯಕ್ಕೆ ವಿರೋಧವಾಗಿ ವರ್ತಿಸುವುದರಿಂದ ಅವರನ್ನೇ ವಿರೋಧಿಸಿದಂತಾಗುತ್ತದೆ ಎಂದು ಹೇಳಿದ್ದಾರೆ.

## ಪೋಪರಿಗೆ ಉತ್ತರ

ಕೊಡುತ್ತಾ ಸೀನರ್ ಮುಸ್ಸೋಲಿನಿಯು ಇಟಲಿಯು ಯಾರನ್ನೂ ಅನುಕರಿಸುವುದಿಲ್ಲ, ಯೆಹೂದಿಯರು ರಷ್ಯದ ಬೊಲ್ಶೆವಿಸಮ್ಮನ್ನು ಹಬ್ಬಿಸುವುದರಿಂದ ಅವರಿಗೆಡೆ ಕೊಡುವುದು ಅನ್ಯಾಯವೇ ಸರಿಯೆಂದು ಹೇಳಿದ್ದಾರೆ. ಸೀನರ್ ಗಾಯ್ಡಾರವರು ಈ ಕುರಿತು "ಜರ್ನೆಲಾ ಡ ಇಟಾಲಿಯಾ" ಎಂಬುದರಲ್ಲಿ ಬರೆದ ಲೇಖನದಲ್ಲಿ ಅಮೇರಿಕ, ಬ್ರಿಟನ್ ಮತ್ತು ಫ್ರಾನ್ಸುಗಳು ಜನಾಂಗ ವ್ಯತ್ಯಾಸವನ್ನು ಮನ್ನಿಸುವಾಗ ಇಟಲಿಯು ಕೂಡಾ ಹಾಗೇಕೆ ಮಾಡಬಾರದೆಂದಿದ್ದಾರೆ. ವಸಾಹತುಗಳಿಲ್ಲದಿರುವುದರಿಂದ ಈ ಧೋರಣೆಯು ಅತ್ಯವಶ್ಯವೆಂದು ಸ್ಪಷ್ಟಪಡಿಸಿದ್ದಾರೆ. ಮುಸ್ಸೋಲಿನಿ ಪೋಪರಿಗೆ ಸದ್ಯದಲ್ಲಿಯೇ ಒಂದು

**ಹೆರ್ ಹೆನ್ಲಿನ್.**



ಸುಡೇಟನ್ ಜರ್ಮನಿಯ ಅನಧಿಕೃತ ಧುರೀಣ ಹೆರ್ ಹೆನ್ಲಿನರಿಗೂ ಲಾರ್ಡ್ ರನ್ಸಿಮೆನರಿಗೂ ಅಲ್ಪ ಸಂಖ್ಯಾತ ಸಮಸ್ಯೆಯ ಕುರಿತು ದೀರ್ಘ ಮಾತು ಕತೆಗಳು ನಡೆದುವು.

ಘೋಷಣೆಯಾಗುವುದರಲ್ಲಿ ನಿರ್ವಿವಾದ.


## ಮಾಲ್ಟಾ ದ್ವೀಪಕ್ಕೆ ನವರಾಜ್ಯಘಟನೆ

ಯನ್ನು ಕೊಡಲು ಬ್ರಿಟಿಷ್ ಸರಕಾರವು ಸಮ್ಮತಿಸಿದೆ. ಈ ಘಟನೆಯಿಂದ ಆದರ ಆಳ್ವಿಕೆಯಲ್ಲಿ ಅಲ್ಲಿಯ ಜನರಿಗೆ ಸಾಮಾನ್ಯ ಮಟ್ಟಿಗೆ ಅಧಿಕಾರವು ಸಿಗುವುದೆಂದು ವಸಾಹತುಗಳ ಕಾರ್ಯದರ್ಶಿಯರಾದ ಮೆಲ್ಕಾಲ್ಮ್ ಮೆಕ್ಡೊನಾಲ್ಡರು ಹೌಸ್ ಆಫ್ ಕಾಮನ್ಸಿನಲ್ಲಿ ಹೇಳಿದ್ದಾರೆ. ಈ ಘಟನೆಗೂ ಭಾರತದ ನವರಾಜ್ಯ ಘಟನೆಗೂ ವಿಶೇಷ ವ್ಯತ್ಯಾಸವಿಲ್ಲ. ಮಾಲ್ಟದ ಗವರ್ನರರಾಗಿ ಮಿ| ಜ್ಹೋನ್ ಎಡಮ್ಸ್ ಹಂಟರ್‌ರವರು ನೇಮಿಸಲ್ಪಟ್ಟಿದ್ದಾರೆ.

## ಬ್ರಿಟನಿನ ಸೈನ್ಯ

ವನ್ನು ಸುಧಾರಿಸುವ ಎಲ್ಲಾ ಯತ್ನಗಳು ಬ್ರಿಟಿಷ್ ಯುದ್ಧಖಾತೆಯ ಮಂತ್ರಿಗಳಾದ ಹೋರ್ ಬೆಲೀಷರವರಿಂದ ಮಾಡಲ್ಪಡುತ್ತಿದೆ. ಸೇಂಡರ್ಸ್ಟ್ ಮತ್ತು ವೂಲ್‌ವಿಚ್‌ನಲ್ಲಿ ಪೂರ್ಣ ವಿದ್ಯಾವೇತನ ಪಡೆದು ಇಚ್ಛೆಯಿರುವವರೆಲ್ಲರೂ ಸೈನಿಕ ಶಿಕ್ಷಣವನ್ನು ಪಡೆಯಬಹುದಾಗಿದೆ. ಇನ್ನು ಮುಂದೆ ಅರ್ಧ ಸಂಬಳ ಪದ್ಧತಿಯು ಜಾರಿಯಲ್ಲಿರಲಾರದು. ಒಟ್ಟಿನಮೇಲೆ ಪ್ರತಿಯೊಬ್ಬರೂ ಭಾವೀಯುದ್ಧದಲ್ಲಿ ಹೋರಾಡುವಂತೆ ಬೇಕಾದ ಸವಲತ್ತುಗಳೆಲ್ಲಾ ಈಗ ಕೊಡಲ್ಪಡುತ್ತಿವೆ. ಈ ಸುಧಾರಣೆಗಳು ಜಾರಿಗೆ ಬರಲು ಪ್ರಾಮುಖ್ಯ ಕಾರಣವೆಂದರೆ ಸ್ವಲ್ಪ ಸಮಯದ ಹಿಂದೆ ವಿಲ್ಲಿಂಗ್ಡನ್ ಕಮಿಟಿಯು ಸೈನ್ಯಾಧಿಕಾರಿಗಳ ಅಭಾವವುಂಟಾದುದು ಹೇಗೆಂದ ಕೇಳಿದುದರಿಂದ ಸೈನ್ಯ, ನೌಕೆ, ವಿಮಾನಪಡೆಯಲ್ಲಿ ಕೆಲಸಮಾಡುವವರ ವೇತನವು ಹೆಚ್ಚಿಸಲ್ಪಟ್ಟಿದೆ, ಇಷ್ಟೆಲ್ಲಾ ಸುಧಾರಣೆಗಳಿಂದಾಗಿ ಎಂದಿಗಿಂತ ಬ್ರಿಟಿಷ್ ಸರಕಾರವು ೬೦೦,೦೦೦ ಪವನುಗಳನ್ನು ಹೆಚ್ಚು ವ್ಯಯಮಾಡಬೇಕಾಗುತ್ತದೆ.

**ಶಾಂಗ್ ಕೈ ಶೇಕರು**– ಚೀನೀಯರನ್ನು ಹುರಿದುಂಬಿಸುತ್ತಾ ಜಪಾನಿಯರ ಧಾಳಿಯನ್ನು ಯಶಸ್ವಿಯಾಗಿ ಎದುರಿಸುತ್ತಿದ್ದಾರೆ. ಎಂದಿನಂತೆಯೇ ಕೃತಕ ಯುದ್ಧ ವಿಧಾನವು ಚೀನೀಯರಿಂದ ಹಲವೆಡೆಗಳಲ್ಲಿ ಅನುಸರಿಸಲ್ಪಡುತ್ತಿದೆ. ಜಪಾನಿಯರು ಯೆಲ್ಲೋ ನದಿಯ ಉತ್ತರ ಭಾಗದ ಹಲವು ಪಟ್ಟಣಗಳನ್ನು ಕೈವಶಪಡಿಸಿಕೊಂಡರೂ ಅವುಗಳು ತಾತ್ಕಾಲಿಕ ವಿಜಯಗಳಾಗಿವೆ. ಶಾನ್ಸಿ ಪ್ರಾಂತ್ಯವನ್ನು ಜಪಾನಿಯರು ಸಂಪೂರ್ಣವಾಗಿ ಕೈವಶಪಡಿಸಿರುವರೆಂದು ಟೋಕಿಯೊದ ಸುದ್ದಿಯೊಂದು ಹೇಳುತ್ತಿದೆ. ಪೂಚೋ ಎಂಬಲ್ಲಿಯ ಸೈನ್ಯಠಾಣೆಯು ಕೂಡಾ ಜಪಾನಿಯರ ಕೈಸೇರಿರುವುದರಿಂದ ಚೀನೀಯರು ತಮ್ಮ ಬಲವನ್ನು ಪ್ರಾಮುಖ್ಯ ಸ್ಥಳಗಳಿಗೆ ಕಳುಹಿಸಿರುತ್ತಾರೆ. ನೆರೆಯಿಂದಾಗಿ ಜಪಾನಿನವರು ಆಗಾಗ ತಮ್ಮ ಯುದ್ಧರಂಗವನ್ನು ಬದಲಾಯಿಸಬೇಕಾಗುತ್ತದೆ.



ಕೆನಡವನ್ನು ಯಾವ ರಾಷ್ಟ್ರವಾದರೂ ನುಗ್ಗಿದರೆ ಯುನೈಟೆಡ್ ಸ್ಟೇಟ್ಸ್ ಸುಮ್ಮನಿರಲಾರದೆಂದು ಹೇಳಿದ
**ಅಧ್ಯಕ್ಷ ರೂಸ್‌ವೆಲ್ಟ್.**

**ಜಪಾನ್ ಸರಕಾರವು**- ಆರ್ಥಿಕ ದೃಷ್ಟಿಯಲ್ಲಿ ದಿಙ್ಮೂಢಾವಸ್ಥೆಗೆ ಬಂದಿದೆಯೆಂದು ಇತ್ತೀಚೆಗೆ ಅಲ್ಲಿಯ ಆರ್ಥಿಕ ಮಂತ್ರಿಗಳು ಯುದ್ಧ ಸಾಲವನ್ನು ಹೊಸತಾಗಿ ಮಾಡಿರುವುದರಿಂದ ಸ್ಪಷ್ಟವಾಗುತ್ತದೆ.

**ಜರ್ಮನಿಯೊಡನೆ ಸಖ್ಯ**ವನ್ನು ಬೆಳೆಸುವುದಕ್ಕಾಗಿ ಮತ್ತು ಜಪಾನ್ ಸಂಸ್ಕೃತಿಯನ್ನೂ ಜರ್ಮನಿಗೆ ತಿಳಿಸುವುದಕ್ಕಾಗಿ ವರ್ನರ್ ಕೋಮ್ ಎಂಬವರು ಇತ್ತೀಚೆಗೆ ಜಪಾನಿಗೆ ಹೋಗಿದ್ದಾರೆ. ಇವರು ಜಪಾನಿನಲ್ಲಿ ನಾಲ್ಕೈದು ವರುಷಗಳ ತನಕ ಹಿಟ್ಲರನ ಆಜ್ಞೆಯಂತೆ ನಿಂತು ಅಲ್ಲಿಯ ಪರಿಸ್ಥಿತಿಯನ್ನು ಜರ್ಮನಿಗೆ ತಿಳಿಸುವರು. ಜಪಾನಿನ ಒಬ್ಬ ಪ್ರತಿನಿಧಿಗಳು ಸದ್ಯದಲ್ಲಿಯೇ ಜರ್ಮನಿಗೆ ಹೋಗಲಿರುವರು.

---


# ಶಾಂತಿ ಸಮಸ್ಯೆ

ಇಂದೇ ಬರೆಯಿರಿ! ❋ ಬಂದೇ ಬರುವುದು!!

ಅಪಾರದ್ರವ್ಯ!!!

ಪ್ರತಿ ತಿಂಗಳೂ ಪ್ರಯತ್ನದಿಂದ ಶಾಂತಿ ಸಮಸ್ಯೆಗಳನ್ನು ತಪ್ಪದೆ ಬಿಚ್ಚಿರಿ.

**ಶಾಂತಿ ಸರ್ವಿಸ್, ಕುರಾಡಿ**

ಬ್ರಹ್ಮಾವರ ಪೋಸ್ಟ್ (ದ. ಕನ್ನಡ.)

# ಅಂತರಂಗ

ಆದಿತ್ಯವಾರ, ಆಗೋಸ್ತು ೨೮, ೧೯೩೮


## ಕ್ರಿಮಿನಲ್ ಲಾ ತಿದ್ದುಪಡಿ ಮಸೂದೆ

ಮದ್ರಾಸ್ ಎಸೆಂಬ್ಲಿಯ ಮುಂದೆ ಬಂದ ಕ್ರಿಮಿನಲ್ ಲಾ ತಿದ್ದುಪಡಿ ಮಸೂದೆಯು ಚರ್ಚೆಗೆ ಕಾಂಗ್ರೆಸ್ ಸರಕಾರವು ಎಡೆಗೊಡದಿರುವುದು ಕಾಂಗ್ರೆಸಿನ ಚುನಾವಣಾ ಪತ್ರಕ್ಕೆ ವಿರುದ್ಧವಾದುದೆಂದು ಹೇಳಬೇಕಾಗಿದೆ. ಎಲ್ಲರಿಂದಲೂ ಏಕಕಂಠದಿಂದ ಖಂಡಿಸಲ್ಪಟ್ಟ ಕ್ರಿಮಿನಲ್ ಕಾಯಿದೆಯನ್ನು ಪ್ರಧಾನರಾದ ಶ್ರೀ ರಾಜಾಜಿಯವರು ತಾತ್ಕಾಲಿಕವಾಗಿ ಸಮರ್ಥಿಸಿರುವುದು ಶೋಚನೀಯವಿದೆ. ಕಾಂಗ್ರೆಸ್ ಅಧಿಕಾರವನ್ನು ಸ್ವೀಕರಿಸಿರುವುದು ಕಾಂಗ್ರೆಸನ್ನು ಬಲಗೊಳಿಸಲಿಕ್ಕಲ್ಲದೆ ಬ್ರಿಟಿಷ್ ಸರಕಾರದ ಯೋಜನೆಯನ್ನು ಕಾರ್ಯರೂಪಕ್ಕೆ ತರಲಿಕ್ಕಲ್ಲವೆಂಬುದನ್ನು ಮದ್ರಾಸ್ ಕಾಂಗ್ರೆಸ್ ಪಕ್ಷದವರು ತಮ್ಮ ದೃಷ್ಟಿಪಥದಲ್ಲಿಡಬೇಕಾದುದು ಪ್ರಾಮುಖ್ಯವಾಗಿದೆ.

---

## ದಬ್ಬಾಳಿಕೆಯ ಸಾಧನ.

ಸೈನ್ಯಕ್ಕೆ ಸೇರಬಾರದೆಂಬ ಪ್ರಚಾರಮಾಡುವವರನ್ನು ಶಿಕ್ಷಿಸುವ ಮಸೂದೆಯು ಕೇಂದ್ರ ವಿಧಾಯಕ ಸಭೆಯ ಮುಂದಿದೆ. ಈ ಮಸೂದೆಯು ಭಾರತೀಯರ ಸಾಮಾನ್ಯ ಹಕ್ಕನ್ನು ಸೆಳೆದೊಯ್ಯುವುದಲ್ಲದೆ ಸಾಮ್ರಾಜ್ಯಶಾಹೀ ಯುದ್ಧದಲ್ಲಿ ಹಿಂದುಸ್ಥಾನವನ್ನು ಸೇರಿಸಿಕೊಳ್ಳುವ ಒಂದು ಹಂಚಿಕೆಯಾಗಿದೆ. ಈ ಮಸೂದೆಗೆ ಬಹುಮತವು ಸಿಕ್ಕಿದರೆ ಕೇಂದ್ರ ಸಭೆಯಲ್ಲಿ ಕಾಂಗ್ರೆಸ್ ಪಕ್ಷದವರು ಹೊರ ನಡೆಯುವರು. 'ಸೈನ್ಯಕ್ಕೆ ಎಷ್ಟು ಹಣ ಖರ್ಚು ಮಾಡಬೇಕೆಂಬುದು ಸರಕಾರದ ಇಚ್ಛೆ. ಆ ಸೈನಿಕರು ಸಾಮ್ರಾಜ್ಯದ ಯಾವ ಭಾಗದಲ್ಲಿಯೂ ಹೋರಾಡಬಹುದು' ಎಂದು ಸೈನ್ಯ ಖಾತೆಯ ಕಾರ್ಯದರ್ಶಿಯರು ಹೇಳಿದ್ದಾರೆ. ಹಣವನ್ನು ಕೊಡುವ ಕೆಲಸವು ಭಾರತದ ತೆರಿಗೆದಾರರದು. ಅದನ್ನು ಖರ್ಚು ಮಾಡುವ ಅಧಿಕಾರವು ಮಾತ್ರ ಕೇಂದ್ರ ಸರಕಾರದ್ದು. ಈ ಅಧಿಕಾರವು ತೆರಿಗೆಯನ್ನು ಕೊಡುವವರಿಗೇ ಇರುವಂತೆ ಮಾಡುವ ಕರ್ತವ್ಯವು ಭಾರತೀಯರದು ಎಂಬುದನ್ನು ನೆನಪಿನಲ್ಲಿಟ್ಟು ಇದನ್ನು ವಿರೋಧಿಸಬೇಕಾಗಿದೆ.

---

# ಫೆಡರೇಶನ್ ಸೇ

## ರಾಷ್ಟ್ರಪತಿಗೆ

ಅಹಮ್ಮದಾಬಾದಿನ ಸುಮಾರು ೧೦೦೦ ಕಾಂಗ್ರೆಸ್ ಸದಸ್ಯರು ರಾಷ್ಟ್ರಪತಿಯರಿಗೆ ಭಾರತದ ಮೇಲೆ ಹೊರಿಸಲ್ಪಡುವ ಫೆಡರೇಶನಿನ ಕುರಿತು ಬರೆದ ಪತ್ರದ ಸಾರಾಂಶವು ಕೆಳಗಿನಂತಿದೆ:—

### ಅಸ್ಪಷ್ಟ ಧೋರಣೆ

ಭಾರತವು ಇಂದು ದಿಙ್ಮೂಢಾವಸ್ಥೆಯಲ್ಲಿದೆ ಫೆಡರೇಶನಿನ ಕುರಿತು ಏಕ ಕಂಠದಿಂದ ಕಾಂಗ್ರೆಸ್ ತನ್ನ ವಿರೋಧವನ್ನು ವ್ಯಕ್ತಪಡಿಸುವ ಬದಲು ಶ್ರೀ. ಸತ್ಯಮೂರ್ತಿಯವರು ತಮ್ಮ ಇಚ್ಛಾನುಸಾರವಾಗಿ ವರ್ತಿಸುತ್ತಿದ್ದಾರೆ. ಕಳೆದ ವರ್ಕಿಂಗ್ ಕಮಿಟಿಯಲ್ಲಿ ಈ ಪ್ರಶ್ನೆಯು ಬೇಕೆಂದೇ ಚರ್ಚಿಸಲ್ಪಡಲಿಲ್ಲ.

### ಈ ಮೌನವೇಕೆ?

ಸರ್ ಫ್ರೆಢರಿಕ್ ವೈಟರಿಗೆ ರಾಷ್ಟ್ರಪತಿಗಳಾದ ನೀವು ಕೊಟ್ಟ ಉತ್ತರದಿಂದ ನಮಗೆಲ್ಲರಿಗೂ ಸಮಾಧಾನವಾಗಿದೆ. ಆದರೆ ವರ್ಕಿಂಗ್ ಕಮಿಟಿಯು ನಮ್ಮ ಫೆಡರೇಶನ್ ಉತ್ಸಾಹಿಗಳಾದ ಸತ್ಯಮೂರ್ತಿಗಳ ಕುರಿತು ಯಾವ ಅಭಿಪ್ರಾಯವನ್ನೂ ವ್ಯಕ್ತಪಡಿಸಲಿಲ್ಲ. ಕಳೆದ ವರ್ಕಿಂಗ್ ಕಮಿಟಿಯು ಸುಸ್ಪಷ್ಟವಾದ ಧೋರಣೆಯನ್ನು ಪ್ರಕಟಿಸುವುದೆಂದು ಪ್ರತಿಯೊಬ್ಬ ಕಾಂಗ್ರೆಸ್ ಸದಸ್ಯರೂ ನಿರೀಕ್ಷಿಸುತ್ತಿದ್ದರು. ಆದರೆ ಕಳೆದ ಬಾರಿಯ ಸಭೆಯು ಈ ಪ್ರಶ್ನೆಯ ಕುರಿತು ಮೌನಮುದ್ರೆಯನ್ನು ತಾಳಿದುದೇಕೆ?

### ಶಕ್ತಿ ಸಂಘಟನೆ!

ನಾವು ನಮ್ಮ ವಿರೋಧಿಗಳಿಗೆ ಯಾವ ರೀತಿಯಲ್ಲಿಯೂ ಬೆಂಬಲ

''ಯುಜ

ಲಂ

ನಿ



ಜಗದ್ವಿಖ್ಯಾತ ಬರೆಹ
ಸಂಕ್ಷಿಪ್ತ ಚರಿತ್ರೆ'ಯ
ದೂರಿರುವರೆಂದು ಇನ
ಲಂಡನಿನಲ್ಲಿ ನಿಷೇಧ
ಇಂಡಿಯದ ಹೈ ಕಮಿ
ಸರಕಾರಕ್ಕೆ ತಿಳಿಸ

# ಷ್ಣ ಬಲಗೊಳಿಸಿರಿ

## ಸ್ಯರ ಸೂಚನೆ

**ಧಿಕ್ಕಾರ''**

ುವಕರ
ಣಿಗೆ.



ವೆಲ್ಸರವರು 'ಜಗತ್ತಿನ ಬರನ್ನೂ, ಕುರಾನನ್ನೂ, ಮುಸ್ಲಿಮ್ ಯುವಕರು ಯೊಂದನ್ನು ನೂಡಿದರು. ಡ್ ಖಾನ್ ನೂನ್‌ರವರು ಸಮಾಧಾನಿಸಿದರು.

ವೀಯಬಾರದು. ಫೆಡರಲ್ ಎಸೆಂಬ್ಲಿಗೆ ಪ್ರತ್ಯಕ್ಷ ಪ್ರಾತಿನಿಧ್ಯವಿರಬೇಕಲ್ಲದೆ ನರೇಂದ್ರರು ಪ್ರತಿನಿಧಿಗಳನ್ನು ಆರಿಸುವಂತಿರಬಾರದು. ಸುಮ್ಮನೆ ಕುಳಿತು ಬ್ರಿಟಿಷರು ಕೊಡಬಹುದಾದ ಅಲ್ಪ ಸ್ವಲ್ಪ ಆಶ್ವಾಸನೆಗಳಿಗೆ ನಾವೊಪ್ಪಬಾರದು.

**ಮಂತ್ರಿಗಳ ರಾಜಿನಾಮೆ.**

ನಾವು ಫೆಡರೇಶನಿನ ವಿಷಯದಲ್ಲಿ ಕಠಿನ ಮನೋಗತಿಯಲ್ಲಿದ್ದೇವೆಂಬುದನ್ನು ಬ್ರಿಟಿಷರಿಗೆ ಸ್ಪಷ್ಟಪಡಿಸಲು ಪ್ರಾಂತಿಕ ಸರಕಾರಗಳಲ್ಲಿರುವ ಕಾಂಗ್ರೆಸ್ ಜನರು ತಮ್ಮ ಸ್ಥಾನಗಳಿಗೆ ರಾಜಿನಾಮೆಯೀಯಬೇಕು. ಏಳು ಪ್ರಾಂತ್ಯಗಳಲ್ಲಿಯೂ ಜನರಲ್ ಇಲೆಕ್ಷನ್ ಪುನಃ ನಡೆಯುವಂತೆ ಮಾಡಿದರೆ ಜನರ ರಾಜಕೀಯ ಅಭಿಪ್ರಾಯವು ಮತ್ತಷ್ಟು ಬಲವಾಗುತ್ತದೆ. ಬ್ರಿಟಿಷ್ ಯೋಜನೆಗನುಸಾರವಾಗಿ ಆಳುವುದು ಕಾಂಗ್ರೆಸ್ ಸರಕಾರಗಳ ಕರ್ತವ್ಯವಲ್ಲ. ''ರಾಷ್ಟ್ರದ ಸ್ವಾತಂತ್ರ್ಯ ಸಮರವನ್ನು ಬಲಗೊಳಿಸಲಿಕ್ಕಾಗಿ'' ಮಾತ್ರ ಅಧಿಕಾರವನ್ನು ಸ್ವೀಕರಿಸಿದುದಾಗಿದೆ. ಕಾಂಗ್ರೆಸಿನ ಎಲ್ಲಾ ಚಟುವಟಿಕೆಗಳು ಅದರ ಬಲವನ್ನು ವರ್ಧಿಸಲಿಕ್ಕಾಗಿರಬೇಕು. ಈಗ ಕಾಂಗ್ರೆಸಿನ ಸಾಮಾನ್ಯ ಸದಸ್ಯರಿಗೆ ನಿಜವಾದ ಯಾವ ಅಧಿಕಾರವೂ ಇಲ್ಲ. ಆದುದರಿಂದ ಕಾಂಗ್ರೆಸಿನ ಘಟನೆಯನ್ನೇ ಪೂರ್ಣವಾಗಿ ಬದಲಾಯಿಸಬೇಕಾಗಿದೆ.

**ವ್ಯವಸ್ಥಾಪನಾಶಕ್ತಿಯಿಲ್ಲ!**

ಇಂದಿನ ಪರಿಸ್ಥಿತಿಯಲ್ಲಿ ಸಮಗ್ರ ರಾಷ್ಟ್ರವನ್ನು ವ್ಯವಸ್ಥೆಗೊಳಿಸುವ ಶಕ್ತಿಯು ಕಾಂಗ್ರೆಸಿಗಿಲ್ಲ. ಇದಕ್ಕೆ ಹಲವು ಕಾರಣಗಳಿವೆ. ಪ್ರಾಥಮಿಕ ಸದಸ್ಯರನ್ನು ಸೇರಿಸುವ ಕ್ರಮವು ಕೇವಲ ಹಾನಿಕಾರಕವಾಗಿದೆ. ನಾಲ್ಕಾಣೆಗಳನ್ನು ಅವರಿಂದ ಪಡೆಯುವುದಲ್ಲದೆ ಕಾಂಗ್ರೆಸಿನ ಕಾರ್ಯಕ್ರಮವನ್ನು ಅವರಿಗೆ ವಿವರಿಸುವ ಪದ್ಧತಿಯೇ ಇಲ್ಲ. ಕೆಲವೊಮ್ಮೆ ಅವರಿಗ ಯದಂತೆಯೇ ಅವರನ್ನು ಸದಸ್ಯರನ್ನಾಗಿ ಮಾಡುವುದುಂಟು. ಧನಿಕರು ತಾವೇ ಹಣವನ್ನು ಕೊಟ್ಟು ಸಾವಿರ ಗಟ್ಟಲೆಯಲ್ಲಿ ಸದಸ್ಯರನ್ನು ಮಾಡಿ ಅಧಿಕಾರವನ್ನು ಹೊಂದುತ್ತಾರೆ.

## ಹೀಗಿರಬಹುದೆ?

**ಹೀಗಾಗಬಹುದೇ?**

ಮಿ। ಅಂತನಿ ಇಡನ್ನರು ಮುಂಬರುವ ಮಹ ಚುನಾವಣೆಯಲ್ಲಿ ಇಂಗ್ಲೆಂಡಿನ ಪ್ರಧಾನಮಂತ್ರಿಗಳಾ ಆರಿಸಲ್ಪಡಬಹುದೆಂದು ಮಿಸ್ ಎಲಿಸ್ ವಿಲ್ಕಿನ್ಸನ ಭವಿಷ್ಯಹೇಳಿದ್ದಾರೆ.

**''ಜರ್ಮನ್ ಮಡದಿ''**

ಅಫಘಾನಿಸ್ಥಾನದಲ್ಲಿ ಗಲಭೆಯೆಬ್ಬಿಸಿದರೆಂದು ಹೇ ಲ್ಪಟ್ಟ ಶಾಮಿ ಪೀರ್‌ರವರು ಒಬ್ಬ ಜರ್ಮನ್ ಸ್ತ್ರೀಯನ ಮದುವೆಯಾಗಿರುವರಂತೆ. ಮುಸ್ಸೋಲಿನಿಯು ಇ ಲಿಯಲ್ಲಿರುವ ಮಾಜಿ ಅಫಘಾನಿಸ್ಥಾನದ ರಾಜರಾಗಿ ಅಮಾನುಲ್ಲರ ಪರವಾಗಿ ಚಳವಳವುಂಟುಮಾಡಲ ಶಾಮಿ ಪೀರನ್ನು ಅಫಘಾನಿಸ್ಥಾನಕ್ಕೆ ಕಳುಹಿಸಿ ನಂತೆ. ಜರ್ಮನಿಯು ಕೂಡಾ ಶಾಮಿ ಪೀರರಿಗೆ ಬೆಂ ಲವನ್ನೀಯುವುದಂತೆ.

**ಶರೀಫರಿಗೆ ಮಂತ್ರಿಪದವಿ!**

ಮಧ್ಯಪ್ರಾಂತ್ಯದ ಮಂತ್ರಿಮಂಡಲಕ್ಕೆ ರಾಜಿಕೊಟ್ಟ ಮಿ। ಶರೀಫರನ್ನು ಪುನಃ ಮಂತ್ರಿಮಂಡಲಕ್ಕೆ ಸೇರಿ ಕೊಳ್ಳಬೇಕೆಂದು ಮೌಲಾನಾ ಅಬುಲ್‌ಕಲಾಮ ಅಝಾದರು ಶಿಫಾರಸು ಮಾಡಿರುವರಂತೆ.

**ಕಮಾಲ್‌ಪಾಶರ ಅಸ್ವಸ್ಥತೆ.**

ಟರ್ಕಿಯ ಸರ್ವಾಧಿಕಾರಿ ಕಮಾಲ್ ಪಾಶರು ಕಠಿ ಕಾಹಿಲೆಗೊಳಗಾಗಿದ್ದಾರೆ. ಅವರ ಪರಿಸ್ಥಿತಿಯು ಎಷ್ಟು ಕಠಿಣವಾಗಿದೆಯೆಂದರೆ ಅವರ ಬದಲಿಗೆ ತಾತ್ಕಾಲಿ ಅಧ್ಯಕ್ಷರಾಗಿ ಮೊದಲಿನ ಪ್ರಧಾನರಾದ ಜನರಲ್ ಇಸ್ಮತ್ ಇನಿಯೋನು ಅಥವಾ ಫೀಲ್ಡ್ ಮಾರ್ಷಲ್ ಫಾಝಿ ಶಾಕ್ಮರ್‌ರವರು ಅವರ ಬಳಿಯಲ್ಲೇ ಇರುವ ಏರ್ಪಾಡು ಮಾಡಿದ್ದಾರೆ.

# ಜಾಗೃತ ಭಾರತದಲ್ಲಿ

ಇತ್ತೀಚೆಗೆ ನಡೆದ ಮದ್ರಾಸ್ ಎಸೆಂಬ್ಲಿಯಲ್ಲಿ ಮಹತ್ವದ ಅನೇಕ ಪ್ರಶ್ನೆಗಳು ಚರ್ಚಿಸಲ್ಪಟ್ಟವು. ಮಿ| ಯಂ. ಸಿ. ರಾಜರವರು ತಂದ ದೇವಸ್ಥಾನ ಪ್ರವೇಶ ಮಸೂದೆಯನ್ನು ಕಾಂಗ್ರೆಸ್ ಪ್ರಧಾನರಾದ ಶ್ರೀ. ರಾಜಾಜಿಯವರು ತಮ್ಮ ವಾದದಿಂದ ಹಿಂತೆಗೆಯಲೆತ್ನಿಸಿದರೂ ಮತಗಣನೆಯಲ್ಲೇ ಅದರ ನಿಶ್ಚಯವಾಗಬೇಕಾಯಿತು.

**ನವಂಬರದಲ್ಲಿ ಸರಕಾರೀ ಮಸೂದೆ—**ಯು ಮಲೆಬಾರಿನಲ್ಲಿ ಜಾರಿಗೆ ತರಲ್ಪಡುವುದೆಂದು ಪ್ರಧಾನ ಮಂತ್ರಿಗಳು ಆಶ್ವಾಸನೆಯಿತ್ತರು. ಒಮ್ಮೆಗೇ ಕಾಯಿದೆಯನ್ನು ಮಾಡುವುದರಿಂದ ಮಸೂದೆಯ ಧ್ಯೇಯವು ಕಾರ್ಯರೂಪಕ್ಕೆ ಬರಲಿಕ್ಕಿಲ್ಲವೆಂದು ರಾಜಾಜಿಯವರು ವಾದಿಸಿದ್ದರು.

**ಮಹತ್ವದ ತಪ್ಪೊಂದು—**ಮದ್ರಾಸ್ ಎಸೆಂಬ್ಲಿಯ ಸಭಾಭವನದಲ್ಲಿ ಮೊನ್ನೆ ನಡೆದುಹೋಯಿತು. ಮಿ| ಟಿ. ಟಿ. ಕೃಷ್ಣಮಾಚಾರ್ಯರು ತಂದ ಕ್ರಿಮಿನಲ್ ಲಾ ಎಮೆಂಡ್‌ಮೆಂಟ್ ಮಸೂದೆಯನ್ನು ಮುಂದೆ ತರಲು ಬಿಡದಿರುವುದು ಮಹತ್ವದ ಅಪರಾಧವೆಂದೇ ಹೇಳಬೇಕಾಗಿದೆ. ಕಾಂಗ್ರೆಸಿನ ಚುನಾವಣಾ ಪತ್ರಕ್ಕನುಸಾರವಾಗಿ ಮತ್ತು ಮಹಾತ್ಮಾಜಿಯವರಿಂದ ಮೊದಲ್ಗೊಂಡು ಸಾಮಾನ್ಯ ಧುರೀಣರು ಏಕ ಕಂಠದಿಂದ ಖಂಡಿಸಿದ ಅಮಾನುಷೀ ಕ್ರಿಮಿನಲ್ ಕಾಯಿದೆಯ ತಿದ್ದುಪಡಿ ಮಾಡುವುದು ಕಾಂಗ್ರೆಸ್ ಸರಕಾರದ ಪ್ರಾಮುಖ್ಯ ಕರ್ತವ್ಯವಿತ್ತು. ನಾಗರಿಕ ಹಕ್ಕುಗಳ ಮೇಲೆ ಗೋರಿಯನ್ನು ಕಟ್ಟುವ ಆ ಕಾಯಿದೆಯನ್ನು ಪ್ರಧಾನರಾದ ರಾಜಾಜಿಯವರು ತತ್ಕಾಲಕ್ಕೆ ಸಮರ್ಥಿಸಿರುವುದು ನಿಜವಾಗಿಯಯ ಅಕ್ಷಮ್ಯವಾಗಿದೆ. ಜನಪ್ರೀತ ಸರಕಾರವು ದಬ್ಬಾಳಿಕೆಯ ಕಾಯಿದೆಯನ್ನು ಆಕ್ಷೇಪಣಾರ್ಹವಾದ ಚಳವಳದವರ ಮೇಲೆ ಸಾಮಾನ್ಯ ರೀತಿಯಲ್ಲುಪಯೋಗಿಸಿದರೆ ಹಾನಿಯಿಲ್ಲವೆಂದು ಅವರು ವಾದಿಸಿದ್ದಾರೆ. ಹಿಂದೀ ವಿರೋಧ ಚಳವಳವು ಶುಷ್ಕವಾದುದು, ಎಂಬುದನ್ನು ಎಲ್ಲರೂ ಒಪ್ಪುವುದಿದ್ದರೂ ಬ್ರಿಟಿಷ್ ಸಾಮ್ರಾಜ್ಯಶಾಹಿಯ ಅನಿಷ್ಟ ಕಾಯಿದೆಯೊಂದನ್ನು ಕಾಂಗ್ರೆಸ್ ಸರಕಾರವು ತಾತ್ಕಾಲಿಕವಾಗಿ ಅಪ್ಪಿ ಹಿಡಿದು ಅದು ಬೇಕೆನ್ನುವುದು ಭೂಷಣವೆಂದು ಯಾವನೂ ಹೇಳಲಿಕ್ಕಿಲ್ಲ—

### ಪುನಃ ಮಂತ್ರಿಪದವಿ?



ಮಿ. ಶರೀಫರನ್ನು ಮಧ್ಯಪ್ರಾಂತ್ಯದ ಮಂತ್ರಿಗಳನ್ನಾಗಿ ಮಾಡಬಹುದೆಂದು ಮೌಲಾನಾ ಅಬುಲ್ ಕಲಮ್ ಆಝಾದರು ಶಿಫಾರಸು ಮಾಡಿರುವರು.

**ಚುನಾವಣಾ ಭರವಸೆ—**ಯನ್ನು ಕಾರ್ಯರೂಪಕ್ಕೆ ತರಲಿಲ್ಲವೆಂಬ ಆಕ್ಷೇಪವನ್ನು ಮದ್ರಾಸ್ ಕಾಂಗ್ರೆಸ್ ಪಕ್ಷವು ವಹಿಸುವಂತಾದುದು ಚೀನರದ ಸಂಗತಿಯಾಗಿದೆ. ಕಾಂಗ್ರೆಸ್ ಮಂತ್ರಿಮಂಡಲವು "ಆತ್ಮಹತ್ಯೆ"ಯನ್ನು ಮಾಡಲು ತಯಾರಿಲ್ಲದಿರುವುದು ಯೋಗ್ಯವಾದರೂ ಕಾಂಗ್ರೆಸಿನ ಧ್ಯೇಯದ ಮೇಲೆ ಗೋರಿ ಕಟ್ಟುವುದು ಕೂಡಾ ಸಮಂಜಸವಲ್ಲವೆಂದು ರಾಷ್ಟ್ರೀಯ ಪತ್ರಿಕೆಗಳು ಸ್ಪಷ್ಟಗೊಳಿಸಿವೆ.

**ಸುಭಾಷ್ ಜಿನ್ನಾ ಪತ್ರವ್ಯವಹಾರ—**ವು ಮೊನ್ನೆ ಸಾರ್ವಜನಿಕರೆದುರ ಬಂದು ಮುಸ್ಲಿಮ್ ಲೀಗಿನ ಶುಷ್ಕವಾದದ "ಮಹತ್ವ"ವನ್ನು ಬಯಲು ಮಾಡಿತು. ಲಕ್ನೋ ಒಪ್ಪಂದದ ಕಾಲದಲ್ಲಿ ಮುಸ್ಲಿಮ್ ಲೀಗ್ ಸ್ಥಾನಮಾನಗಳ ಕುರಿತು ವಾದಿಸದಿದ್ದರೂ ಈಗ ಅದಕ್ಕೆ ಪ್ರತಿಯಾಗಿ ಹೇಳುತ್ತಿದೆ. ಗಾಂಧಿ ಜಿನ್ನ ಪತ್ರವ್ಯವಹಾರಕ್ಕೆ ಇದಕ್ಕೂ, ಹೆಚ್ಚಿನ ವ್ಯತ್ಯಾಸವಿಲ್ಲ. ಮುಸ್ಲಿಮ್ ಲೀಗಿನ ಗೌರವಕ್ಕೆ ಕೊಡಲಿಪ್ರಯೋಗವಾಗುತ್ತಿದೆಯೆಂಬ ಭಯವು ಅವರ

ಧುರೀಣರಲ್ಲಿ ತುಂಬಿದೆಯೆಂದು ಪತ್ರವ್ಯವಹಾರದಿಂದ ವ್ಯಕ್ತವಾಗುತ್ತಿದೆ. ಕಾಂಗ್ರೆಸ್ ಮನೋವೃತ್ತಿಯ ಮುಸಲ್ಮಾನರು ಮುಸ್ಲಿಮ್ ಪ್ರಾತಿನಿಧ್ಯವನ್ನುಪಯೋಗಿಸ ಅರ್ಹರಲ್ಲವೆಂಬುವೇ ಮೊದಲಾದ ವಿಚಿತ್ರ ವಾದಗಳಿಂದ ಮಿ| ಜಿನ್ನರು ರಾಷ್ಟ್ರೀಯ ಸಂಘಟನೆಯ ದಾರಿಯಲ್ಲಿ ದೊಡ್ಡ ಆತಂಕಗಳನ್ನು ತಂದುಹಾಕಿದ್ದಾರೆ. ಕಾಂಗ್ರೆಸ್ ಮಸಲ್ಮಾನರು ಪ್ರಾತಿನಿಧ್ಯ ವಹಿಸಲನರ್ಹರೆಂದೆನ್ನುವ ಮುಸ್ಲಿಮ್ ಲೀಗು ಕೂಡಾ ಸಮಗ್ರ ಭಾರತದ ಮುಸ್ಲಿಮರ ಪರವಾಗಿ ವಾದಿಸರ್ಹವಾದುದಲ್ಲ.

**ಭಾರತದ ಸ್ವರಕ್ಷಣಾವ್ಯಯ—**ದ ಕುರಿತು ಸರ್ ಐವೋ ವೆಸೀಯವರು ಹೊರಡಿಸಿದ ಹೇಳಿಕೆಯನ್ನು ನೋಡುವಾಗ ಬ್ರಿಟನಿನ ಯುದ್ಧ ಖಾತೆಯು ಭಾರತೀಯರ ಅಭಿಪ್ರಾಯಕ್ಕೆ ವಿರುದ್ಧವಾಗಿ ಖರ್ಚನ್ನು ಮತ್ತಷ್ಟೂ ಹೆಚ್ಚಿಸುವುದು ಖಂಡಿತವೆಂದು ಸ್ಪಷ್ಟವಾಗುತ್ತದೆ. ಕೋಟಿಗಟ್ಟಲೆ ಹಣವು ಭಾರತೀಯ ಭಂಡಾರದಿಂದ ಸೈನ್ಯಕ್ಕಾಗಿ ಸಾಮ್ರಾಜ್ಯಶಾಹೀ ಸರಕಾರವು ಖರ್ಚುಮಾಡುವುದರಲ್ಲಿದೆ. ಇಷ್ಟು ಮಾತ್ರವಲ್ಲ, ಭಾರತೀಯರ ಸಮ್ಮತಿಯಿಲ್ಲದೆ ಸಾಮ್ರಾಜ್ಯದ ಯುದ್ಧಗಳಲ್ಲಿ ಭಾಗವಹಿಸಲು ಭಾರತೀಯರ ಸೈನ್ಯಕ್ಕೆ ಸೇರಿಸಲ್ಪಡುವ ನಿರ್ಣಯವೂ ಆಗುವುದರಲ್ಲಿದೆ.

### ಯುದ್ಧಖಾತೆಯು

ಭಾರತದ ಇಂದಿನ ಆರ್ಥಿಕ ಪರಿಸ್ಥಿತಿಯನ್ನು ನೋಡದೆ, ಅದರ ರಾಜಕೀಯ ಪರಿಣಾಮವನ್ನು ಲೆಕ್ಕಿಸದೆ, ತನ್ನ ನಿರ್ಣಯವನ್ನು ಜಾರಿಗೆ ತರುವುದರಲ್ಲಿದೆ. ಕೇಂದ್ರ ಸರಕಾರದ ಹಣದಲ್ಲಿ ಅರ್ಧಾಂಶಕ್ಕಿಂತ ಹೆಚ್ಚು ಹಣವನ್ನು ಸೈನ್ಯಖಾತೆಯು ನುಂಗುತ್ತಿದೆ. ಇದಕ್ಕೆ ಹಣವನ್ನು ವ್ಯಯಮಾಡುವುದರಿಂದ ರಾಷ್ಟ್ರಹಿತ ಕಾರ್ಯಗಳನ್ನು ಮಾಡಲು ಪ್ರಾಂತಿಕ ಸರಕಾರಗಳಿಗೆ ಹಣವಿಲ್ಲದಂತಾಗಿದೆ. ಈಗಾಗಲೇ ಪ್ರಾಂತಿಕ ಸರಕಾರಗಳು ಹಣಕ್ಕಾಗಿ ಗುಣುಗುಟ್ಟ ತೊಡಗಿದರೂ ಢಿಲ್ಲಿಯಲ್ಲಿರುವ ಹಾವಾಡಿಗ ಜೇಮ್ಸ್ ಗ್ರಿಗ್ಗರು ತಮ್ಮ ಕೊಳಲನ್ನೂದಿ ಸಮಾಧಾನಿಸುತ್ತಿದ್ದಾರೆ. ಆದರೆ ಈ ಚಾಣಾಕ್ಷತೆಯ ನಾಣ್ಯವು ಪ್ರಾಂತಿಕ ಸಂತೆಗಳಲ್ಲಿ ನಡೆಯುವುದು ಕಷ್ಟವಾಗಿದೆ.

---

### ಲಾರ್ಡ್ ಲೋಥಿಯಾನರು



ಫೆಡರೇಶನನ್ನು ಸ್ವೀಕರಿಸಿ ಅದರಲ್ಲಿ ಸುಧಾರಣೆಗಳನ್ನು ಮಾಡುವಂತೆ ಯತ್ನಿಸುವುದೊಳ್ಳೆಯದೆಂಬ ಬುದ್ಧಿವಾದವನ್ನು ಭಾರತೀಯರಿಗೆ ಕೊಟ್ಟಿದ್ದಾರೆ.

---

### ಲಾರ್ಡ್ ಲೋಥಿಯಾನರು

ಭಾರತಕ್ಕೆ ಬಂದು ತಮ್ಮ ಹಳೆಯ ಹಾಡನ್ನು ಪುನಃ ಹಾಡಿ ನವರಾಜ್ಯ ಘಟನೆಯಲ್ಲಿ ಗಣನೀಯ ವ್ಯತ್ಯಾಸಗಳನ್ನು ಮಾಡಬಹುದೆಂದಿದ್ದಾರೆ. ಫೆಡರಲ್ ವಿಭಾಗವನ್ನು ಹೇಗಾದರೂ ಜಾರಿಗೆ ತಂದು ಅದನ್ನು ಸುಧಾರಿಸಲು ಯತ್ನಿಸುವುದು ಲೇಸೆಂದು ಅವರು ಅಭಿಪ್ರಾಯಪಟ್ಟು ತನ್ನ ವಾದದ ನಿರರ್ಥಕತೆಯನ್ನು ಪುನಃ ಸ್ಪಷ್ಟಗೊಳಿಸಿದ್ದಾರೆ.

**ಕಾಂಗ್ರೆಸ್ ವರ್ಕಿಂಗ್ ಕಮಿಟಿ** ಸಭೆಯು ಸೆಪ್ಟೆಂಬರ ಮೊದಲನೆ ವಾರದಲ್ಲಿ ಮುಂಬಯಿಯಲ್ಲಿ ಸೇರಿ ಮಹತ್ವದ ಪ್ರಶ್ನೆಗಳನ್ನು ಚರ್ಚಿಸುವುದು. ಇದೇ ಸಮಯದಲ್ಲಿ ಔದ್ಯೋಗಿಕ ಮಂತ್ರಿಗಳ ಪರಿಷತ್ತು ಕೂಡಾ ಅಲ್ಲಿ ಜರಗಲಿದೆ. ಗಾಂಧಿಜಿಯವರ ಸೂಚನೆಗಳನ್ನು ಘಟನಾತ್ಮಕ ಉಪಸಮಿತಿಯು ವಿಮರ್ಶಿಸಿ ಅದನ್ನು ಕಾರ್ಯರೂಪಕ್ಕೆ ತರುವ ಕುರಿತು ಯೋಚಿಸುವುದು. ಕಾಂಗ್ರೆಸ್ ಅಧ್ಯಕ್ಷರು ಅಗೋಸ್ತು ೨೯ರಂದು ಮುಂಬಯಿಗೆ ತೆರಳಿ ಭಾರತೀಯ ವೈದ್ಯಕೀಯ ಸುಶ್ರೂಷಾ ಮಂಡಲವನ್ನು ಚೀನಕ್ಕೆ ಕಳುಹಿಸಿಕೊಡುವರು.

**ಬಂಗಾಲೀ ಬಿಹಾರ್ ಪ್ರಶ್ನೆ—**ಯ ತೀರ್ಮಾನಕ್ಕೋಸ್ಕರ ವಾರ್ಧದಲ್ಲಿ ಎರಡೂ ಪ್ರಾಂತ್ಯದವರು ಸಭೆ ಸೇರಿ ಭಾಷೆಗಳ ಸಮಸ್ಯೆಯನ್ನು ಬಗೆಹರಿಸಲೆತ್ನಿಸುವರು. ಬಾಬೂ ರಾಜೇಂದ್ರ ಪ್ರಸಾದರು ಮದರಾಸಿಗೆ, ಸೇಟ್ ಜಮನಾಲಾಲ್ ಬಜಾಜರೊಂದಿಗೆ ಬಂದವರು ವಾರ್ಧಕ್ಕೆ ಹಿಂತೆರಳಿ ಈ ಸಮಸ್ಯೆಯನ್ನು ಬಿಡಿಸಲೆತ್ನಿಸುತ್ತಿದ್ದಾರೆ.

---

# * ಹಿಟ್ಲರ್, ಸ್ಟಾಲಿನ್, ಮುಸ್ಸೋಲಿನಿ *

## ಇವರಲ್ಲಿಬ್ಬರು ಸಾಯುವರು.

### • ಅತ್ಯಾಶ್ಚರ್ಯಕರವಾದ ಭವಿಷ್ಯ! •


ಜಗತ್ತಿನ ಅತ್ಯಂತ ಪ್ರಸಿದ್ಧ ಗ್ರಂಥಕರ್ತರೂ, ಚಿಂತಕರೂ, ಆದ **ಷಾ ಡೆಸ್ಮಂಡ್** ಎಂಬವರು ಕಾದಂಬರಿ ರೂಪದಲ್ಲಿ ಮುಂದಿನ ಕೆಲವು ವರುಷಗಳ ಚರಿತ್ರೆಯನ್ನು ಬರೆದಿದ್ದಾರೆ.

ಲಂಡನಿನ "ಡೈಲೀ ಮಿರರ್" ಪತ್ರಿಕೆಯು ಅವರ ಭವಿಷ್ಯವನ್ನು ಲೇಖನರೂಪದಲ್ಲಿ ಬರೆಯಲು ಕೇಳಿಕೊಂಡಂತೆ ಷಾ ಡೆಸ್ಮಂಡ್ ರವರು ಈ ಕೆಳಗಿನ ಸಾರಾಂಶದ ಲೇಖನವನ್ನು ಬರೆದಿದ್ದಾರೆ. ಈ ಲೇಖನವು ಸಮಗ್ರ ಜಗತ್ತನ್ನೇ ಆಶ್ಚರ್ಯದಿಂದ ತುಂಬುವಂತಹದಾಗಿದೆ.



**ಹಿಟ್ಲರ್.**

ರಾಜಕೀಯ ದೃಷ್ಟಿಯಲ್ಲಿ ಬ್ರಿಟನನ್ನು ನಡೆಸುವ ಹಿಟ್ಲರ್ ಸ್ಟಾಲಿನ್, ಮುಸ್ಸೋಲಿನಿಯರಿಗೆ ತಾವು ಎಲ್ಲಿರುವೆವೆಂಬ ಅರಿವಿಲ್ಲ.



**ಮುಸ್ಸೋಲಿನಿ.**

ಒಂದೆರಡು ವರುಷಗಳಲ್ಲಿಯೇ ಯುರೋಪು ಭಯಂಕರವಾದ ಯುದ್ಧದಲ್ಲಿ ಸಿಲುಕುವುದು.

ಸರ್ವಾಧಿಕಾರಿಗಳಿಗೆ ಅತ್ಯಂತ ಹಾನಿಕಾರಕ ವರುಷವೆಂದರೆ ೧೯೪೩ನೆ ಇಸವಿ.

ಈ ವರುಷವು ಹಿಟ್ಲರನ ಜರ್ಮನಿಯ ಅಂತಿಮ ಕಾಲವಾಗಿದೆ. ಯುರೋಪಿನ ಯುದ್ಧವು ಮಹಾಯುದ್ಧದಂತಿರದೆ ಎಲ್ಲವೂ ಅಂತಃಕಲಹಗಳಾಗಿ ಪರಿಣಮಿಸುವುವು.

೦೦೦

ಆ ಕಾಲದಲ್ಲಿ ಅಡಾಲ್ಫ್ ಹಿಟ್ಲರನು ದಿಙ್ಮೂಢ ವ್ಯಕ್ತಿಯಾಗುತ್ತಾನೆ. ಬೆನಿಟೊ ಮುಸ್ಸೋಲಿನಿಯು ಕೆಲವು ವರುಷಗಳಿಂದಲೇ ತಬ್ಬಿಬ್ಬಾಗಿದ್ದಾನೆ. ಸ್ಟಾಲಿನನ ಪಾಡು ಕೂಡಾ ಬೇರೆಯಾಗಿಲ್ಲ. ಒಬ್ಬ ಸರ್ವಾಧಿಕಾರಿಗಳಿಂದಿಬ್ಬರು ಹಿಂಸಾತ್ಮಕವಾಗಿ ಕೊಲ್ಲಲ್ಪಡುವರು.

ಇಟಲಿಯು ತನ್ನ ಈಗಿನ ಆರ್ಥಿಕ ಮುಗಟ್ಟಿನಿಂದ ದೂರವಾಗಬಹುದು. ಆದರೆ ೧೯೪೧ರಲ್ಲಿ ಪ್ರಚಂಡ ಆರ್ಥಿಕ ನೆರೆಯಿಂದ ತಪ್ಪಿಸಿಕೊಳ್ಳುವಂತಿಲ್ಲ.

ಹಿಟ್ಲರನು ೧೯೪೩ರಲ್ಲಿ ತನ್ನ ಅಂತಿಮಾವಸ್ಥೆಯನ್ನು ಹೊಂದುವನು. ತನ್ನ ಸಾಮಿಪ್ಯದ ಮಿತ್ರರಿಂದಲೇ ಅವನು ಕೊಲ್ಲಲ್ಪಡುವನು. ಸ್ವಲ್ಪ ಸಮಯದಲ್ಲಿಯೇ ಜರ್ಮನಿಯಲ್ಲಿ ಯಾವತ್ತೂ ಹಸಿ ಪದಾರ್ಥವಿಲ್ಲದ ಪರಿಸ್ಥಿತಿಯು ಬಂದೊದಗಿದಾಗ ಎಲ್ಲರೂ ಅವನನ್ನು ಹೀಯಾಳಿಸುವರು.

ಅಡಾಲ್ಫ್ ಹಿಟ್ಲರನು ತನ್ನ ನಾಝೀ ತತ್ವವನ್ನುಳಿಸುವುದಕ್ಕಾಗಿ ಜರ್ಮನರನ್ನು ಮಹಾ ಅಂತಃ ಕಲಹದಲ್ಲಿ ಕೊಲ್ಲಿಸುವನು. ಅವನು ಬೆನಿಟೊ ಮುಸ್ಸೋಲಿನಿಯಂತೆ ಜಗತ್ತಿನ ರಾಷ್ಟ್ರಗಳ ಕಣ್ಣಿಗೆ ಮಣ್ಣೆರಚಿದ್ದಾನೆ. ಜರ್ಮನ್ ಅಂತಃ ಕಲಹವು ಶಾಂತಿಯ ರಕ್ಷಣೆಗಾಗಿ ತಲೆದೋರುವುದು.

ಎರಡೇ ವರುಷಗಳಲ್ಲಿ ರಷ್ಯದಲ್ಲಿ ಭಯಂಕರವಾದೊಂದು ದಂಗೆಯು ಪ್ರಾರಂಭವಾಗುವುದು. ಈ ದಂಗೆಗೆ ಟ್ರಾಟ್ಸ್ಕಿಯೇ ಮೂಲ ಕಾರಣನಾಗುವನು. ರಷ್ಯ, ಜಪಾನ್, ಇಟಲಿ, ಮತ್ತು ಜರ್ಮನಿಗಳಲ್ಲಿ ಅಂತಃ ಕಲಹವಾಗುವುದು ಖಂಡಿತ. ಜಪಾನಿನ ಜನನಿಯರು "ನಮ್ಮ ಮಕ್ಕಳನ್ನು ಹಿಂದೆ ಕೊಡಿರಿ" ಎಂದು ಕೇಳುವರು. ಅಲ್ಲಿಯ ಈಗಿನ ಸೈನಿಕ ಸರಕಾರವು ಸದ್ಯದಲ್ಲಿಯೇ ನಾಶವಾಗುವುದು.

ನಾಲ್ಕು ವರುಷಗಳಲ್ಲಿ ಬ್ರಿಟನಿನ ಪ್ರಜಾ ಸತ್ತೆಯು ಇನ್ನಾವುದಾದರೂ ಒಂದು ತತ್ವವಾಗಿ ಪರಿಣಮಿಸುವುದು. ನೆವಿಲ್ ಚೇಂಬರ್ಲೆನರು ಮುಂದಿನ ವರುಷ ಅಧಿಕಾರಚ್ಯುತರಾಗುವರು. ಲೇಬರ್ ಸರಕಾರವು ಅಧಿಕಾರಕ್ಕೆ ಬರುವುದು ಸಂಶಯಾಸ್ಪದ.

ಧಾರ್ಮಿಕ ಚಳವಳವು ಕೆಲವೇ ವರುಷಗಳಲ್ಲಿ ಸಮಗ್ರ ಜಗತ್ತನ್ನಾವರಿಸುವುವು. ಈ ಚಳವಳವು ಬ್ರಿಟನಿನಲ್ಲಿಯೇ ಪ್ರಾರಂಭವಾಗುವುದು. ಈ ನವ ಧರ್ಮವು ಅಂಧಶ್ರದ್ಧೆಗಳನ್ನು ಲಕ್ಷಿಸದೆ ವಿಶ್ವದ ಜನರ ಜೀವನವನ್ನು ಶಾಂತಿಮಯವನ್ನಾಗಿ ಹೇಗೆ ಮಾಡುವುದೆಂದು ಪರ್ಯಾಲೋಚಿಸಿ, ಅದನ್ನೇ ಕಾರ್ಯರೂಪಕ್ಕೆ ತರಲು ಯತ್ನಿಸುವುದು.

**Join our new Scheme of Deposit and enrich yourself by saving petty cashes.**

# SAVE AS YOU PLEASE

***Refundable with $6\frac{1}{4}$ per cent after 5 years.***

**FINANCE DEPARTMENT,**
**Vyasa Bhavanam,**
**Car Street.**

**SUPPLY AGENCY LIMITED, UDIPI.**

***BROTHERLY LOVE*** ***HOMELY FEELINGS***
***AND***
***ELDERLY INSTRUCTIONS***
**is what you find in**

# Shanthinikethana School, Kurady

(S. Kanara)

Hence the most suitable and the best place for the education of your youngsters. For particulars write to:

***MANAGER***
**SHANTHINIKETHANA, KURADY**
**BRAHMAVAR P. O.** (S. Kanara.)

# ನಮ್ಮಲ್ಲಿ

## - ಕನ್ನಡ ಪುಸ್ತಕಗಳು -

| | | | | |
|---|---|---|---|---|
| ಶಾಂತಿ ಪುರಾಣ . . | | 3 | 0 | 0 |
| ಚಂದ್ರಗುಪ್ತ ಚಕ್ರವರ್ತಿ . | | 1 | 0 | 0 |
| ಸರಸ್ವತೀ . . . (ಸಾಮಾಜಿಕ ನಾಟಕ) | | 0 | 8 | 0 |
| ಒಂದೇ ತಿಂಗಳಲ್ಲಿ ಇಂಗ್ಲಿಷ್ . (ಇಂಗ್ಲಿಷ್ ಸ್ವಯಂಬೋಧಿನಿ) | | 0 | 8 | 0 |
| ಸಾಮುದ್ರಿಕ ಶಾಸ್ತ್ರ . . | | 0 | 8 | 0 |
| ಹೊಂದೊವಲ ಹಂಬಲು. . | | 0 | 6 | 0 |
| ವೀರಭೂಮಿ (ಕತೆ) . . | | 0 | 1 | 6 |
| ಗೀತೆಯ ಕೈಗನ್ನಡಿ . . | | 0 | 4 | 0 |
| ಗೀತೆಯ ಮೂಲ . . (ಈಶಾವಾಸ್ಯೋಪನಿಷತ್ತಿನ ಭಾಷಾಂತರ) | | 0 | 1 | 0 |
| ಸ್ತ್ರೀಪದ್ಯರತ್ನಾಕರ ಭಾಗ | I | 0 | 1 | 0 |
| ಡಿ | II | 0 | 1 | 0 |
| ಡಿ | III | 0 | 1 | 0 |
| ಡಿ | IV | 0 | 1 | 0 |
| ಪುರಂದರ ದಾಸರ ಪದ ಭಾಗ | I | 0 | 4 | 0 |
| ಡಿ | II | 0 | 4 | 0 |
| ಡಿ | III | 0 | 4 | 0 |
| ಮಧುವನ . . . | | 1 | 8 | 0 |
| ಧರ್ಮಸಂಕಟ (ಸಾಮಾಜಿಕ ನಾಟಕ) | | 0 | 4 | 0 |
| (Gouthama the Budaha) | | 0 | 8 | 0 |
| ಭಗವದ್ಗೀತೆ . . . | | 0 | 2 | 0 |
| ಕುಕ್ಕುಟ ಪಂಚಾಂಗ . . | | 0 | 1 | 0 |
| ಮಗ್ಗಿ . . . . | | 0 | 1 | 6 |
| ತುಳುನಾಡ್ ತಿಲಕ ಪಂಚಾಂಗ . | | 0 | 1 | 0 |
| ವೈಜಯಂತೀ ಪಂಚಾಂಗ . | | 0 | 2 | 6 |
| ಜಯಪಾಂಡ್ಯ ವಿಜಯ . . | | 0 | 2 | 0 |

## - ತುಳು ಪುಸ್ತಕಲು -

| | | | |
|---|---|---|---|
| ಕೃಷ್ಣಸಂಧಾನ (ಪ್ರಸಂಗ) . (ಕನ್ನಡ ಕೃಷ್ಣಸಂಧಾನವನ್ನೊಳಗೊಂಡಿದೆ.) | 0 | 8 | 0 |
| ಬಲೀಂದ್ರ (ಕತೆ) . . (ವಿಮರ್ಶಾತ್ಮಕ ಲೇಖನ) | 0 | 2 | 0 |
| ಅಳಿಯ ಸಂತಾನ ಕಟ್ಟ್‌ದ ಗುಟ್ಟು | 0 | 4 | 0 |
| ಕಾನಿಗೆ (ಪದ್ಯ) . . | 0 | 4 | 0 |
| ತುಳುವ್ಯಾಕರಣ . . | 0 | 8 | 0 |
| ಜನಮಲ್ರ್ (ನಾಟಕ) . . | 0 | 6 | 0 |
| ಮದ್‌ಮಾಳತ್ತ್ ಮದ್‌ಮಾಯೆ. (ಕತೆ) | 0 | 2 | 0 |
| ಬಂಗಾರ್‌ದಂಗಿದ ಕತೆ . . | 0 | 1 | 0 |
| ಪದ್ಯಮಾಲಿಕೆ . . | 0 | 1 | 0 |
| ಸತ್ಯನಾರಾಯಣ ಕತೆ. . | 0 | 8 | 0 |
| ಸತೀ ಕಮಲೆ (ನಾವೆಲ್) . . | 0 | 6 | 0 |
| ಕನ್ಯೋಪದೇಶ . . . | 0 | 2 | 0 |
| ಕನ್ನಡಕೊ . . . | 0 | 0 | 6 |
| ವಾಲಿಸುಗ್ರೀವರ ಕಾಳಗ. . | 0 | 3 | 0 |
| ಬೊಬ್ಬರ್ಯ (ಪಾಡ್ದನ) . . | 0 | 2 | 0 |
| ತೊಡಕಿನಾರ್ ,, . . | 0 | 2 | 0 |
| ಮುಂಡತ್ತಾಯ ,, . . | 0 | 2 | 0 |
| ವಿಶ್ವರೂಪ ದರ್ಶನ . . (ಗೀತೆಯ II ನೇ ಅಧ್ಯಾಯದ ಪದ್ಯಾತ್ಮಕ ಭಾಷಾಂತರ) | 0 | 1 | 0 |
| ಭಗವದ್ಗೀತೆ . . | 0 | 5 | 6 |

**ತುಳುನಾಡ್ ಪ್ರೆಸ್,**

**ಉಡುಪಿ, ದ. ಕ.**

# ವಿಚಿತ್ರವಾದರೂ ಪೂರಾ ಸತ್ಯ

## ಬ್ರಹ್ಮಚಾರಿಗಳ ಮೇಲೆ ನಿಷೇಧ

ಇಟೆಲಿಯಲ್ಲಿ ಬಹ್ಮಚಾರಿಗಳ ಮೇಲೆ ನಿಷೇಧಾಜ್ಞೆಯು ಜಾರಿ ಮಾಡಲ್ಪಟ್ಟಿದೆ. ಯೋಗ್ಯ ಫ್ಯಾಸಿಸ್ಟರಾಗಬೇಕಾದರೆ ಆದಷ್ಟು ಬೇಗನೆ ಮದುವೆಯಾಗಿ ಕೂಡಿದಷ್ಟು ಮಕ್ಕಳನ್ನು ಮಾಡಬೇಕು. ಆದರೆ ಇವರು ಇದಕ್ಕೆ ವ್ಯತಿರಿಕ್ತವಾಗಿ ನಡೆಯುವುದರಿಂದ ಇತ್ತೀಚೆಗೆ ಹೊರಿಸಲ್ಪಟ್ಟ ಆಜ್ಞೆಗನುಸಾರವಾಗಿ ಬ್ರಹ್ಮಚಾರಿಗಳು ಯಾವ ಸ್ಥಾನಕ್ಕೂ ಆರಿಸಲ್ಪಡಲು ಅರ್ಹರಲ್ಲ. ಈ ಕಾಯಿದೆಯು ವಿಧುರರಿಗೂ ಅನ್ವಯಿಸುತ್ತದೆ. ಈಗಾಗಲೇ ಮಕ್ಕಳಿಲ್ಲದವರೂ, ಮದುವೆಯಾಗದವರೂ ಎಲ್ಲಾ ಆಫೀಸುಗಳಿಂದ ಹೊರದೂಡಲ್ಪಟ್ಟಿದ್ದಾರೆ.

ಂ ಂ ಂ

## ಹಾಲಿನ ಬಟ್ಟೆ!

ಜರ್ಮನಿಯ ಒಬ್ಬ ರಸಾಯನ ಶಾಸ್ತ್ರಜ್ಞರು ಹಾಲಿನಿಂದ ಬಟ್ಟೆ ಮಾಡುವುದನ್ನು ಕಂಡು ಹಿಡಿದಿದ್ದಾರೆ.

ಂ ಂ ಂ

## ಕೋಟ್ಯಾಧಿಪತಿ ಭಿಕ್ಷುಕ

ಪೋಲೆಂಡ್ ಮತ್ತು ಲಿತುವೇನಿಯಗಳ ಗಡಿನಾಡಿನಲ್ಲಿ ಬ್ರಾರ್ಝ್ ಕೊವ್ ಎಂಬ ಭಿಕ್ಷುಕನು ಮೊನ್ನೆ ಬಡವಿದ್ಯಾರ್ಥಿಗಳಿಗಾಗಿ ಒಂದು ಮಿಲಿಯ ಪವನುಗಳನ್ನು ದಾನಮಾಡಿದ್ದಾನೆ. ಅವನಿಗೆ ಮೂವತ್ತೈದು ಮನೆಗಳಿವೆ.

ಂ ಂ ಂ

## ವಿಚಿತ್ರ ಶಿಕ್ಷೆ

ರುಮೇನಿಯದ ಮೂರು ಹೆಂಗಸರು ಸಾರ್ವಜನಿಕರೆದುರು ರಷ್ಯನ್ ಭಾಷೆಯಲ್ಲಿ ಮಾತಾಡಿದ್ದಕ್ಕಾಗಿ ಅವರನ್ನು ಸರಕಾರೀ ನೌಕರಿಯಿಂದ ತೆಗೆದುಹಾಕಿದ್ದಾರೆ.

ಂ ಂ ಂ

## ಮೂವತ್ತಮೂರು ವರುಷದ ಅಜ್ಜ!

ಮೊನ್ನೆ ಇಟೆಲಿಯ ಕ್ಷೌರಿಕನೊಬ್ಬನಿಗೆ ಸರಕಾರದವರು ಒಂದು ಬಿರುದನ್ನು ದಯೆಪಾಲಿಸಿದ್ದಾರೆ. ಈ ಮಹಾಶಯನು ೧೯೦೩ರಲ್ಲಿ ಅಂದರೆ ತನ್ನ ೧೬ನೆಯ ವಯಸ್ಸಿನಲ್ಲಿ ಮದುವೆಯಾದನು. ಮರು ವರುಷ ಒಕ್ಟೋಬರ ತಿಂಗಳಲ್ಲಿ ಅವನಿಗೊಂದು ಹೆಣ್ಣು ಮಗು ಹುಟ್ಟಿತು. ೧೯೩೬ರಲ್ಲಿ ಅಂದರೆ ಆಕೆಯ ೧೬ನಿಯ ವಯಸ್ಸಿನಲ್ಲಿ ಆಕೆಗೆ ಮದುವೆಯಾಗಿ ಒಂದು ಗಂಡು ಮಗು ಹುಟ್ಟಿತು. ಆಗ ಮಗುವಿನ ಅಜ್ಜನಿಗೆ ಕೇವಲ ೩೩ ವರುಷ ಪ್ರಾಯ.

---

## ತುಣುಕು-ಮಿಣುಕು

ಲಾರ್ಡ್ ಝೆಟ್ಲೆಂಡರು ಭಾರತಕ್ಕೆ ಬರುವರಂತೆ.

ಅವರು ಫೆಡರೇಶನಿನ ಕುರಿತು ಚರ್ಚಿಸಲು ಬರುವುದಲ್ಲವೆಂದು ನಾವು ಸ್ಪಷ್ಟವಾಗಿ ಹೇಳುತ್ತೇವೆ.

ಂ ಂ ಂ

"ಸಾವೊಂದಲ್ಲದೆ ಮತ್ತಾವುದೂ ನನ್ನನ್ನು ಕಾಂಗ್ರೆಸಿನಿಂದ ದೂರಗೊಳಿಸಲಿಕ್ಕಿಲ್ಲ"ವೆಂದರು ಗಡಿನಾಡಿನ ಮಿಯಾನ್ ಝಾಫರ್ ಷಾರವರು.

ಸತ್ತ ಬಳಿಕವೂ ಕಾಂಗ್ರೆಸನ್ನು ಬಿಡುವುದೇಕೆ? ಪರಲೋಕದಲ್ಲೊಂದು ಕಾಂಗ್ರೆಸ್ ಸಂಸ್ಥೆಯನ್ನು ಸ್ಥಾಪಿಸಬಾರದೇಕೆ?

ಂ ಂ ಂ

ಬಂಗಾಳದ ಶಾಂತಿಯನ್ನು ನಮ್ಮ ಕಾಲದಲ್ಲಿ ಯಾರೂ ಕೆಡಿಸದಿರುವುದು ಸಂತೋಷದ ಸಂಗತಿ-ಹೀಗೆಂದರು ಬಂಗಾಳದ ಪ್ರಧಾನರಾದ ಮಿ| ಫಜ್ಲುಲ್ ಹಕ್ಕರು.

ಪೂರ್ಣ ಸಮ್ಮತಿ. ಅವರೊಬ್ಬರ ಪಕ್ಷವಲ್ಲದೆ ಮತ್ತಾರೂ "ಶಾಂತಿ" ಯನ್ನು ಕೆಡಿಸಲಿಲ್ಲ.

ಂ ಂ ಂ

ವಜೀರಿಸ್ಥಾನದಲ್ಲಿ ಹೋರಾಡಿದ ಸೈನಿಕರಿಗೆ ಸರಕಾರವು ಬಿರುದುಗಳನ್ನು ಕೊಟ್ಟಿದೆ.

ಬ್ರಿಟಿಷ್ ಸರಕಾರದವರಿಗೆ "ಶಾಂತಿ ಸಂರಕ್ಷಕ" ರೆಂಬ ಬಿರುದು ಕೊಡಬೇಡವೆ?

---

## ಹೊಸ ಗಾದೆಗಳು.

ಹಲ್ಲಿದ್ದಾಗ ಕಡಲೆ; ಹಲ್ಲು ಬಿದ್ದಾಗ ಬಾಳೆಹಣ್ಣು.

ಭೂಪಾಲ ಸತ್ತರೆ ಗೋಪಾಲನಿಗೇನು?

ಎಲ್ಲರನ್ನು ಹೊಗಳದವ ಶುದ್ಧ ಮೂರ್ಖ.

S S S S

"ಸ್ವಧರ್ಮ ಬಿಟ್ಟರೂ ಸುಖಪಡೆಯಬೇಕು".

'ನಿನ್ನ ವೈರಿಯ ಮಗಳನ್ನು ಪ್ರೀತಿಸು".

---

ತಿರುವಾಂಕೂರು, ಹರಿಜನರಿಗೆ ದೇವಸ್ಥಾನ ತೆರೆದಿಟ್ಟು ಅಸ್ಪರ್ಶತಾ ನಿವಾರಣೆ ಮಾಡಿ ಶಹಭಾಸ್ ಕೇಳಿದ ಸಂಸ್ಥಾನ. ಇಷ್ಟು ಮಾಡಿತೆಂದು ಎಲ್ಲರೂ ಹೋಗಿ ತಿರುವಾಂಕೂರನ್ನು ಮುಟ್ಟಿಬರುವೆವೆಂಬ ಆಸೆ ಬಿಡಬೇಕು.

s s s s

ಅಂದರೆ ಮೊನ್ನೆ ತಿರುಚಿನಾಪಳ್ಳಿಯಲ್ಲಾದಂತಹ ರೈಲು ಅವಘಡವಾಗುತ್ತದೆಂಬ ಅರ್ಥವಲ್ಲ. ಶ್ರೀಮತಿ ಕಮಲಾದೇವಿಯರಿಗಾದಂತಹ ಅವಘಡವಾಗುವ ಸಂಭವವಿದೆ.

s s s s

ತ್ರಿವೇಂದ್ರಮಿನ ಯುವಕ ಸಮ್ಮೇಲನದ ಅಧ್ಯಕ್ಷತೆ ವಹಿಸಲು ಶ್ರೀಮತಿ ಕಮಲಾದೇವಿಯರು ತೆರಳಿದ್ದರು. ನೀವು ಎರಡು ತಿಂಗಳವರೆಗೆ ಇಲ್ಲಿ ಭಾಷಣ ಮಾಡಬಾರದು- ಕಾಲಿಡಕೂಡದು- ಎಂದು ತ್ರಿವೇಂದ್ರಮ್ ಜಿಲ್ಲಾ ಮೆಜಿಸ್ಟ್ರೇಟರ ನೋಟೀಸು.

s s s s

ಶ್ರೀಮತಿಯವರು ಸಮತಾವಾದ ಪ್ರಚಾರಮಾಡುವ ಜಾತಿಯವರು. ಅವರ ಭಾಷಣದಿಂದ ಶಾಂತಿ ಭಂಗವಾಗುವ ಸಂಭವವಿದೆಯೆಂದು ನೋಟೀಸಿನಲ್ಲಿತ್ತು.

s s s s

'ನಾನು ಹೋಗುವುದು ಬರುವುದು ನನ್ನ ಸ್ವಬುದ್ಧಿಯಿಂದಲೇ' ಎಂದು ಶ್ರೀಮತಿಯವರು ತ್ರಿವೇಂದ್ರಮಿಗೆ ನುಗ್ಗಿದರು. ಅವರ ದಸ್ತಗಿರಿಯೂ ಆಯಿತು!

s s s s

ಯಾರಾದರೂ ಬಂದು ಭಾಷಣ ಕೊಟ್ಟೊಡನೆ ಹಾಳಾಗಿ ಹೋಗುವಂತಹ- ಅಷ್ಟು ಸುಲಭ ಮೌಲ್ಯದ ಶಾಂತಿಯನ್ನು ತಿರುವಾಂಕೂರಿನ ಸರಕಾರವು ಇಟ್ಟುಕೊಳ್ಳಬಾರದಿತ್ತು!

# ಪಟಾಕಿ

ಶ್ರೀಮತಿಯವರು ನಮ್ಮ ಜಿಲ್ಲೆಯವರು. ನಮ್ಮ ಅನುಭವವನ್ನು ಹೇಳುವುದಾದರೆ ಅವರ ಭಾಷಣದಿಂದ ಎಲ್ಲಿಯೂ ಎಂದೂ ಶಾಂತಿ ಭಂಗವಾದದ್ದಿಲ್ಲ.

s s s s

ಎಲ್ಲಿಯಾದರೂ ಭಂಗವಾದುದಿದ್ದರೆ, ಅದು ಅವರ ಭಾಷಣದಲ್ಲಿರದೆ ಕೆಲಸದಲ್ಲಿ ಮಾತ್ರವಿದ್ದ ಸಂಗತಿಗಳಿಂದ ಹೊರತು ಭಾಷಣದಿಂದ ಖಂಡಿತವಾಗಿಯೂ ಅಲ್ಲ.

s s s s

ತನ್ನ ಮಾತನ್ನು ತಪ್ಪದೆ ಕೇಳುವವರು ಯಾವ ವರ್ಗದವರೇ ಇರಲಿ, ಅವರ ಶಾಂತಿಯನ್ನು ಕೆಡಿಸುವ ಅಭ್ಯಾಸವು ಶ್ರೀಮತಿಯವರಲ್ಲಿಲ್ಲ. ತಿರುವಾಂಕೂರು ಸರಕಾರದಂತೆ ಅವರ ಮಾತು ಕೇಳಲಿಷ್ಟವಿಲ್ಲದವರ ಶಾಂತಿಯನ್ನು ಅವರು ಕೆಡಿಸಿರಬಹುದು!

s s s s

ಈ ದೃಷ್ಟಿಯಿಂದಲೂ ತಿರುವಾಂಕೂರು ಸರಕಾರದ ವರ್ತನೆಯು ಯದ್ವಾತದ್ವಾ!

s s s s

'ಹಿಂದುಸ್ಥಾನಿ' ಭಾಷೆಯನ್ನು ತಡೆಗಟ್ಟಲು ಹಿಂದೀ ವಿರೋಧಿಗಳು ಮದ್ರಾಸಿನಲ್ಲಿ ಮುಖ್ಯ ಮಂತ್ರಿಗಳ ಮನೆಯಿದಿರು ಪಹರೆ ನಡೆಸುತ್ತಿದ್ದಾರೆ. "ಹಿಂದುಸ್ಥಾನಿ"ಯ ಬಿಡಾರವು ಮುಖ್ಯ ಮಂತ್ರಿಗಳ ಮನೆಯಲ್ಲಿಯೆ?

s s s s

ಇಂಥ ಇಬ್ಬರು ಪಹರೆಗಾರರನ್ನು ಕೈದು ಮಾಡಿಸಿ ಮೆಜಿಸ್ಟ್ರೇಟರ ಮುಂದೆ ತಂದಾಗ 'ನಂಬ್ರ ಚಾರ್ಜು ಮಾಡಬೇಡಿ; ರೈಲು ಚಾರ್ಜು ಕೊಡಿ! ನಾವು ಸೀದಾ ನಮ್ಮ ಮನೆಗೆ ಹೋಗುತ್ತೇವೆ' ಎಂದು ಬೇಡಿಕೊಂಡರು.

s s s s

ಒಮ್ಮೆ ಮನೆ ಬಿಟ್ಟವರಿಗೆ ತಿರುಗಿ ಮನೆ ಸೇರುವದೇ ಕಷ್ಟವಾಗಿದೆ. ಮಾನ್ಯ ಆಚಾರ್ಯರೂ ಮನೆ ಬಿಟ್ಟು ಕಷ್ಟಪಡಬೇಕೇಕೆ? ಅಂತೂ ಮನೆಯಿದಿರಿನಲ್ಲಿ ಪಹರೆ ನಡೆಯುವದು ತಮ್ಮ ಮನೆ ನೋಡುವ ಆಶೆಯಿಂದಲೆ!

s s s s

'ಹಿಂದುಸ್ಥಾನಿಯನ್ನು ಖಡ್ಡಾಯವಾಗಿ ಮಾಡಿದರೆ ಪ್ರಾಣದ ಜಾಗ್ರತೆ ನೋಡಿಕೊಳ್ಳಿ' ಎಂದು ಮದ್ರಾಸು ಮಂತ್ರಿಗಳಿಗೆ ಕೆಂಪು ಪತ್ರಗಳು ಬರುತ್ತಿವೆಯಂತೆ!

s s s s

ಮಂತ್ರಿಗಳೇಕೆ ಹೆದರಬಾರದು? ಬರೆದವರ ಕೈಯ ಕಾಗದವೇ ಸಿಟ್ಟಿನಿಂದ ಕೆಂಪಾಗಿರುವಾಗ, ಕಣ್ಣುಗಳೆಷ್ಟು ಕೆಂಪಡರಿರಬೇಕು!

s s s s

ಒಬ್ಬ ಮಂತ್ರಿಯವರಿಗೆ ಬಂದ ಕೆಂಪು ಕಾಗದದಲ್ಲಿ ಒಂದು ಪಿಸ್ತೂಲಿನ ಚಿತ್ರವೂ ಇತ್ತಂತೆ. ನೋಡಿದೊಡನೆ ಮಂತ್ರಿಗಳಿಗೆ ಕಣ್ಣು ಕತ್ತಲೆ ಬಂದ ಸುದ್ದಿ ಬಂದಿಲ್ಲ!

s s s s

ಮಂತ್ರಿಯವರದನ್ನು ಆ ರೀತಿ ಶಾತ್ಸಾರ ಮಾಡುವದಕ್ಕಿಂತ ಯಾವುದಾದರೊಂದು ಪಾಠಶಾಲೆಗೆ ದಾನ ಮಾಡುವದುತ್ತಮ. 'ಈ ಚಿತ್ರದಾಕಾರದ ಪಿಸ್ತೂಲಿನಿಂದ ಹೊಡೆದರೆ ಈ ಕಾಗದದ ಬಣ್ಣದ ರಕ್ತ ಹೊರಗೆ ಬರುತ್ತದೆ, ಮಕ್ಕಳೇ!' ಎಂದು ಉಪಾಧ್ಯಾಯರಾದರೂ ಅದನ್ನು ತೋರಿಸಿ ಪಾಠಮಾಡಿಯಾರಲ್ಲವೆ.

—ದೂವು.

# "ಪಿಗ್ಮಿ ಶೀರೆ"

ಲೇಖಕ: 'ಲಕ್ಷ್ಮೀಪ್ರಿಯ'

**ರಮಾ:**—ಏನೆ ಲಲಿತಾ, ಇಷ್ಟು ದಿನ ಐದಾರು ರೂಪಾಯಿ ಶೀರೆಗಳನ್ನುಟ್ಟುಕೊಂಡಿದ್ದವಳು-ಈ ದಿನ ಒಳ್ಳೇ ಬನಾರಸ್ ಶೀರೆ ಉಟ್ಟುಕೊಂಡಿದ್ದಿಯೆ? ಎಲ್ಲಿಂದ ಬಂತು?

**ಲಲಿತಾ:** –ಇದು ಪಿಗ್ಮಿ ಶೀರೆ ರಮಾ!

**ರಮಾ:**—ಅಂದರೇನಮ್ಮ. ನನಗೊಂದೂ ಅರ್ಥವಾಗುವದಿಲ್ಲವಮ್ಮ.

**ಲಲಿತಾ:**—ಯಾರಿಗೂ ಅರ್ಥವಾಗುವುದಿಲ್ಲ. ಇಲ್ಲಿ ಉಡುಪಿಯಲ್ಲಿ ದಿ ಕೆನರಾ ಇಂಡಸ್ಟ್ರಿಯಲ್ & ಬಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್ ಎಂಬ ಒಂದು ಬೇಂಕು ಉಂಟು. ಈಗ ಅದಕ್ಕೆ ತುಂಬಾ ಶಾಖೆಗಳಿದ್ದು ಲಕ್ಷಾಂತರ ರೂಪಾಯಿ ವಹಿವಾಟು ಮಾಡುತ್ತದೆ. ನಾನು ಹೇಳುವ ಮಾತು, ಎಂಟು ವರ್ಷ ಕೆಳಗಿದ್ದು. ನಾವು ಉಡುಪಿಯಲ್ಲಿದ್ದಾಗ ಅದು ಸಣ್ಣ ಬ್ಯಾಂಕಾಗಿತ್ತು.

**ರಮಾ:**—ನಾನು ಶೀರೆ ಸಮಾಚಾರ ಕೇಳಿದರೆ ಬೇಂಕಿನ ವಿಷಯ ಮಾತಾಡುತ್ತೀಯೆ.

**ಲಲಿತಾ:**—ತಾಳಮ್ಮ. ಶೀರೆ ಕಥೇನೆ ಹೇಳುತ್ತಿದ್ದೇನೆ. ಆ ಬೇಂಕಿನಲ್ಲಿ ಪಿಗ್ಮಿ ಎಂಬದೊಂದು ಡಿಪಾಸಿಟ್ ಕ್ರಮ ಉಂಟು. ಅದಕ್ಕೆ ಭಾಸ್ಕರರಾಯರೆಂಬವರು ಪಿಗ್ಮಿ ಹಣವನ್ನು ಮನೆಮನೆಗೆ ಹೋಗಿ ವಸೂಲು ಮಾಡುತ್ತಿದ್ದರು. ಯಾವುದೋ ಒಂದು ಸಂದರ್ಭದಲ್ಲಿ ಅವರಿಗೂ ನಮ್ಮ ಯಜಮಾನಂಗೂ ಸ್ನೇಹವಾಗಿ ಅವರ ದಾಕ್ಷಿಣ್ಯಕ್ಕೊಳಪಟ್ಟು ನಮ್ಮ ಯಜಮಾನರೂ ಪಿಗ್ಮಿ ಫಂಡಿಗೆ ಹಣ ಕಟ್ಟುತ್ತಿದ್ದರು.

**ರಮಾ:**—ಆದಕ್ಕೆ ಹಣ ಕಟ್ಟಿದರೆ ಶೀರೆ ಕೊಡುತ್ತಾರೆಯೆ?

**ಲಲಿತಾ:**—ಅವಸರ ಮಾಡಬೇಡ ಕಣೆ! ಕೇಳಮ್ಮ. ಭಾಸ್ಕರರಾಯರು ಆಗಾಗ ಮನೆಗೆ ಬಂದು ಎರಡಾಣೆ ನಾಲ್ಕಾಣೆ ತೆಗೆದುಕೊಂಡು ಹೋಗುತ್ತಿದ್ದರು. ನಮ್ಮ ಯಜಮಾನರ ಕತೆ ನಿಮಗೆ ಗೊತ್ತುಂಟಲ್ಲ. ಇಷ್ಟವಿಲ್ಲದಿದ್ದರೂ ದಾಕ್ಷಿಣ್ಯಕ್ಕಾಗಿ ಕೊಡುತ್ತಿದ್ದರು ಒಂದು ವರ್ಷದಲ್ಲಿ ನಮಗೆ ಉಡುಪಿಯಿಂದ ಇಲ್ಲಿಗೆ ವರ್ಗವಾಯಿತು.

**ರಮಾ:**—ಏನೇ ಭಾಸ್ಕರರಾಯರು ಶೀರೆ ಕಳುಹಿಸಿದರೆ? ಅವರಿಗೂ ನಿನಗೂ ಸ್ನೇಹವಿತ್ತೆ?

**ಲಲಿತಾ:**—ಏನೇ ಅಧಿಕಪ್ರಸಂಗ ಮಾತಾಡುತ್ತಿ? ನಾನು ಹೇಳುವುದಿಲ್ಲ. ಸ್ವಲ್ಪವೂ ಸಹನವಿಲ್ಲ ನಿನಗೆ.

**ರಮಾ:**–ಕೇಳುತ್ತೇನೆ ಮಹಾರಾಯಳೇ! ಸುಮ್ಮನೆ ಗೇಲಿಮಾಡಿದೆ. ಬೇಸರ ಪಡಬೇಡ. ಕತೆ ತಮಾಷೆಯಾಗಿದೆ, ಹೇಳು.

**ಲಲಿತಾ:**—ಇಲ್ಲಿಗೆ ಬಂದ ಮೇಲೆ ಕೇಳಿದವರೂ ಇಲ್ಲ. ಕಟ್ಟಿದವರೂ ಇಲ್ಲ. ಸುಮಾರು ರೂಪಾಯಿ ಪಿಗ್ಮಿ ತಿಂದಿತು. ಎಲ್ಲಾ ಹೋಯಿತು. ಎಂದು ಕೆಲಸವು ಯದ ವರೆಗೆ ಗುಣುಗುಟ್ಟುತ್ತಿದ್ದರು. ಮತ್ತೆ ಮರೆತೇ ಹೋಯಿತು ೧೫ ದಿವಸದ ಕೆಳಗೆ ನಾನು ದೇವಸ್ಥಾನದ ಕಡೆಗೆ ಹೋಗುತ್ತಿದ್ದಾಗ ಅದೇ ಭಾಸ್ಕರರಾಯರು ಆಕಸ್ಮಾತ್ತಾಗಿ ಸಿಕ್ಕಿದರು. ನನಗೆ ಅವರ ಗುರುತ ಆಗದಿದ್ದರೂ ಅವರೇ ನನ್ನ ಗುರುತು ಹಿಡಿದು ಮಾತನಾಡಿದರು. ಏನೋ ಉಡುಪಿಯ ಕೆನರಾ ಮ್ಯೂಚುವಲ್ ಇನ್ಶೂರನ್ಸ್ ಕಂಪೆನಿಯ ಕೆಲಸಕ್ಕೆ ಬಂದಿದ್ದರಂತೆ. 'ಏನು ಲಲಿತಮ್ಮನವರೇ ನಿಮ್ಮ ಗಂಡ ಪಿಗ್ಮಿ ಹಣವನ್ನು ಬೇಂಕಿನಲ್ಲಿಯೇ ಬಿಟ್ಟಿದ್ದಾರೆ. ನೀವು ಇರುವ ವಿಳಾಸ ಕೂಡ ನಮಗೆ ಗೊತ್ತಿಲ್ಲ' ಎಂದು ಹೇಳಿ ನಮ್ಮ ಯೋಗಕ್ಷೇಮವನ್ನು ಕೇಳಿದರು. ಆ ಹೊತ್ತು ದೈವವಶಾತ್ ನಮ್ಮವರು ವೇಣೂರಿಗೆ ಹೋಗಿದ್ದರು.

**ರಮಾ:**—ಭಾಸ್ಕರರಾಯರು ರಾತ್ರಿ ಮನೆಯಲ್ಲಿಯೇ ಇದ್ದರೆ?

**ಲಲಿತಾ:**—ಸಾಕೆ ನಿನ್ನ ಚೇಷ್ಟೆ. ನಾನು ಹೋಗುತ್ತೇನೆ.

**ರಮಾ:**—ಕೋಪಮಾಡಬೇಡ ಲಲಿತಾ! ಪಿಗ್ಮಿ ಶೀರೆ ಕತೆ ಹೇಳು. ಬಹಳ ಸ್ವಾರಸ್ಯವಿದೆ. ನಾನು ತಮಾಷೆಗೆ ಹೇಳಿದ್ದಮ್ಮ, ನಿನ್ನ ಗುಣ ನನಗೆ ಗೊತ್ತಿಲ್ವೆ.

**ಲಲಿತಾ:**–ಕಡೆಗೆ ಪಿಗ್ಮಿಹಣ ಪಡಕೊಳ್ಳಲಿಕ್ಕೆ ಬೇಕಾದ ಮಾಹಿತಿಗಳನ್ನು ಪಡಕೊಂಡು ಒಂದು ರಶೀದಿಯನ್ನು ಪಡಕೊಂಡೆ. ರಶೀದಿ ಕಳುಹಿಸಿದ ಕೂಡಲೆ ಹಣ ಕಳುಹಿಸುವ ವ್ಯವಸ್ಥೆ ಮಾಡುತ್ತೇನೆ ಎಂದು

ಭಾಸ್ಕರ ರಾಯರು ಹೇಳಿದರು. ಮರುದಿನ ಅವರು ಬಂದ ಕೂಡಲೆ ಎಲ್ಲಾ ಸಂಗತಿಯನ್ನು ಹೇಳಿದೆನು. ಮೊತ್ತ ಮೊದಲು ಅವರು ನನ್ನ ಮಾತನ್ನು ನಂಬಲಿಲ್ಲ. ಕಡೆಗೆ ರಶೀದಿಗೆ ದಸ್ಕತು ಹಾಕಿ ಕಳುಹಿಸಿದರು. ನಿನ್ನೆ ಬೆಳಿಗ್ಗೆ ರೂ. ೪೫—೧೨—೯ ಮನಿಯಾರ್ಡರ್ ಬಂತು. ಅದನ್ನು ನೋಡಿ ನಮ್ಮ ಯಜಮಾನರು ತುಂಬಾ ಆಶ್ಚರ್ಯ ಪಟ್ಟರು. ಬೇಂಕಿನವರ ಕ್ರಮವನ್ನು ಕೊಂಡಾಡಿದರು. ಎಲ್ಲಾ ಹಣವನ್ನು ನನ್ನ ಕೈಯಲ್ಲಿ ಕೊಟ್ಟು ಇಷ್ಟ ಬಂದಂತೆ ಖರ್ಚು ಮಾಡು ಎಂದು ಹೇಳಿದರು. ನನಗೆ ಅದರಿಂದ ಒಂದು ಶೀರೆ ಪಡಕೊಳ್ಳಲಿಕ್ಕೆ ಹೇಳಿದೆನು. ಕಡೆಗೆ ಅಂಗಡಿಗೆ ಹೋಗಿ ಈ ಶೀರೆಯನ್ನು ಪಡಕೊಂಡೆವು. ಈ ಹೊತ್ತು ಈ ಶೀರೆಯನ್ನು ನಾನು ಉಡುತ್ತಿರುವಾಗ "ಈ ಪಿಗ್ಮಿ ಶೀರೆ ನಿನಗೆ ಒಪ್ಪುತ್ತದೆ" ಯೆಂದು ಅವರೇ ಹೇಳಿದರು. ಆದುದರಿಂದ ನಾನು ಇದಕ್ಕೆ ಪಿಗ್ಮಿ ಶೀರೆಯೆಂದು ಕರದದ್ದು.

**ರಮಾ:**—ನಮ್ಮ ಬೆಳ್ತಂಗಡಿಯಲ್ಲಿಯೂ ಈ ಬೇಂಕಿನ ಶಾಖೆಯನ್ನು ತೆರೆದರೆ ನಾವೂ ಹೀಗೆಯೇ ಸ್ವಲ್ಪ ಸ್ವಲ್ಪ ಹಣವನ್ನು ಶೇಖರಿಸಿ ಇಟ್ಟರೆ ಎಷ್ಟೋ ಪ್ರಯೋಜನವಾಗಲಿಕ್ಕಿಲ್ಲವೆ?

**ಲಲಿತಾ:**—ಆ ಬೇಂಕಿನವರು ಇಲ್ಲಿಗೆಲ್ಲಾ ಶಾಖೆ ತೆಗೆದುಕೊಂಡು ಬರಲಿಕ್ಕಿಲ್ಲ. ಆದರೂ ತಾನು ಪ್ರಯತ್ನ ಪಡುತ್ತೇನೆಂದು ನಿನ್ನೆ ಅವರು ಹೇಳಿದರು. ಆ ಬೇಂಕಿನ ಮೇಲೆ ನಮ್ಮವರಿಗೆ ತುಂಬಾ ವಿಶ್ವಾಸ ಬಂದು ಬಿಟ್ಟದೆ.

———


☞ ನಮ್ಮಲ್ಲಿ ☜

ಚಿನ್ನ ಮತ್ತು ಬೆಳ್ಳಿಯ ಆಭರಣಗಳ ಈಡಿನ ಮೇಲೆ ಕಡಿಮೆ ದರದ ಬಡ್ಡಿಯಲ್ಲಿ ಸಾಲ ಕೊಡಲಾಗುವುದು. ಅಲ್ಲದೆ ಆರ್ಡರ್ ಕೊಟ್ಟಲ್ಲಿ ಗಿರಾಕಿಗಳ ಮನಸ್ಸಿಗೊಪ್ಪುವ ಅಪ್ ಟು ಡೇಟ್ ಫೇಶನಿನ ಆಭರಣಗಳನ್ನು ಕ್ಲಪ್ತ ಕಾಲದಲ್ಲಿ ನಾಜೂಕಾಗಿ ತಯಾರಿಸಿಕೊಡುವೆವು.

**ಯು. ಕೆ. ಗೋವಿಂದ ನಾಯಕ್**

ಸರಾಫ್ ದಿ. ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನಿನ ಸಮೀಪ ಉಡುಪಿ.

**ಅಂತರಂಗಕ್ಕೆ ಬೇಗನೆ ಚಂದಾದಾರರಾಗಿರಿ.**

# AMALAKI HAIR OIL ಆಮಲಕೀ ತೈಲ

ವಿದ್ಯಾರ್ಥಿಗಳಿಗೂ, ಸಕಲ ಸ್ತ್ರೀಪುರುಷರಿಗೂ, ನಿತ್ಯ ಕೇಶಪ್ರಸಾದನಾರ್ಥ ಪುಷ್ಪಗಂಧಾಮೋದಿತ ಉತ್ಕೃಷ್ಟ ಕೇಶವರ್ಧಕ ತೈಲ. ಮೆದುಳಿನ ಸ್ವಾಸ್ಥ್ಯಕ್ಕೂ ನೇತ್ರಾರೋಗ್ಯರಕ್ಷಣೆಗೂ, ಕೇಶಕಲಾಪದ ಬೆಳವಣಿಗೆಗೂ, ಸೌಂದರ್ಯ ವರ್ಧನೆಗೂ ಸಹಾಯಕವಾಗಿದೆ. ಈ ತೈಲವನ್ನು ನಿತ್ಯವೂ ಉಪಯೋಗಿಸುತ್ತಿದ್ದರೆ, ಶಾರೀರಿಕ ಹಾಗೂ ಮಾನಸಿಕ ಶ್ರಮೆಯಿಂದ ಪುರುಷರಿಗೂ, ಪ್ರಸವಾನಂತರದಲ್ಲಿ ಸ್ತ್ರೀಯರಿಗೂ ಸಾಮಾನ್ಯವಾಗಿ ಕೇಶಮೂಲಗಳು ನಿಸ್ಸತ್ವ ಹೊಂದಿ ಕೂದಲುಗಳ ಉದುರುವಿಕೆ, ಅಕಾಲದಲ್ಲಿ ನರೆಯುಂಟಾಗುವಿಕೆ ಇವೇ ಮೊದಲಾದ ದೋಷಗಳು ದೂರವಾಗಿ ಕೇಶಮೂಲಗಳು ದೃಢವಾಗುವುದರಿಂದ ಅಚ್ಚಕಪ್ಪಾದ ಕೂದಲುಗಳು ನಿಬಿಡವಾಗಿ ಬೆಳೆಯುವುವಲ್ಲದೆ ಮೊದಲೇ ನರೆತ ಕೂದಲುಗಳು ಸಹ ಕಪ್ಪಾಗಿ ಮುಖಶ್ರೀಯು ಲಾವಣ್ಯಪೂರ್ಣವಾಗುವುದು. ತಲೆನೋವು, ಸೂರ್ಯಾವರ್ತ ಅಥವಾ ಅರೆತಲೆನೋವು, ನೇತ್ರಜ್ವಾಲೆ, ಮೆದುಳಿನ ಉಷ್ಣತೆ, ತಲೆತಿರುಕು, ದುಃಸ್ವಪ್ನಪೂರ್ಣವಾದ ನಿದ್ರಾಭಂಗ ಮೊದಲಾದ ವಾತ, ಪಿತ್ಥ, ಜನಿತ ಶಿರೋದೋಷಗಳೂ ನಿವೃತ್ತವಾಗಿ ಸುಖವಾದ ನಿದ್ರೆಯು ಹತ್ತುವುದು. ಇಂತಹ ಸುಖನಿದ್ರೆಯಿಂದ ಸ್ಮೃತಿ, ಮೇಧಾ, ಉತ್ಸಾಹ, ವಿಚಾರಶಕ್ತಿ ಮೊದಲಾದ ಮಾನಸಿಕ ಶಕ್ತಿಗಳು ವಿಕಾಸಹೊಂದಿ ಚಿರಾರೋಗ್ಯ ಲಾಭವಾಗುವುದು.

4 ಔನ್ಸಿನ ಸೀಸೆ ಒಂದರ 0—11—0. 2 ಔನ್ಸಿನ ಸೀಸೆ ಒಂದರ 0—6—0

**SWADESHI OUSHADI BHANDARA, KUNJAL,**

BRAMAVAR P. O., S. Kanara.

*Udipi Stockists :—*

SRI BHARATA VASTU MANDIRA

# ಆಹಾರ ಪಚನೇಂದ್ರಿಯ ಕ್ರಮ

## (*Digestive System*)

ಬರೆದವರು: **ಶ್ರೀ. ಯನ್. ಶ್ರೀಪ್ರಸಾದ ರಾವ್,**
ಎಲ್. ಎಂ. ಪಿ.

ಮದ್ರಾಸ್ ಸರಕಾರದ ೧೯೩ರ
ಸ್ವರ್ಣ ಪದಕದಾರರು.

ಮಾನವ ಶರೀರದ ಬುನಾದಿಯಾದ ಅಸ್ಥಿಪಂಜರ, ಗಂಟುಗಳು ಮತ್ತು ಇವುಗಳ ಚಲನೆಯ ಸ್ನಾಯುವಿನ ಅಥವಾ ಮಾಂಸಖಂಡದ ವಿಷಯ ಸ್ವಲ್ಪ ವಿವರಿಸಿದ್ದಾಯಿತು. ಇದರ ಮೇಲೆ ಸ್ವಲ್ಪಕೊಬ್ಬು (*fat*) ಮತ್ತು ಜೋಡಿಸಿ ಸರಿಯಾದ ಆಕಾರಕೊಡುವ ರಚನೆಯೂ (*connective tissue*) ಉಂಟು. ಮತ್ತು ಇದರ ಮೇಲೆ ಕಪ್ಪು ಬಿಳಿ, ಭಂಗಾರ, ಮುಂತಾದ ಬಣ್ಣಗಳ ಚರ್ಮದ ಹೊದಿಕೆಯಿದೆ. ಈಗ ಹೀಗೆ ಚಲನೆಮಾಡಿ ಆಯಾಯ ಕೆಲಸ ಮಾಡುವುದಕ್ಕೆ ಸಾಮರ್ಥ್ಯವು ಎಲ್ಲಿಂದ ಬರುತ್ತದೆ ನೋಡುವಾ—ಈ ಶಕ್ತಿಯು ನರಗಳಿಂದ ಮತ್ತು ರಕ್ತದಿಂದ ಎನ್ನಬಹುದು. ಆದರೆ ಇವಕ್ಕೆ ಕೂಡಾ ಆಹಾರ ಬೇಕಲ್ಲವೆ? ಹೌದು, ತಾಯಿಯ ಗರ್ಭದಲ್ಲಿರುವಾಗ ಮಾತ್ರ ಮಗುವಿಗೆ ತಾಯಿಯ ರಕ್ತವೇ ಸಂರಕ್ಷಣೆ ಮಾಡುತ್ತದೆ. ಈ ಕರ್ಮಭೂಮಿಯಲ್ಲಿ ಹುಟ್ಟಿದಂದಿನಿಂದ ಮಗುವಿಗೆ ಪ್ರತ್ಯೇಕ ಆಹಾರಬೇಕು. ಕೂಸಿಗೆ ಬೇಕಾಗತಕ್ಕ ಆಹಾರವಾದ ಹಾಲು ತಾಯಿಯ ಸ್ತನದಲ್ಲಿ ಉಂಟಾಗುತ್ತದೆ. ಅದನ್ನು ಪೋಷಿಸಿ ಕುಡಿಯಲಿಕ್ಕೆ ಕೂಸಿಗೆ ಹುಟ್ಟುವಾಗಲೇ ಜ್ಞಾನ ಮತ್ತು ಸಾಮರ್ಥ್ಯ ಇದೆ. ಹುಟ್ಟುವಾಗ ಕೂಸಿನ ಬಾಯಿಯಲ್ಲಿ ಹಲ್ಲು ಇಲ್ಲ. ಬದಲಾಗಿ ಮಕ್ಕಳಿಗೆ ಜೊಲ್ಲು (*Saliva*) ಹೆಚ್ಚಿಗೆ ಇದೆ. ಇದು ಆಹಾರವನ್ನು ಜೀರ್ಣಿಸುವುದಕ್ಕೆ ಸಹಕಾರಿಯಾಗಿರುತ್ತದೆ. ಕೂಸು ಬೆಳೆಯುತ್ತಾ ಇದ್ದು ಸುಮಾರು 6 ತಿಂಗಳಿಂದ 1 ವರ್ಷದೊಳಗೆ ಮಗುವಿಗೆ ಹಲ್ಲು ಮೊಳೆಯುತ್ತದೆ. ಈ ಹಲ್ಲು ಬಂದ ನಂತರ ಮಕ್ಕಳಿಗೆ ತಾಯಿಯ ಹಾಲು ಅಲ್ಲದೆ ಬೇರೆ ಆಹಾರಕೊಡಬಹುದೆಂದು ಸೂಚಿಸಿದಂತಾಗಿ ಆ ಪ್ರಕಾರ 'ಅನ್ನಪ್ರಾಶನ' ಎಂಬ ಒಂದು ಕಟ್ಟಳೆ ಹಿಂದುಗಳಲ್ಲಿ ಉಂಟು. ಒಂದರ ನಂತರ ಒಂದಾಗಿ 3 ವರ್ಷಗಳ ಒಳಗೆ ಮಕ್ಕಳಿಗೆ 20 ಹಲ್ಲುಗಳು ಬರುತ್ತವೆ. ಈ ಹಲ್ಲುಗಳಿಗೆ ಹಂಗಾಮಿ ಅಥವಾ ಹಾಲುಹಲ್ಲುಗಳು ಅನ್ನುತ್ತಾರೆ. ಈ ಹಲ್ಲುಗಳಿಗೆ ಬೇರುಗಳಿಲ್ಲ. ಈ ಹಲ್ಲುಗಳು ಒಂದರ ನಂತರ ಒಂದು ಕ್ರಮೇಣ 5 ವರುಷ ಪ್ರಾಯದಿಂದ 10 ವರುಷ ಪ್ರಾಯದೊಳಗೆ ಬಿದ್ದುಹೋಗಿ ಅವುಗಳ ಸ್ಥಳದಲ್ಲಿ ಬೇರುಗಳುಳ್ಳ ಖಾಯಂ ಹಲ್ಲುಗಳು ಬರುತ್ತವೆ. ಕೆಲವು ಮಕ್ಕಳಿಗೆ ಈ ಹಾಲುಹಲ್ಲುಗಳು (*caries*) ಕಪ್ಪಾಗಿ ಹಾಳಾಗಿ ನೋವು ಉಂಟಾಗುವದುಂಟು. ಕೂಡಲೇ ಅವುಗಳನ್ನು ಕಿತ್ತುಬಿಡಬೇಕು. ಹಲವರಿಗೆ ಈ ಹಾಲುಹಲ್ಲು ಬೀಳದೆ ಖಾಯಂ ಬೇರುಗಳುಳ್ಳ ಹಲ್ಲುಗಳು ಓರೆಕೋರೆಯಾಗಿ ಬರುವುದುಂಟು. ಹೀಗೆ ಆಗದಂತೆ ಈ ಹಾಲುಹಲ್ಲುಗಳನ್ನು ಕ್ಲಪ್ತ ಸಮಯದಲ್ಲಿ ತೆಗಿಸುವುದು ಉತ್ತಮ. ಇದರಿಂದ ಓರೆಕೋರೆ ಹಲ್ಲು ಬರುವುದನ್ನು ಕಡಿಮೆಮಾಡಬಹುದು. ಇದು ಬಹಳ ಅವಶ್ಯವಾದ ವಿಷಯ. ಯಾಕೆಂದರೆ ಹಲ್ಲಿನಿಂದ ಮುಖದ ಸೌಂದರ್ಯ ಹೆಚ್ಚುಕಡಿಮೆಯಾಗುತ್ತದೆ. ಅಲ್ಲದೆ ಆಹಾರವನ್ನು ಕಡಿದು ಪುಡಿಚೆಟ್ಟಿ ಮಾಡಲಿಕ್ಕೆ ಓರೆಕೋರೆ ಹಲ್ಲಿನಿಂದ ಆಗುವದಿಲ್ಲ. ಈ 20 ಹಲ್ಲುಗಳಲ್ಲದೆ ಇನ್ನೂ 12 ಹಲ್ಲುಗಳು ಕೂಡಾ ಒಟ್ಟಿಗೆ 32 ಹಲ್ಲುಗಳು ಮಾನವನಿಗೆ 25 ವರುಷದೊಳಗೆ ಬರುತ್ತವೆ. ಇದರಲ್ಲಿ ಆಖೈರಿಗೆ ಬರುವ 4 ದವಡೆ ಹಲ್ಲುಗಳು ಜ್ಞಾನದ ಹಲ್ಲುಗಳು, (*wisdom teeth*) ಅನ್ನುತ್ತಾರೆ. (ಜ್ಞಾನವು ಈ ಪ್ರಾಯದೊಳಗೆ ಬರುತ್ತದೆಂಬುದರಿಂದಲೋ ಏನೋ) ಹಲ್ಲುಗಳಿಂದ ಆಹಾರ ಕಡಿದು ಜಗಿದು ನಣ್ಣಗೆ ಮಾಡಿ ಬಾಯಿಯಲ್ಲಿರುವ ನಾಲಗೆಯಿಂದ ಜೊಲ್ಲನ್ನು ಸೇರಿಸಿ ಮುದ್ದೆಮಾಡಿ ನುಂಗುತ್ತೇವೆ. ನುಂಗುವ ಆಹಾರವು ಗೇಣುದ್ದವಾದ ಹೃದಯಲ್ಲಿರುವ ನಳದಿಂದ (*gullet*) ಹೊಟ್ಟೆಯಲ್ಲಿರುವ ಆಹಾರಕೋಶ ಅಥವಾ ಜಠರದಲ್ಲಿ ಬೀಳುತ್ತದೆ. ಆಹಾರಕೋಶದಲ್ಲಿ ಕೆಲವು ಮಟ್ಟಿಗೆ ಜೀರ್ಣಕ್ಕೆ ಅನುಕೂಲವಾಗುವಂತೆ ರಸಗಳು ಸೇರಿ ಈ ಆಹಾರವು ಬದಲಾವಣೆಯಾಗುತ್ತದೆ. ಆಡು, ದನ ಮುಂತಾದ ಪ್ರಾಣಿಗಳು ನುಂಗಿದ ಆಹಾರವನ್ನು ಪುನಹ ಬಾಯಿಗೆ ತಂದು ಅದನ್ನು ಜಗಿದು (*ruminate*) ಪುನಹ ನುಂಗುವದುಂಟು. ಮಾನವನಿಗೆ ಹೀಗೆ ಮಾಡಲಿಕ್ಕೆ ಆಗುವುದಿಲ್ಲ. ಯಾಕೆಂದರೆ ಆಹಾರ ಪಚನದ ಯಾ ಜೀರ್ಣದ ಇಂದ್ರಿಯಗಳು ಮಾಂಸಖಂಡ ಅಥವಾ ಸ್ನಾಯುವು ಈ ಮೊದಲು ತಿಳಿಸಿದಂತೆ ಮಾನವನ ಇಚ್ಛಾವಿರಹಿತವಾದದ್ದು. ಅಜೀರ್ಣಕರವಾದ ಅಥವಾ ದೇಹಕ್ಕೆ ಹಾನಿಯುಂಟಾಗುವಂಥಾ ವಿಷ ಪದಾರ್ಥಗಳನ್ನು ಸೇವಿಸಿದರೆ ವಾಂತಿಯಾಗಿ ಪುನಹ ಆಹಾರಕೋಶದಿಂದ ಹೊರಗೆ ಬರುತ್ತದೆ. ಇದಲ್ಲದೆ ಕೆಲವರಿಗೆ ಅಸಹ್ಯವಾದ ವಾಸನೆಯಿಂದ ಯಾ ನೋಟದಿಂದ ಅಥವಾ ಸಮುದ್ರಪ್ರಯಾಣದಿಂದ ವಾಂತಿಯಾಗುವುದುಂಟು. ಒಬ್ಬರು ವಾಂತಿಮಾಡುವಾಗ ಹಲವರಿಗೆ ನೋಡಿ ಅಥವಾ ಕೇಳಿ ವಾಂತಿ ಆಗುವುದುಂಟು. ಗಂಟಲು ತುರಿಸಿದಾಗ (*tickling throat*) ವಾಂತಿ ಬರುವುದುಂಟು. ಇದೆಲ್ಲಾ ವಾಸನೆ ಮೂಸುವ ಮೂಗಿಗೆ, ಕೇಳುವ ಕಿವಿಗೆ, ಆಹಾರ ತಿನ್ನುವ ಬಾಯಿಗೆ, ನುಂಗುವ ಗಂಟಲಿಗೆ, ಮತ್ತು ಆಹಾರಕೋಶಕ್ಕೆ ಇರುವ ನರಗಳು ಮೆದುಳಿನಿಂದ ಬರುವ ಸಂಬಂಧದಿಂದಾಗಿರುತ್ತದೆ.

ಹೊಟ್ಟೆಯಲ್ಲಿ ಜೀರ್ಣಕ್ಕೆ ಅನುಕೂಲವಾಗಿ ಬದಲಾವಣೆಯಾದ ಆಹಾರವು 1 ಘಂಟೆಯಿಂದ 6 ಘಂಟೆಯೊಳಗೆ ಸ್ವಲ್ಪ ಸ್ವಲ್ಪವಾಗಿ ಸುಮಾರು 20 ಅಡಿ ಉದ್ದವಾಗಿರುವ ಸಣ್ಣ ಕರುಳುಗಳಿಗೆ ಹೋಗುತ್ತದೆ. ಈ ಸಣ್ಣ ಕರುಳುಗಳು ಹೊಟ್ಟೆಯ ನಡುವಿನಲ್ಲಿ ಸಡಿಲಾಗಿ ಇವೆ. ಈ ಕರುಳುಗಳಲ್ಲಿ ಆಹಾರವು ಹೆಚ್ಚಿನ ಜೀರ್ಣ ಮತ್ತು ಪಚನ ಆಗುವಂತೆ ಒಂದು ರಸ ಉಂಟು. ಇದಲ್ಲದೆ ಕಲಿಜದಿಂದ (*Liver*) ಉಂಟಾಗುವ ಪಿತ

(*Bile*) ಮೇಧೋಜನಕದಿಂದ (*pancreas*) ಉಂಟಾಗುವ ರಸ ಕೂಡಾ ಈ ಕರಳುಗಳ ಪ್ರಥಮ ಭಾಗದಲ್ಲಿ (*deodenum*) ಬಂದು ಸೇರುತ್ತದೆ. ಹೀಗೆ ಆಹಾರವು ಜೀರ್ಣ ಮತ್ತು ಪಚನ ಆಗುವರೆ ಬೇಕಾದ ಎಲ್ಲಾ ರಸಗಳಿಂದ ಕೂಡಿಕೊಂಡು ಈ ಸಣ್ಣ ಕರುಳುಗಳಲ್ಲಿ ರಕ್ತಕ್ಕೆ ಸೇರುವಷ್ಟು ಸೇರಿ ಉಳಿದದ್ದು ದೊಡ್ಡ ಕರುಳುಗಳಿಗೆ ಹೋಗುತ್ತದೆ. ಈ ದೊಡ್ಡ ಕರುಳುಗಳು (*large intestines*) ಸುಮಾರು 20 ಅಡಿ ಉದ್ದ ಇರುತ್ತವೆ. ಇವು ಹೊಟ್ಟೆಯ ಬಲ ಪಾರ್ಶ್ವದ ಕೆಳಗಡೆಯಿಂದ ಪ್ರಾರಂಭವಾಗುತ್ತವೆ. ಈ ಭಾಗಕ್ಕೆ (*Coecum*) ಅನ್ನುತ್ತಾರೆ. ಈ ದೊಡ್ಡ ಕರುಳುಗಳಿಗೆ ಬಂದ ಆಹಾರವು ತಿರುಗಿ ಸಣ್ಣ ಕರುಳುಗಳಿಗೆ ಹೋಗದಂತೆ ಒಂದು ವಾಲ್ವ್‌ಯೂ ಬಾಗಿಲು (*Ileoeoecal Valve*) ಸಣ್ಣ ಕರುಳುಗಳು ದೊಡ್ಡ ಕರುಳುಗಳಿಗೆ ಬಂದುಸೇರುವಲ್ಲಿದೆ. ಈದೊಡ್ಡ ಕರುಳುಗಳು ಹೊಟ್ಟೆಯ ಬಲ ಪಾರ್ಶ್ವದ ಕೆಳಗಿನಿಂದ ಸುರು ಆಗಿ ಮೇಲಕ್ಕೆ ಹೋಗಿ (*Ascending Colon*) ಅಲ್ಲಿಂದ ಅಡ್ಡವಾಗಿ (*Transverse Colon*) ಎಡ ಪಾರ್ಶ್ವಕ್ಕೆ ಬಂದು ಕೆಳಕ್ಕೆ ಇಳಿದು (*Descending Colon*) ಆಖೈರಿಗೆ ಎಡ ಪಾರ್ಶ್ವದಿಂದ ಕುಂಡೆಯ (*Rectum*) ದ್ವಾರಕ್ಕಾಗಿ ನಡುವಿಗೆ ಬಂದು ಮಲ ದ್ವಾರ (*Anus*) ದಲ್ಲಿ ಅಂತ್ಯವಾಗಿದ್ದು, ನೋಡಿದರೆ ಹೊಟ್ಟೆಗೆ ಒಂದು ಮಾಲೆ ಹಾಕಿದೋಪಾದಿ ತೋರುತ್ತದೆ. ದೊಡ್ಡ ಕರುಳಿನ ಪ್ರಥಮ ಭಾಗವಾದ ಬಲ ಪಕ್ಕದ ಕೆಳಗಡೆ ಇರುವ ಸೀಕಮ್ (*Coecum*) ಬಹಳ ಚಿಕ್ಕ ಕರುಳು. ಒಂದು ಕೆಳಭಾಗದಲ್ಲಿದೆ. ಇದಕ್ಕೆ ಎಪ್ಪೆಂಡಿಕ್ಸ್ (*Appendix*) ಅನ್ನುತ್ತಾರೆ. ಕೆಲವು ಸಲ ಇದರಲ್ಲಿ ಸೋವು (*Inflammation*) ಉಂಟಾಗಿ ಪ್ರಾಣಕ್ಕೆ ಹಾನಿ ಕೂಡಾ ಬರುವುದುಂಟು. ಈ ಆಹಾರವು ರಕ್ತಕ್ಕೆ ಸೇರುವಂತೆ ಬದಲಾವಣೆ ಹೇಗೆ ಆಗುತ್ತದೆ ಎಂಬದನ್ನು ತಿಳಿಯಬೇಕಾದರೆ ರಸಾಯನ ಶಾಸ್ತ್ರದ ಜ್ಞಾನವು (*Biochemistry*) ಅಗತ್ಯ. ಆಹಾರ ಜೀರ್ಣಮಾಡುವ ರಸಗಳು ಯಾವವು, ಎಲ್ಲಿಂದ ಬರುತ್ತವೆ. ಆಹಾರವು ರಕ್ತದಲ್ಲಿ ಹೇಗೆ ಸೇರುತ್ತದೆ, ಮತ್ತು ರಕ್ತವು ದೇಹದ ಪ್ರತಿಯೊಂದು ರೋಮಕೂಪಕ್ಕೆ ಸಹಾ ಹೇಗೆ ಈ ಆಹಾರವನ್ನು ಒಯ್ಯುತ್ತದೆ ಎಂಬದನ್ನೂ "ಊಟ ಬಲ್ಲವನಿಗೆ ರೋಗವಿಲ್ಲ" ಎಂಬ ಗಾದೆಯಂತೆ, ಎಷ್ಟು, ಯಾವಾಗ, ಹೇಗೆ, ಏನು, ಆಹಾರ ತೆಗೆದ ಕೊಳ್ಳಬೇಕೆಂಬದನ್ನೂ ಬರುವ ಸಂಚಿಕೆಗಳಿಂದ ತಿಳಿಯಬಹುದು.

---


**Rs. 75 · WILL PAY YOU AFTER 5 YEARS · Rs. 100**

**INDUSTRIAL CASH CERTIFICATES**

FOR FULL PARTICULARS APPLY TO—

**SUPPLY AGENCY LTD., UDIPI**

**ಶಾಂತಿನಿಕೇತನ ಹಾಯರ್ ಎಲಿಮೆಂಟರಿ ಶಾಲೆ**

**ಕುರಾಡಿ (ದ. ಕನ್ನಡ.)**

ನಿಮ್ಮ ಮಕ್ಕಳನ್ನು ನವಯುಗದ ನವೀನ ವಿದ್ಯೆಯು, ನವತರುಣರನ್ನಾಗಿ ಮಾಡಲು ನವೀನ ರೀತಿಯ ವೈಜ್ಞಾನಿಕ ವಿದ್ಯೆಯು, ವೈಭವದ ಬೀಡಾದ

ಶಾಂತಿನಿಕೇತನ ಹಾಯರ್ ಎಲಿಮೆಂಟರಿ ಶಾಲೆ ಕುರಾಡಿ

ಇಲ್ಲಿಗೆ ಇಂದೇ ಕಳುಹಿಸಿರಿ

**ಹೊಸ ಕ್ಲಾಸುಗಳು ಪ್ರಾರಂಭವಾಗಿವೆ.**

# ವಾರದ ಪಂಚಾಂಗ

## ಬಹುಧಾನ್ಯ ಸಂ|ರದ ಭಾದ್ರಪದ ಶುಕ್ಲಪಕ್ಷ ದಕ್ಷಿಣಾಯನಂ ವರ್ಷರ್ತುಃ

**ಸಿಂಹ (ಸೋಣ) ೧೨ರಿಂದ ೧೮ರ ವರೆಗೆ.     ಮಹಾನಕ್ಷತ್ರ ಮಘಾ—ಹುಬ್ಬಾ (ಪೂರ್ವಾ)**

### ಆರ್ಯಭಟ ವಾಕ್ಯಕರಣರೀತ್ಯಾ ನಿತ್ಯಪಂಚಾಂಗಂ

| ಆಗೋಸ್ತು ತಾರೀಕು | ತಿಥಿ | ವಾರ | ನಕ್ಷತ್ರ | ಯೋಗ | ಕರಣ | ವಿಷ | ಅಮೃತ | ವಿಶೇಷಾಂಶ |
|---|---|---|---|---|---|---|---|---|
| 28 | ೩ | ರ೧೯ | ಹ್ತ೪೬\|\|\| | ಶು೫೪ | ಗ೧೯ | ೭\|\|\| | ೩೧\|\|\| | ಗೌರಿ೩ಮು೧ವ್ವ. ವರಾಹಜ. ಸಾಮೋಪಾಕರ್ಮ ಪ್ರದೋ. |
| 29 | ೪ | ಚ೧೭\| | ಚಿ೪೭\|\| | ಶ್ಲು೫೦\|\|\| | ಭ೧೭\| | ೬\|\|\| | ೩೦\| | ತುಲಾಚ೧೭ ಮ೩ವಬು೫೨ ಗಣೇಶಚತುರ್ಥೀ |
| 30 | ೫ | ಕು೧೬\|\|\| | ಸ್ವಾ೪೯\|\| | ಬ್ರ೦೪೮\|\| | ಬಾ೧೬\|\|\| | ೧\|\| | ೨೬\|\| | ಹುಬ್ಬಾರ್ಕಃ೩೬ ಧ೩ವಗು೩೦ ಋಷಿ೫ಕಲ್ಕಿಜಭೂವರಾಹಜ |
| 31 ಸಪ್ಟಂಬರ | ೬ | ಬು೧೭\|\|\| | ವಿ೫೨\|\| | ಐ೦೪೭\| | ತೈ೧೭\|\|\| | ೪ | ೨೯\| | ವೃಶ್ಚಿಕೆಚ೩೬\|\| ಜ್ಯೈ೩ತುಲಾ ಶು೧೦ ಪ್ರದೋಷಃ |
| 1 | ೭ | ಗು೧೯\|\|\| | ಅ್ನ೫೭ | ವೈ೪೬\|\|\| | ವ೧೯\|\|\| | ೩ | ೨೯ | ಮು೨ಕುಲ ಮ೨ವಬು೨೫ ಎಳೆ |
| 2 | ೮ | ಶ೧೨೩ | ಜ್ಯೇ೬೦ | ವ್ಕಿ೪೭ | ಬ೨೩ | ೧೨ | ೩೮\| | ಅಷ್ಟಮಿ ದಗ್ಧಯೋ೮ ಹು೨ರ೩ಧನುಚ೨\|ಚಿ೪ಶು೩೦ |
| 3 | ೯ | ಶ೨೭\| | ಜ್ಯೇ೨\| | ಪ್ರೀ೪೮\| | ಕೌ೨೭\| | ೨೪\| | ೫೦\|\| | ದಗ್ಧಯೋ೯ |

### ಕೇತಕೀ ದೃಕ್ಸಿದ್ಧರೀತ್ಯಾ ನಿತ್ಯಪಂಚಾಂಗಂ

| ಆಗೋಸ್ತು ತಾರೀಕು | ತಿಥಿ | ವಾರ | ನಕ್ಷತ್ರ | ಯೋಗ | ಕರಣ | ವಿಷ | ಅಮೃತ | ವಿಶೇಷಾಂಶ |
|---|---|---|---|---|---|---|---|---|
| 28 | ೩ | ರ೮ | ಹ್ತ೩೫ | ಶು೪೨ | ಗ೮ | ಶೆ.\| ವಿ೫೪\|\|\| | ೨೦\| | ಧ೩ವಗು೨೬ವೈ.ಪ್ರ ೩೭\|\|\|ನಿ. ೫೧\|\|\|ಸಾಮೋಪಾಕರ್ಮ ಗೌರಿ೩ಗಣೇಶ೪ |
| 29 | ೪ | ಚ೫\| | ಚಿ೩೫ | ಶ್ಲು೩೮\| | ಭ೫\| | ೪೯ | ೧೯ | ತುಲಾಚ೫ಮ೩ವಬು೫೫ ಋಷಿ೫ |
| 30 | ೫ | ಕು೪\|\| | ಸ್ವಾ೩೭\| | ಬ್ರ೩೬ | ಬಾ೪\|\| | ೫೨ | ೧೪ | ಪೂರ್ವಾರ್ಕಃ೨೦ |
| 31 ಸಪ್ಟಂಬರ | ೬ | ಬು೬ | ವಿ೪೧\| | ಐ೩೫\| | ತೈ೬ | ೫೧\|\|\| | ೧೭\|\| | ವೃಶ್ಚಿಕೆಚ೨೫\| ತುಲಾಶುಕ್ರ೬ |
| 1 | ೭ | ಗು೯\| | ಅ್ನ೪೬\|\|\| | ವೈ೩೬ | ವ೯\| | ೦ | ೧೮\| | ಮು೨ಕು೬೦ ಸಪ್ತಂಬರ |
| 2 | ೮ | ಶು೧೪ | ಜ್ಯೇ೫೩\|\| | ವ್ಕಿ೩೭\|\|\| | ಬ೧೪ | ೨\| | ೨೯ | ಪೂ೨ರ೪೭ಚಾಪೆಚ೫೩\|\| ಮು೨ವಬು೫೧ ಚಿ೪ಶು೨೨ |
| 3 | ೯ | ಶ೨೦ | ಮೂ೬೦ | ಪ್ರೀ೪೦\|\| | ಕೌ೨೦ | ೧೬\| | ೪೩\| | ಜ್ಞೋದಯಃಪೂರ್ವೆ |

# ಈ ವಾರದಲ್ಲಿ ನಿಮ್ಮ ಗ್ರಹಗತಿ ಹೇಗಿದೆ!

**ತಾರೀಕು ೨೮-೮-೧೯೩೮ರಿಂದ ತಾರೀಕು ೩-೯-೧೯೩೮ರ ವರೆಗೆ.**

## ಮೇಷ:—

ಸುರಗುರುಗಳಾದ ಬೃಹಸ್ಪತ್ಯಾಚಾರ್ಯರು ನಿಮ್ಮ ಲಾಭಸ್ಥಾನದಲ್ಲಿದ್ದು ಮಿತ್ರಜನರಿಂದಾಗಿ ಧನಲಾಭ ಮತ್ತು ನಿಮ್ಮ ಶ್ರೇಯಸ್ಸನ್ನು ಕೋರುವವರಿದ್ದರೂ, ಇತರ ಸರ್ವ ಗ್ರಹರೂ ಕೇವಲ ಅನಿಷ್ಟಸ್ಥಾನಗತರಾಗಿದ್ದು ನಿಮ್ಮ ಹಿತವನ್ನು ಕೆಡಿಸುವದಲ್ಲದೆ ಸರ್ವ ಭಾಗದಲ್ಲಿಯೂ ನಿಮ್ಮ ಶತ್ರುಗಳಂತೆ ವರ್ತಿಸುತ್ತಿರುವರೆಂಬುದು ಅತ್ಯಂತ ದುಃಖಾಸ್ಪದವಾದ ಸಂಗತಿ. ಅನಿಷ್ಟ ಪರಂಪರೆಗಳು ಸಮುದ್ರದ ಅಲೆಗಳಂತೆ ಒಂದರ ಹಿಂದೊಂದು ಬರುತ್ತಲೇ ಇರುವವು. ಶತ್ರುಗಳ ಉಪಟಳದಿಂದಾಗಿ ಯಾವ ಕಾರ್ಯವೂ ಕೊನೆಗಾಣಲಿಕ್ಕಿಲ್ಲವು. ಒಂದುವೇಳೆ ಕೊನೆಹೊಂದುವುದಾದರೂ ಅದರಲ್ಲಿ ಸೋಲೇ ಹೊರತು ಗೆಲವಿಲ್ಲವು. ಶರೀರದಲ್ಲಿ ವ್ಯಾಪಿಸಿಕೊಂಡಿರುವ ರೋಗದ ಪೀಡೆಯು ಮುಂಚಿಗಿಂತಲೂ ಸ್ವಲ್ಪ ಹೆಚ್ಚಾಗುವುದು. ಸಂಸಾರ ಭಾಗದಲ್ಲಿ ಮನಸ್ಸಿಗೆ ಎಳ್ಳಷ್ಟೂ ಸಮಾಧಾನವಿಲ್ಲವು. ಕಾರಣ ಮಕ್ಕಳು ಮಾತನ್ನು ಮೀರಿ ಸ್ವೇಚ್ಛೆಯಿಂದ ವರ್ತಿಸುವರು. ಹೆಂಡತಿಯು ಚಂಡಿಯಂತೆ ಪೀಡಿಸುವಳು. ಒಟ್ಟಾರೆ ಪ್ರತಿಯೊಂದು ಭಾಗದಲ್ಲೂ ಹಣದ ವ್ಯಯವೇ ಹೊರತು ಲಾಭವಿಲ್ಲವೇ ಇಲ್ಲವು. ತಾ. 1, 2, 3, ಈ ದಿನಗಳು ಬಹಳ ಅನಿಷ್ಟಕರ. ರಾಜಭಯಕ್ಕೆ ಕಾರಣವಾಗುವ ಕ್ರಿಯೆಯು ಆಗಲಿದೆ. ಜಾಗರೂಕತೆಯಿಂದಿದ್ದರೆ, ಅದರಿಂದ ಪಾರಾಗಬಹುದು.

## ವೃಷಭ:—

ಈ ವಾರದಲ್ಲಿ ನಿಮ್ಮ ಗ್ರಹಗತಿಯನ್ನು ವಿಚಾರ ಮಾಡುವಾಗ ಅನಿಷ್ಟವೇ ಸ್ವಲ್ಪ ಮುಂದಾಗಿ ಕಂಡು ಬರುತ್ತದೆ. ಅದರಲ್ಲೂ ವಾರದ ಆದಿಗಿಂತ ಅಂತ್ಯವೇ ಹೆಚ್ಚಾಗಿ ಅನಿಷ್ಟದಾಯಕವಾಗಿರುವುದು. ಆದರೂ ಅಷ್ಟೊಂದು ಹೆಚ್ಚಿನ ಭಯಪಡಲು ಸಾಕಷ್ಟು ಕಾರಣವಿಲ್ಲ. ಈ ವಾರದಲ್ಲಿ ನಿಮಗೆ ಹೊಸ ಮಿತ್ರರನೇಕರ ಸಮಾಗಮವಾಗುವುದು. ಕುಟುಂಬವು ವೃದ್ಧಿಯಾಗುವುದು. ಸಂಸಾರದ ತಾಪತ್ರಯವು ನಿಮ್ಮನ್ನು ಬಾಧಿಸದು. ಆದರೆ ಸ್ವಭಾವತಃ ವಿಷವು ಅತ್ಯಂತ ದುಷ್ಟಪದಾರ್ಥವಾದರೂ ಸಮಯಾನುಸಾರದಲ್ಲಿ ಅದರ ಆವಶ್ಯಕತೆಯು, ಅದರ ಉಪಯೋಗವು, ಇದ್ದೇ ಇದೆ. ಅಂತೆಯೇ ದುರ್ಜನರೂ ಕೂಡ ಬೇಕು. ಅವರಿಂದಲೂ ಕೂಡಾ ಎಷ್ಟೋ ಮಹತ್ಕಾರ್ಯಗಳು ಆಗಲಿವೆ. ಆದರೆ ಅವರ ಸಂಸರ್ಗ ಮಾಡುವುದರಲ್ಲಿ ಇಷ್ಟೊಂದು ವಿಚಾರ, ದೇಶ, ಕಾಲ ಪಾತ್ರವನ್ನು ಚೆನ್ನಾಗಿ ವಿಚಾರ ಮಾಡಿ ಮುಂದರಿಯಬೇಕು. ಇಲ್ಲವಾದಲ್ಲಿ ಫಲವು ವಿಪರೀತವಾಗಿ ಪರಿಣಮಿಸೀತು. ಹಾಗೆಯೇ ನೀವೂ ಕೂಡಾ ಈ ವಾರದಲ್ಲಿ ಅಲ್ಪರ ವಾ ದುರ್ಜನರ ಮೈತ್ರ್ಯವನ್ನು ಮಾಡಬೇಡಿ. ಮಾಡಿದ್ದಲ್ಲಿ ಮಾನಹಾನಿಯಾಗುವುದಲ್ಲದೆ ತುಂಬಾ ಧನವ್ಯಯವೂ ಆಗುವುದು. ದೈಹಿಕ ಸುಖವಾಗಲಿ ಮಾನಸಿಕ ಸುಖವಾಗಲಿ ನಿಮಗಿಲ್ಲವು. ತಾ. 28 ಮತ್ತು 3ರಲ್ಲಿ ಅಶುಭ, ಉದರ ರೋಗ, ಪ್ರವಾಸದಲ್ಲಿ ವಿಘ್ನಗಳು ಉಂಟಾದಾವು.-

## ಮಿಥುನ:—

ದೈವಬಲ ಪರಿಪೂರ್ಣನಾದ ಪ್ರಹ್ಲಾದನಿಗೆ ತಾಯಿ ಕಯಾದುವು ಕೊಟ್ಟ ವಿಷವೂ ಕೂಡಾ ಅಮೃತ ಸಮಾನವಾಗಿಲ್ಲವೇ? ಅದೇ ರೀತಿ ಈ ರಾಶಿಯವರಿಗೂ ಕೂಡ ಈ ವಾರವು ಬಂದಿರುವುದು. ಯಾವ ಕೆಲಸವನ್ನು ಮಾಡಿದರೂ ಕೂಡ ಫಲಿತಾಂಶವು ಒಳ್ಳೇ ರೀತಿಯಲ್ಲೇ ಆಗುವುದು. ಸ್ಥಾನವನ್ನು ಹೊಂದುವುದರಿಂದಾಗಿ ಮನಸ್ಸಿಗೆ ಸಂತೋಷ. ವ್ಯಾಪಾರಿಗಳಿಗೆ ಹೆಚ್ಚಾಗಿ ಧನಲಾಭವಾಗುವುದು. ನವತರುಣರ ಕಾಂತಿ, ಉತ್ಸಾಹ ಸಾಹಸಗಳು ಇವರಲ್ಲಿ ಉಂಟಾಗುತ್ತವೆ. ಯಾವ ಕಾರ್ಯಾರಂಭಕ್ಕೂ, ವ ಕೊನೆಗಾಣಿಸಲಿಕ್ಕೂ ಮುಖ್ಯವಾಗಿ ಬೇಕಾದ ಧನ ಜನ ಬೆಂಬಲವು ಇವರಿಗೆ ತುಂಬಾ ಇವೆ. ಸಾರ್ವಜನಿಕ ಕಾರ್ಯಗಳಲ್ಲಿ ಅಥವಾ ಒಂದು ಸಂಘದ ಮುಂದಾಳಾಗಿ ಕಾರ್ಯ ನಿರ್ವಹಿಸಲು ಸಮರ್ಥರಿರುವರಿವರು. ಆದ್ದರಿಂದಲೇ ನಾಲ್ಕು ಜನರು ಯಾವಾಗಲೂ ಇವರನ್ನನುಸರಿಸಿಕೊಂಡಿರುವರು. ಇಷ್ಟೆಲ್ಲಾ ಸೌಭಾಗ್ಯಗಳಿದ್ದರೂ ಎಲ್ಲಾ ಬಣ್ಣ ಮಸಿನುಂಗಿತೆಂಬಂತೆ ಇವರ ಮನಸ್ಸು ಒಳ್ಳೆಯದಿಲ್ಲವು. ಇದಿರಿನಲ್ಲಿ ಬೇಕಾದಂತೆ ಮಾತನಾಡುತ್ತಾ ಅಂತರಂಗದಲ್ಲಿ ಕೇಡು ಬಗೆದರೆ ಒಂದಲ್ಲೊಂದು ಕಾಲದಲ್ಲಿ ಒಂದೇಸವನೆ ಎಲ್ಲವೂ ವಿಪರೀತವಾಗಿ ಪರಿಣಮಿಸುವವು. ಇವರು ಅಜ್ಞಾನದಿಂದಾಗಿ ದುರ್ಮನಸ್ಸಿಗೆ ಬಲಿಬಿದ್ದು ಧನಕ್ಕೂ ಯಶಸ್ಸಿಗೂ ಹಾನಿಯಾಗುವ ಕಾರ್ಯವನ್ನು ಮಾಡಿ ರಾಜಭಯಕ್ಕೊಳಗಾಗಲಿರುವರು. ಇದಕ್ಕೆ ಮುಖ್ಯ ಕಾರಣನು ಆ ಶನೀಶ್ವರ ಮಹಾರಾಯ. ಆದ ಕಾರಣ ಶನಿಜಪವನ್ನು ಮಾಡಿದರೆ ಈ ಪೂರ್ವೋಕ್ತ ದೋಷದಿಂದ ಪಾರಾಗಬಹುದು. ತಾ. 1ರಿಂದ 3ರ ವರೆಗಿನ ದಿನಗಳು ಧನಲಾಭವಾಗುವ ಕಾರ್ಯಾರಂಭಕ್ಕೂ, ಶತ್ರು ಜಯಕ್ಕೂ, ಸುಖಕ್ಕೂ ಅತ್ಯಂತ ಅನುಕೂಲವಿದೆ.—

## ಕರ್ಕಾಟಕ:—

ಬುಧ ಶುಕ್ರರು ಹೊರತಾಗಿ ಇತರ

ಎಲ್ಲಾ ಗ್ರಹರು ಪ್ರತಿಕೂಲರಾಗಿರುವುದರಿಂದ ಈ ರಾಶಿಯವರಿಗೆ ಈ ವಾರವು ಹೆಚ್ಚಾಗಿ ಅನಿಷ್ಟಕಾರಕವಾಗಿರುವುದು. ಶತ್ರುಗಳ ಪೀಡೆಯು ಇವರಿಗೆ ಯಾವ ಭಾಗದಲ್ಲೂ ಇಲ್ಲವು. ಕೈಕೊಂಡ ಕಾರ್ಯದಲ್ಲಿ ಲಾಭನಷ್ಟಗಳೂ ಆಗುವಂತಿಲ್ಲ. ಆದರೆ ಇವರು ತಮ್ಮ ಜಾತಿಮತಕ್ಕೆ ಸಂಬಂಧಿಸಿದ ಧರ್ಮವನ್ನು ತ್ಯಜಿಸುವರು. ಆ ಕಾರಣದಿಂದಾಗಿ ಎಲ್ಲರೂ ಇವರ ಮೇಲೆ ವಕ್ರದೃಷ್ಟಿಯನ್ನಿಡುವರು. ಚಂಚಲ ಮನಸ್ಕರಾದಿವರು ಪರವಂಚನೆಯಲ್ಲಿ ಪ್ರವೃತ್ತರಾಗುವುದರಿಂದ ಬಂಧನ ಪ್ರಾಪ್ತಿಯಾಗುವ ಯೋಗವಿದೆ. ಮತ್ತು ಆರೋಗ್ಯವು ಕೆಟ್ಟು ಉಷ್ಣ ಪಿತ್ಥ ವಿಕಾರದ ರೋಗವು ತಲೆದೋರುವುದು. ಈ ವ್ಯಾಧಿಯು ಅತ್ಯಂತ ಕಠಿಣವಾಗಿ ಪರಿಣಮಿಸಿ ಇದಕ್ಕಾಗಿ ತುಂಬಾ ಹಣ ಖರ್ಚು ಮಾಡಬೇಕಾಗಿ ಬರುವುದು. ಸ್ವಜನರೂ ಕೂಡ ಪರಿತ್ಯಜಿಸುವುದರಿಂದ ಅತ್ಯಂತ ಶೋಕ ಸಂತಪ್ತರಾಗುವರು. ಜನಾಂಗದಲ್ಲಿ ಜಗಳಗಂಟೆಯಾಗಿ ವರ್ತಿಸುವುದರಿಂದ ಎಲ್ಲಿ ಹೋದರೂ ತಿರಸ್ಕಾರ, ಕಟುವಾಕ್ಯಗಳೇ ಇವರಿಗೆ ಪುರಸ್ಕಾರವಾಗಿ ದೊರಕುವವು. ತಾ. 29ರಿಂದ 2ರ ವರೆಗಿನ ದಿನಗಳು ಅತೀವ ಹಾನಿಕಾರಕಗಳಾಗಿರುವುದರಿಂದ ಈ ದಿನಗಳಲ್ಲಿ ಕಲಹ, ಶತ್ರುತ್ವಗಳು ವೃದ್ಧಿಯಾಗಲಿವೆ—

**ಸಿಂಹ:—**

ಹಿಂದಿನ ರಾಶಿಯವರಿಗಿಂತ ಸ್ವಲ್ಪ ವೃಟ್ಟಿಗೆ ಇವರ ಅವಸ್ಥೆಯು ಸುಧಾರಿಸಿರುವುದು ವಾಹನಾದಿಗಳ ಮೂಲಕ ಸಂಚರಿಸುವಾಗಲಾಗಲೀ ಯಾ ಇತರ ಕಾರ್ಯಗಳಲ್ಲಾಗಲಿ ದೇಹಕ್ಕೆ ಘಾಯ ವ ಹಾನಿತಗಲುವ ಸಂಭವವಿದೆ. ನಿಷ್ಠುರ ವಚನಗಳಿಂದಾಗಿ ಸರ್ವತ್ರ ಕಲಹವುಂಟಾಗುವುದು. ಪ್ರವಾಸದಲ್ಲಿ ಬಹಳ ಕಷ್ಟಗಳು ಸಂಭವಿಸುವವು. ಯಾವ ಕಾರ್ಯವನ್ನೂ ಪೂರ್ತಿ ಮಾಡಲು ಸಾಧ್ಯವಾಗುವುದಿಲ್ಲ. ಶತ್ರುಗಳು ಸ್ವಕಾರ್ಯ ನಿರ್ವಹಿಸಲು ಸಮಯ ಹಾರೈಸುತ್ತಿರುವರು. ಇರತಕ್ಕ ಸಂಪತ್ತುಗಳೆಲ್ಲಾ ಕ್ಷೀಣದೆಶೆಯನ್ನು ಹೊಂದುವವು ಆದರೂ ಗುರು ಶುಕ್ರರ ಅನುಗ್ರಹವಿರುವುದರಿಂದ ಸಮಾಜದಲ್ಲಿ ಗೌರವವು ದೊರೆಯುವುದು. ಮತ್ತು ಸಂಸಾರವು ಸುಗಮವಾಗಿ ಮುಂದರಿವದು. ಭೋಗಿಗಳಾದ ಇವರಿಗೆ ಶಯನ ಅಶನಾದಿಗಳಲ್ಲಿ ಏನೂ ಕೊರತೆಯುಂಟಾಗದು. ತಾ. 29, 30, 31 ಈ ದಿನಗಳಲ್ಲಿ ಚಂದ್ರಬಲವಿರುವುದರಿಂದ ಕಾರ್ಯಜಯ, ಸುಖಲಾಭವಾಗುವುದು!

**ಕನ್ಯಾ:—**

ನಿಮಗೆ ಈ ವಾರದಲ್ಲಿ ಅತ್ಯಂತ ಕೆಟ್ಟದ್ದಿರುವುದು. ಜೀವನದಲ್ಲೇ ವೈರಾಗ್ಯವುಂಟಾಗುವುದು. ಶರೀರದಲ್ಲಿ ರೋಗದ ದೆಸೆಯಿಂದಾಗಿ ಅತೀವ ವೇದನೆಯುಂಟಾಗುವುದು. ಒಂದೆಡೆಯಲ್ಲಿ ರೋಗದ ಪೀಡೆ, ಇನ್ನೊಂದೆಡೆ ಶತ್ರುಗಳ ಪೀಡೆ. ಇವುಗಳಿಂದಾಗಿ ಮನೋವ್ಯಥೆಯು ಯಾವಾಗಲೂ ತಪ್ಪಿದ್ದಲ್ಲವು. ವ್ಯಾಪಾರ ವ್ಯವಹಾರಾದಿ ಕಾರ್ಯಗಳಲ್ಲಿ ತುಂಬಾ ಧನವ್ಯಯವಾಗುವುದಲ್ಲದೆ ಹೆಚ್ಚಾಗಿ ನಷ್ಟವು ಸಂಭವಿಸುವುದು. ಪಿತ್ಥವಿಕಾರದಿಂದುಂಟಾದ ರೋಗ ಮತ್ತು ನೇತ್ರವೇದನೆ ಇವುಗಳಿಂದ ಸಂತಾಪವು ಹೆಚ್ಚಾಗಿ ದುಃಖಕ್ಕೀಡಾಗಿ ತನ್ನಿವಾರಣೆಗಾಗಿ ಬಹಳ ಖರ್ಚು ಆಗಲಿದೆ. ಮತ್ತು ನಿಷ್ಕಾರಣವಾದ ಜಗಳದಿಂದಾಗಿಯೂ, ದೇಶಾಟನದಿಂದಾಗಿಯೂ, ಆರಂಭಿಸಿದ ಕಾರ್ಯದಲ್ಲಿ ಅಪಜಯವುಂಟಾಗುವುದರಿಂದಲೂ ಕಷ್ಟನಷ್ಟಗಳು ಮತ್ತಷ್ಟು ವೃದ್ಧಿ ಹೊಂದುವುವು. ಆರ್ಥಿಕ ಮುಗ್ಗಟ್ಟಿನಿಂದ ಹೆಚ್ಚಾಗಿ ಪೀಡಿತರಾಗುವಿರಿ. ಅಂತೂ ಯಾವ ಭಾಗದಲ್ಲೂ ಕೂಡ ಸುಖವು ಸ್ವಪ್ನದಲ್ಲೂ ಇಲ್ಲವೆಂದರೆ ತಪ್ಪಾಗದು. ಇಷ್ಟೆಲ್ಲಾ ಕಷ್ಟಕ್ಕೆ ಕಾರಣರಾದ ಶುಕ್ರ ಭಿನ್ನ ಗ್ರಹರಿಗೆ ತೃಪ್ತಿಕರವಾಗುವ ರೀತಿಯಲ್ಲಿ ನಡಕೊಂಡರೆ ಪೂರ್ವೋಕ್ತ ಅನಿಷ್ಟಗಳು ಆದಷ್ಟು ಕಡಿಮೆಯಾಗುವವು. ತಾ. 28. ಮತ್ತು 1. 2 ಈ ದಿನಗಳ ಮಟ್ಟಿಗೆ ಸ್ತ್ರೀಸುಖ, ಧನಲಾಭಗಳು ಆಗುವವು.

**ತುಲಾ:—**

ತನೋಗ್ರಹರಾದ ರಾಹು ಕೇತುಗಳನ್ನು ಹೊರತಾದ ಸಪ್ತ ಗ್ರಹರೂ ನಿಮ್ಮ ಶುಭವನ್ನು ಹಾರೈಸುವರು. ನಿಮ್ಮ ಭಾಗ್ಯಲಕ್ಷ್ಮಿಯು ಕೆಲವು ವಾರಗಳಿಂದ ಉತ್ತಮ ರೀತಿಯನ್ನು ಹೊಂದಿರುವುದು ತುಂಬಾ ಸಂತೋಷ ವಿಷಯ. ಆದ ಕಾರಣ ಉದಾಸೀನರಾಗಿ ಅಜ್ಞರಂತೆ ವ್ಯರ್ಥಕಾಲಹರಣ ಮಾಡಬೇಡಿ. ಉದ್ಯೋಗದಲ್ಲಿ ಕೈಹಾಕಿರಿ. ‘ಉದ್ಯೋಗಿನಂ ಪುರುಷಸಿಂಹಮುಪೈತಿ ಲಕ್ಷ್ಮೀಃ’ ಎಂಬ ಆರ್ಯೋಕ್ತಿಯಂತೆ ಉದ್ಯೋಗಶೀಲನಾದ ಪುರುಷೋತ್ತಮನನ್ನು ಸಂಪತ್ತು (ಸಂಪತ್ತು ಎಂದರೆ ಕೇವಲ ಧನ ಮಾತ್ರವಲ್ಲ. ಅಷ್ಟೈಶ್ವರ್ಯವೆಂದರ್ಥವು.) ಹೊಂದಿಯೇ ಹೊಂದುವದು. ನಿಮಗೆ ಸರ್ವತ್ರ ಸ್ಥಾನಮಾನ ಜಯಗಳು ದೊರೆಯುವವು. ಗೃಹಕೃತ್ಯವು ಅತ್ಯಂತ ತೃಪ್ತಿಕರವಾಗಿರುವುದು. ಬಂಧು ಭಾಂಧವರಲ್ಲೂ ಮಿತ್ರರಲ್ಲೂ ಸಮಾಜದಲ್ಲೂ ದೇಶದಲ್ಲೂ ಸಾಮಾನ್ಯ ತುಂಡು ರಾಜರಂತೆ ಬಹುಮಾನಿಸಲ್ಪಡುವಿರಿ. ಸ್ತ್ರೀಯರು ತಾವಾಗಿ ನಿಮ್ಮನ್ನನುಸರಿಸುವರು. ತಾ 29, 30, 31, ಮತ್ತು 3 ಈ ದಿನಗಳು ಅತ್ಯಂತ ಉತ್ತಮಗಳಾಗಿರುವುದರಿಂದ ಮೃಷ್ಟಾನ್ನ ಭೋಜನ, ಜಯ, ವಿವಿಧ ರೀತಿಯಿಂದ ಧನಲಾಭ ಇತ್ಯಾದಿಗಳು ಆಗಲಿವೆ.

**ವೃಶ್ಚಿಕ:—**

ಅನುಕೂಲರಾದ ಗ್ರಹರು ಹೆಚ್ಚಾಗಿರುವುದರಿಂದ ಈ ವಾರವು ಇಷ್ಟವಾಗಿರುವುದು. ಆರಂಭಿಸಿದ ಕಾರ್ಯಗಳು ಶೀಘ್ರದಲ್ಲಿ ಜಯಪ್ರದವಾಗಿ ಕೊನೆಹೊಂದುವವು. ಅನೇಕ ಶುಭಕಾರ್ಯಗಳು ಇವರಿಂದ ಮಾಡಲ್ಪಡುವವು. ನಾನಾ ರೀತಿಯಿಂದ ಧನಲಾಭವಾಗುವ ಯೋಗವಿದೆ. ಶತ್ರುಗಳು ತಮ್ಮಲ್ಲಿರುವ ಹಗೆಯನ್ನು ತೊರೆದು ಶರಣಾಗತರಾಗುವರು. ಕೋರ್ಟು ಇತ್ಯಾದಿಗಳಲ್ಲಿರತಕ್ಕ ಕಾರ್ಯದಲ್ಲಿ ಯಶಸ್ಸು ದೊರೆಯುವುದು. ಮಿತ್ರರಿಂದ ನಾನಾ ತರದ ಸಹಾಯಗಳು ಸಿಗುವವು. ಇದರಿಂದಾಗಿ ಮನಸ್ಸಿಗೆ ಶಾಂತಿಯಿದ್ದು ಸುಖವಾಗಿರುವರು. ಇಷ್ಟೆಲ್ಲಾ ಅನುಕೂಲಗಳಾದ ಸಂದರ್ಭಗಳಿದ್ದರೂ ಅನಿಷ್ಟಕಾರಕರಾದ ಗುರು ಶನಿಗಳಿಂದ ಬಂಧುಗಳು ಆಪ್ತರು ಮಾಡುವ ವಂಚಕತನದಿಂದ ವಾ ಅನಿಷ್ಟಕರ್ಮಗಳಿಂದ ಬಹಳ ಕ್ಲೇಶಗೊಳ್ಳುವರು. ಮಾತ್ರವಲ್ಲ, ಸಂಸಾರದಲ್ಲಿ ತುಂಬಾ ಕಷ್ಟಗಳುಂಟಾಗುವವು. ಹೆಂಡತಿ ಮಕ್ಕಳು ಭೃತ್ಯರೂ ಕೂಡ ದೂರವಾಗುವರು. ಎಲ್ಲರಲ್ಲಿಯೂ ಕಲಹವುಂಟಾಗುವುದು. ಆದ ಕಾರಣ ತಾ. 29, 30, 31, ಮತ್ತು 3

ಈ ದಿನಗಳಲ್ಲಿ ಬಹಳ ಜಾಗ್ರತೆಯಿಂದ ವ್ಯವಹಾರ ಮಾಡಬೇಕು, ಮಾನ ಮತ್ತು ಧನಗಳಿಗೆ ಹಾನಿಯಾಗುವ ಕಾರ್ಯಗಳು ಅಕಸ್ಮಾತ್ ಸಂಭವಿಸೀತು. ಆರೋಗ್ಯವೂ ಕೆಟ್ಟೀತು.

**ಧನು:—**

ಕೆಲವು ವಾರಗಳಿಂದ ನಿಮ್ಮ ಗ್ರಹಗತಿ ಬಹಳ ಕೆಟ್ಟಿದೆ. ಇನ್ನೂ ಸುಕಾಲವು ಬಂದಿಲ್ಲ. ಆದರೂ ಧೈರ್ಯಗೆಡಬೇಡಿ. ಆಪತ್ಕಾಲದಲ್ಲಿ ಅತಿ ಧೈರ್ಯದಿಂದಿರುವುದೇ ಜಾಣರ ಲಕ್ಷಣವೆಂದು ಪ್ರಾಜ್ಞರು ಹೇಳುವರು. ಧೈರ್ಯವೊಂದಿದ್ದರೆ ಎಂತಹ ದುಸ್ತರವಾದ ಆಪತ್ತಿನಿಂದಲೂ ಕೂಡ ಸುಖವಾಗಿ ಪಾರಾಗಬಹುದು. ಇನ್ನು ನಾಲ್ಕೈದು ವಾರಗಳಲ್ಲೇ ನೀವು ನಿಶ್ಚಿಂತರಾಗುವಿರಿ. ಈಗ ನಿಮಗೆ ದೇಹಾರೋಗ್ಯವು ಸರಿಯಿರದು. ಯಾವ ಕಾರ್ಯವನ್ನು ಮಾಡಿದರೂ ಆಯಕ್ಕಿಂತ ಹೆಚ್ಚಾಗಿ ವ್ಯಯುವೇ ಆದೀತು. ದೇಹದಸಾರಭೂತವಾದ ಭಾಗವು ನಾಶವಾಗುವುದರಿಂದ ಕಾಂತಿಹೀನರಾಗಿ ಕೃಶತ್ವವನ್ನು ಹೊಂದಬಹುದು. ಶತ್ರುಗಳ ಪೀಡೆಯು ಹೆಜ್ಜೆ ಹೆಜ್ಜೆಗೂ ನಿಮಗೆ ತಪ್ಪಿದ್ದಲ್ಲವು. ಯಾರೂ ನಿಮ್ಮನ್ನು ಗೌರವಿಸರು. ಮನಸ್ಸು ಚಂಚಲವಾದದ್ದಾಗಿಯೂ ವಕ್ರವಾದದ್ದಾಗಿಯೂ ಇರುವುದರಿಂದ ದುಷ್ಕಾರ್ಯದಲ್ಲೇ ನಿಮ್ಮನ್ನು ಪ್ರವೇಶಿಸುವುದು. ದುರ್ವೃತ್ತರಾದ ನಿಮ್ಮ ಸಂಸರ್ಗವೇ ಒಳ್ಳೆಯದಲ್ಲವೆಂದು ಮಿತ್ರರು ಮಾತ್ರವಲ್ಲ, ನಿಮ್ಮ ಅರ್ಧಾಂಗಿಯೂ ಕೂಡಾ ತಿಳಿದು ದೂರ ಸರಿದಾಳು. ಆದಕಾರಣ ನೀವು ಹೆದರದೆ ಧೈರ್ಯ ಮತ್ತು ಜಾಣ್ಮೆಯಿಂದ. ವರ್ತಿಸಿರಿ. ತಾ, 29, 30, 31, ಈ ದಿನಗಳು ಸ್ವಲ್ಪ ಮಟ್ಟಿಗೆ ಹಿತಕರವಾಗಿವೆ. ಮಿತ್ರರ ಒಡನಾಟದಿಂದಾಗಿ ಮನಸ್ಸಿಗೆ ಸಂತೋಷ ಉಂಟಾದೀತು.

**ಮಕರ:—**

ಒಳ್ಳೆಯದಾಗಲಿ ಕೆಟ್ಟದಾಗಲಿ ಎಲ್ಲವೂ ದೈವಾಧೀನ. ನಮ್ಮಿಂದ ಯಾವುದೂ ಸಾಧ್ಯವಲ್ಲವು ಎಂಬವರಂತೆ ನೀವು ಸುಮ್ಮನಿದ್ದರೆ ಎಂದೂ ಹಿತವಾಗದು. ಅಥವಾ ನಮ್ಮಿಂದಲೇ ಎಲ್ಲಾ ಆಗುವುದು. ದೈವದಿಂದೇನು ಎಂಬವರಂತೆ ಪ್ರವರ್ತಿಸಿದರೂ ಕೂಡ ಫಲವು ಸಮಾಚೀನವಾಗಲಾರದು. ಆದ್ದರಿಂದ ಪೌರುಷ ಮತ್ತು ಅದೃಷ್ಟ (ಅಂದರೆ ಸ್ವಪ್ರಯತ್ನ ಮತ್ತು ದೈವಾನುಗ್ರಹ) ಈ ಎರಡನ್ನೂ ಸಮ ಬಲವಾಗಿಯೇ ತಿಳಿದು ವರ್ತಿಸಿದರೆ ತಕ್ಕ ಫಲವು ಸಿಕ್ಕಿಯೇ ಸಿಗುವದು. ಹಾಗೆಯೇ ಈ ವಾರದಲ್ಲಿ ನಿಮ್ಮ ಅದೃಷ್ಟದೊಂದಿಗೆ ಪುರುಷ ಪ್ರಯತ್ನವನ್ನು ಸೇರಿಸಿರಿ. ಇಷ್ಟ ವಿಶೇಷಗಳಾಗಲಿ ಅನಿಷ್ಟಗಳಾಗಲಿ ಆಗುವಂತಿಲ್ಲ. ಮುಂಚಿನ ಸ್ಥಿತಿಗೆ ಯಾವ ತರದಲ್ಲೂ ಹಾನಿಯಾಗದು. ಆದ ಕಾರಣ ನೀವು ಈ ವಾರದಲ್ಲಿ ಹೊಸತಾದೊಂದು ಕಾರ್ಯವನ್ನಾರಂಭಿಸುವುದು ಅವಶ್ಯವಿಲ್ಲ. ಇದ್ದುದನ್ನೇ ಮುಂದರಿಸಿರಿ. ಪ್ರಯತ್ನಕ್ಕೆ ತಕ್ಕ ಫಲಸಿಗುವುದು. ಯಾವಾಗಲೂ ಮಾತನಾಡುವಾಗ ನಾಲಗೆಯನ್ನು ಬಿಗಿಹಿಡಿಯಿರಿ. ಕಲಹವು ಆಗಲಿಕ್ಕಿದೆ. ವಾರದ ಆದಿ ಮತ್ತು ಅಂತ್ಯ ಈ ಎರಡು ದಿನಗಳಲ್ಲಿ ಸ್ವಲ್ಪ ಮಟ್ಟಿಗೆ ದೈವಬಲ ಕಡಿಮೆಯಿರುವುದರಿಂದ ಮೇಲ್ಕಂಡ ದಿನಗಳಲ್ಲಿ ದೇಹದ ಆರೋಗ್ಯಕ್ಕೆ ಸ್ವಲ್ಪಮಟ್ಟಿನ ಹಾನಿ ತೋರಬಹುದು. ಆ ಬಗ್ಗೆ ಸ್ವಲ್ಪ ಹಣ ಖರ್ಚು ಮಾಡಬೇಕಾದೀತು.

**ಕುಂಭ:—**

ಈ ರಾಶಿಯ ಜನರು ಈ ವಾರದಲ್ಲಿ ಬಹಳ ಕಷ್ಟಕ್ಕೀಡಾಗುವರು. ಕಾರಣ ಶುಕ್ರಕೇತುಗಳು ವಿನಾ ಸರ್ವ ಗ್ರಹರೂ ಇವರಿಗೆ ಅನಿಷ್ಟವನ್ನುಂಟುಮಾಡಬಯಸುವ ಮಹಾತ್ಮರಿರುವರು. ಆದ್ದರಿಂದ ನಿಮ್ಮ ಆರೋಗ್ಯ ಕೆಟ್ಟು ಹೊಟ್ಟೆನೋವು ಕಣ್ಣುನೋವು ಉಂಟಾದೀತು. ಮತ್ತು ಪ್ರವಾಸ ನಿಮಿತ್ತವಾಗಿಯೂ, ರೋಗದ ಸಲುವಾಗಿಯೂ ಕೂಡ ಹಣಖರ್ಚುಮಾಡುವರು. ಒಂದಲ್ಲೊಂದು ನೆಪದಿಂದಕೈಹಿಡಿದಾಕೆಯು ಕಲಹ ಮಾಡುವಳು. ಇತರ ಜಾತಿಯವರೊಡನೆ ವ್ಯವಹಾರಮಾಡುವಾಗ ಬಹಳ ಜಾಗ್ರತೆಯಿಂದಿರುವುದು ಲೇಸು. ಆದರೂ ಕಲಹವು ತಪ್ಪುವಂತಿಲ್ಲ. ಹಣದಿಂದಾಗಿ ಬಹಳ ಕಷ್ಟ ಸಂಭವಿಸುವುದು. ಈ ಚಿಂತೆಯಿಂದಲೇ ನಿದ್ರೆ ಸಹಾ ಬೀಳದು. ಆದ ಕಾರಣ ಶರೀರದ ಕಾಂತಿಯು ಮಾಯವಾಗುವುದು. ಈ ಎಲ್ಲ ಅನಿಷ್ಟ ಗ್ರಹರಿಂದಾಗಿ ಸಂಭವಿಸುವ ಈ ದೋಷಗಳ ನಿವಾರಣೆಗಾಗಿ ನವಗ್ರಹ ಜಪವನ್ನು ಮಾಡುವದು ಅಥವಾ ಮಾಡಿಸುವುದು ಬಹಳ ಹಿತಕರ. ತಾ. 28ರಿಂದ 31ರ ವರೆಗಿನ ದಿನಗಳು ಬಹಳ ಭಯಂಕರವಾದವುಗಳು. ಅಪಮೃತ್ಯುವಿನ ಯೋಗವಿದೆ. ಎಚ್ಚರಿಕೆ.

**ಮೀನ:—**

ಗ್ರಹರ ಬಲಾಬಲವನ್ನು ವಿಮರ್ಶಿಸಲು ಅನಿಷ್ಟ ಗ್ರಹರ ಬಲವೇ ಸ್ವಲ್ಪ ಮಟ್ಟಿಗೆ ಹೆಚ್ಚಿಗೆಯಾಗಿ ತೋರುವುದು. ಕೇವಲ ರವ್ಯಾದಿ ಮೂವರು ಮತ್ತು ತಾ 31ರಿಂದ 4 ದಿನಗಳ ವರೆಗಿನ ಶುಕ್ರ ಆದ್ಯಂತ ದಿನದ ಚಂದ್ರ ಇವರ ಹೊರತು ಮತ್ತೆಲ್ಲರೂ ನಿಮಗೆ ವಿರೋಧಿಗಳೇ. ಅನುಕೂಲರಿಂದಾಗಿ ಆರೋಗ್ಯ, ಕಾರ್ಯಜಯ, ಸ್ಥಾನಮಾನ ಪ್ರಾಪ್ತಿ, ಇವುಗಳು ಆಗಲಿವೆ. ಆದರೂ ಪಾಪಗ್ರಹರು ಪ್ರವಾಸದಲ್ಲಿ ಅತ್ಯಂತ ಕಷ್ಟ ಕೊಡುವರು. ಮತ್ತು ಮನೋವ್ಯಥೆಗೆ ಕಾರಣವಾಗುವ ಅನೇಕ ಕ್ರಿಯೆಗಳನ್ನು ಮಾಡಿಸುವರು. ಭೃತ್ಯ ಜನರು ಮಕ್ಕಳು ಇವರಲ್ಲಿ ಕಲಹವಾಗಿ ಅವರು ತ್ಯಜಿಸುವುದರಿಂದ ಸುಖಹೀನರಾದ ನಿಮ್ಮ ಮುಖಶ್ರೀಯು ನಷ್ಟವಾಗಿ ತೇಜೋಹೀನರಾಗುವಿರಿ. ಸ್ವಜನರೆಂಬವರು ಹೆಸರಿಗೆ ಮಾತ್ರ ಹೊರತು ಅವರಿಂದ ಎಳ್ಳಷ್ಟೂ ಸಹಾಯವಾಗುವಂತಿಲ್ಲ. ಅಪಕಾರಕ್ಕೆ ಅಡ್ಡಿಯಿಲ್ಲ. ವ್ಯಾಜ್ಯ ಸಂಬಂಧವಾಗಿ ಹಣದ ಖರ್ಚು ಬಹಳ ಆಗಲಿದೆ. ವಾರದ ಆದ್ಯಂತ ದಿನಗಳು ಸ್ವಲ್ಪ ಶುಭಕರವಿವೆ.

ಬಾಲಭಾಸ್ಕರ.

---

## ವಚನಾಮೃತ

**“ಸಹಾಯಶೂನ್ಯರಿಗೆ ಸಹಾಯ ಮಾಡಿದರೆ ಪೆಟ್ಟು ತಿನ್ನಬೇಕಾಗುವುದು.”**

s s s s

**“ಅಹಂಕಾರದಿಂದ ಮುಕ್ತನಾದವನೇ ನಪುಂಸಕನು.”**

s s s s

**“ನಿಷ್ಕಾಮ ಕರ್ಮವೇ ಪ್ರಜಾಭಿವೃದ್ಧಿಯ ಕಾರಣ.”**

# ಸಂಕುಚಿತ ಭಾರತ

**ಭಾರ ವ್ಯತ್ಯಾಸ!**

ಭಾರತವು ಬ್ರಿಟಿಷ್ ಸಾಮ್ರಾಜ್ಯದೊಡನೆ ವ್ಯಾಪಾರವನ್ನು ಯಶಸ್ವಿಯಾಗಿ ಮಾಡುತ್ತಿದೆ. ಭಾರತದ ಸಾಮಾನ್ಯ ಸೈನಿಕರು ಯುದ್ಧರಂಗದಲ್ಲಿ ಹೋರಾಡುವರೆ ಯುರೋಪಿಗೆ ಕಳುಹಿಸಲ್ಪಡುತ್ತಾರೆ. ಇಂಗ್ಲೆಂಡು ಭಾರತಕ್ಕೆ ವಿಮಾನಿಶಾರದರನ್ನೋ, ಸಾರ್ಜಂಟರನ್ನೋ ಕಳುಹಿಸುತ್ತದೆ.

ಯೋಗ್ಯ ವ್ಯಾಪಾರವಿದು! ಒಬ್ಬ ಇನ್ಸ್ಯೂರೆನ್ಸ್ ಆಕ್ಚುವರಿಗೆ ೫೦ ಭಾರತೀಯ ಸೈನಿಕರು. ಅಂದರೆ ಬ್ರಿಟಿಷ್ ಅಧಿಕಾರಿಗಳಿಗೆ ತಿಂಗಳೊಂದರ ೨೫೦೦ ರೂಪಾಯಿ ಸಂಬಳ ಮತ್ತು ೧೫೦ ರೂಪಾಯಿ ಭತ್ತೆ. ಬ್ರಿಟಿಷರಿಗೂ ಭಾರತೀಯರಿಗೂ ಇರುವ ವ್ಯತ್ಯಾಸವು ಇಲ್ಲಿ ಸ್ಪಷ್ಟವಾಗುತ್ತದೆ. ಒಬ್ಬ ಬ್ರಿಟಿಷನನ್ನು ತಕ್ಕಡಿಯ ಒಂದು ಬದಿಯಲ್ಲಿಟ್ಟು ಸಮತೂಕವಾಗಬೇಕಾದರೆ ಇನ್ನೊಂದು ಬದಿಯಲ್ಲಿ ೫೦ ಭಾರತೀಯರನ್ನಿಡಬೇಕು!

ஐ ஐ ஐ

**ಜೈಲಿಗಾಗಿ ಹಾತೊರೆಯುವರು!**

“ನಾನು ಜೈಲಿಗೆ ಹೋಗುತ್ತೇನೆ” ಎಂದೊಬ್ಬ ವ್ಯಕ್ತಿಯು ಪೇಶಾವರದಲ್ಲಿ ಹೇಳಿದನಂತೆ- ಕಾರಣ?–“ಡಾ| ಖಾನ್ ಸಾಹೇಬರು ಜೈಲುಗಳನ್ನು ಸುಧಾರಿಸಿ ಅಲ್ಲಿಯ ಜೀವನವನ್ನು ಸುಖಮಯವನ್ನಾಗಿ ಮಾಡಿದ್ದಾರಂತೆ” ನಿರುದ್ಯೋಗಿಗಳು ಲೆಕ್ಕ ಮಿತಿಯಿಲ್ಲದೆ ಜೈಲಿಗೆ ಹೋಗಿಬಿಟ್ಟರೆ ಕಾಂಗ್ರೆಸ್ ಸರಕಾರಗಳು ಪಾನನಿಷೇಧದಿಂದಾಗುವ ನಷ್ಟವನ್ನು ಹೇಗೆ ತುಂಬಬೇಕು? ಜನರು ನಿಜವಾಗಿಯೂ ಜೈಲಿಗೆ ಹೋಗುವುದಾದರೆ ಇದು ಪ್ರಾಂತಿಕ ಸರಕಾರಗಳ ಮುಂದೆ ಬರಬಹುದಾದ ಜಟಿಲವಾದೊಂದು ಸಮಸ್ಯೆಯಾಗಬಹುದು.

ஐ ஐ ஐ

**ಆದರೆ ಆಳರಸರಾಗಬೇಕು!**

ಆದರೆ ಆಳರಸರಾಗಬೇಕು. ಏನು ಸಂತೋಷದ ಸಂಗತಿಯಿದು! ನಮ್ಮ ಪ್ರಾಂತಿಕ ಸರಕಾರಗಳ ಮಂತ್ರಿಗಳು ಐನೂರು ರೂಪಾಯಿಗಳನ್ನು ಪಡೆಯುವಾಗ ‘ಮಹಾತಜ್ಞ”ರಾದ ವ್ರೂಲ್ಸೆ ದಂಪತಿಯರು ಭಾರತದಲ್ಲಿ ಸಂಚರಿಸಿ ಸಾವಿರಾರು ರೂಪಾಯಿಗಳನ್ನು ಪಡೆಯುವರಂತೆ ಅವರಿಬ್ಬರ ಖರ್ಚಿಗೂ ಹಣವನ್ನು ಭಾರತೀಯರು ಕೊಟ್ಟ ತೆರಿಗೆಯಿಂದ ಕೊಡಬೇಕು. ಗಂಡನಿಗೆ ಪ್ರತ್ಯೇಕ ಸಂಬಳ. ಹೆಂಡತಿ ಅವರ ಕಾರ್ಯದರ್ಶಿಯಾದುದರಿಂದ ಅವರಿಗೆ ಪ್ರತ್ಯೇಕ ಸಂಬಳ. ಪುಣ್ಯದಲ್ಲಿ ಮಗಳೊಬ್ಬಳಿದ್ದರೆ “ಟ್ಯಾಪಿಸ್ಟ್” ಸ್ಥಾನದ ವೇತನ ಪಡೆಯಬಹುದಿತ್ತು. ಅವರಿಗೆ ಸ್ಟೀಮರಿನ ಖರ್ಚು ಇಲ್ಲ. ಇಷ್ಟೆಲ್ಲಾ ಸವಲತ್ತುಗಳು ಬ್ರಿಟಿಷರಿಗೆ ಸಿಗುತ್ತಿರುವಾಗ ಭಾರತಕ್ಕೆ ಅವರು ಸ್ವರಾಜ್ಯವನ್ನು ಕೊಡುವುದಾದರೂ ಹೇಗೆ?

ஐ ஐ ஐ

**ಕುಂಬಳಕಾಯಿಯನ್ನು ಕುಣಿಸುವ ತೊಂಡೆಕಾಯಿ!**

ಸಿಕ್ಕಿದರೆ ಇಂತಹ ಪ್ರಾತಿನಿಧ್ಯ ಸಿಗಬೇಕು. ಬಂಗಾಳದ ಜನಸಂಖ್ಯೆಯ ಶೇಕಡಾ ಅರ್ಧದಷ್ಟಿರುವ ಯುರೋಪಿಯಾನರಿಗೆ ಶೇಕಡಾ ೧೦ರಷ್ಟು ಎಸೆಂಬ್ಲಿ ಸದಸ್ಯತನದ ಪ್ರಾತಿನಿಧ್ಯ. ಸರಿ. ಇಷ್ಟು ಮುಂದಾಲೋಚನೆಯಿದ್ದುದರಿಂದಲೇ ಬ್ರಿಟಿಷ್ ಸಾಮ್ರಾಜ್ಯದ ಪಂಕವೆಳೆಯುವವರಲ್ಲಿ ಅಗ್ರಗಣ್ಯರೆನಿಸಿದ ಬಂಗಾಳದ ಹುಲಿಯು ಮೊನ್ನೆ ಬದುಕಿಕೊಂಡದ್ದು. ಶೇಕಡಾ ೯೪|| ಭಾರತೀಯರಿಗೆ ಅವಿಶ್ವಾಸ ಠರಾವಿನ ಕಾಲದಲ್ಲಿ ಶೇಕಡಾ||ದಷ್ಟು ಯುರೋಪಿಯಾನರು ಪಾಠ ಕಲಿಸಲಿಲ್ಲವೆ? ೧೫೦ ವರುಷ ನಮ್ಮನ್ನಾಳಿದ ಬ್ರಿಟಿಷರಿಗೆ ಮೆದುಳೆಂಬುದು ನಿಜವಾಗಿಯೂ ಇದೆ.

ஐ ஐ ஐ

**ಪೆಲೆಸ್ಟೈನ್ ಪರಿಷತ್ತು!**

ಪೆಲೆಸ್ಟೈನಿನಲ್ಲಾಗುತ್ತಿರುವ ಅತ್ಯಾಚಾರದ ಕುರಿತು ಚರ್ಚಿಸಲು ಜಗತ್ತಿನ ಎಲ್ಲಾ ರಾಷ್ಟ್ರಗಳ ಮುಸ್ಲಿಮ್ ಧುರೀಣರು ಒಕ್ಟೋಬರ ೭ರಂದು ಕೈರೋ ನಗರದಲ್ಲಿ ಸೇರುವರಂತೆ. ಆ ಪರಿಷತ್ತಿಗೆ ಮುಸ್ಲಿಮ್ ಲೀಗಿನ ಅಧ್ಯಕ್ಷರಾದ ಮಿ| ಎಮ್. ಎ ಜಿನ್ನರೂ ತೆರಳುವರಂತೆ.

ಪ್ರಾಯಶಃ ಈ ಪರಿಷತ್ತಿನಲ್ಲಿ ಮಿ| ಜಿನ್ನರು ಬ್ರಿಟಿಷ್ ಸಾಮ್ರಾಜ್ಯಶಾಹಿಯನ್ನು ಖಂಡಿಸುವಾಗ “ಕಾಂಗ್ರೆಸ್ ಸಾಮ್ರಾಜ್ಯಶಾಹಿ” ಯನ್ನೂ ಖಂಡಿಸಿ, ವಿದೇಶಗಳಲ್ಲಿ ಮಾಡಬೇಕೆಂದು ನಿರ್ಣೈಸಿದ ಪ್ರಚಾರಕಾರ್ಯದ ಒಂದು ಭಾಗವನ್ನು ಪೂರೈಸಬಹುದು.

# ಛಾಯಾ ಲೋಕ.

ಸಂಗ್ರಾಹಕರು:—ಶ್ರೀ. ಹಯವದನರಾಯರು

## ಹೊಸ ಏರ್ಪಾಡು!

ಚಿತ್ರವು ಪ್ರದರ್ಶಿಸಲ್ಪಡುವಾಗ ಬ್ರಿಟಿಷ್ ತರುಣ ತರುಣಿಯರು ಮುತ್ತು ಕೊಡುವ ಶಬ್ದದಿಂದ ಚಿತ್ರದಲ್ಲಿ ಏನಾಗುತ್ತಿದೆಯೆಂಬುದು ತಿಳಿಯುವುದಿಲ್ಲವೆಂದು ಹಲವರು ದೂರು ಹೇಳಿದುದರಿಂದ ಇಂಗ್ಲೆಂಡಿನ ಒಂದು ಥಿಯೇಟರಿನ ಮಾಲಕರು "ಪ್ರಣಯಿಗಳ ಮೂಲೆ" ಯೆಂಬ ಪ್ರತ್ಯೇಕ ವಿಭಾಗವನ್ನು ಏರ್ಪಡಿಸಿದ್ದಾರೆ. ಆ ಭಾಗದಲ್ಲಿ ಬೆಳಕು ಕೂಡಾ ಮಸುಕಾಗುವ ಏರ್ಪಾಡುಮಾಡಿದ್ದಾರೆ.

ಇಂಗ್ಲೆಂಡಿನ ಈ ನವೀನ ಮಾದರಿಯನ್ನು ಭಾರತೀಯರು ಅನುಕರಿಸಲಾರರಷ್ಟೆ!

ooo

## ಸರ್ವಾಧಿಕಾರಿಗಳ ಚಲಚ್ಚಿತ್ರ!

ಅಮೇರಿಕದ ಡಾಯ್ಲಿ ಕಾರ್ಟೆ ಕಂಪೆನಿಯವರು ಒಂದು ಹೊಸ ಚಿತ್ರ ತಯಾರಿಸಿದ್ದಾರೆ. ಇದರಲ್ಲಿ ಮುಸ್ಸೋಲಿನಿ, ಹಿಟ್ಲರ್, ರೂಸ್ ವೆಲ್ಟ್, ನೆವಿಲ್ ಚೇಂಬರ್ಲೆನ್, ಲಾಯಡ್ ಜಾರ್ಜ್ ಮೊದಲಾದವರ ಪಾತ್ರಗಳು ಇತರರಿಂದ ಅಭಿನಯಿಸಲ್ಪಟ್ಟಿವೆ.



ನ್ಯೂಥಿಯೇಟರಿನ ಪ್ರಸಿದ್ಧ ಚಿತ್ರವಾದ "ಧರತೀ ಮಾತಾ"ದಲ್ಲಿ ಅಭಿನಯಿಸಿದ **ದುರ್ಗಾದಾಸ್ ಬ್ಯಾನರ್ಜಿ.**

ಅಮೇರಿಕವೊಂದಲ್ಲದೆ ಇತರ ಎಲ್ಲಾ ರಾಷ್ಟ್ರಗಳು ಚಿತ್ರಕ್ಕೆ ತಡೆ ಹಾಕಿವೆ.

ooo

## ದೇವಿಕಾ ರಾಣಿಯ ಖಡ್ಗ ಯುದ್ಧ

ಬೊಂಬೇ ಟಾಕೀಸಿನವರ "ವಚನ"ದಲ್ಲಿ ದೇವಿಕಾ ರಾಣಿಯು ಅಶ್ವಾರೋಹಿಣಿಯಾಗಿ ಕತ್ತಿ ಹಿಡಿದು ಯುದ್ಧ ಮಾಡುವಳು. ನಾಚಿಕೆಯ ಮಲ್ಲನಾದ ಅಶೋಕ ಕುಮಾರನು ಧೀರ ಯೋಧನಂತೆ ಹೋರಾಡಿ ಗಂಭೀರ ಪ್ರಣಯ ಲೀಲೆಯನ್ನು ತೋರುವನು. ನೋಡಬೇಕಾದ ದೃಶ್ಯಗಳಿವು.

## "ಧರತಿಮಾತಾ"ದಲ್ಲಿ ಕಲಾವೈಭವ

ನ್ಯೂಥಿಯೇಟರಿನವರ ಧರತಿಮಾತಾ ಚಿತ್ರದಲ್ಲಿ ಪ್ರಕೃತಿಯ ಸೌಂದರ್ಯವನ್ನು ನಿರ್ದೇಶಕ ನಿತಿನ್ ಬೋಸರು ತುಂಬಿರುವರಂತೆ ಸಂಗೀತ ಅಭಿನಯಗಳಲ್ಲಿ ಉಮಾಶಶಿಗೂ ಸೈಗಲನಿಗೂ

ದ್ವಂದ್ವ ಯುದ್ಧವನ್ನು ಮಾಡಿರುವರಂತೆ! ಕಮಲೇಶ ಕುಮಾರಿ, ನವಾಬ್ ಮೊದಲಾದವರು ತಮ್ಮ ಕುದುರೆಗಳನ್ನು ಅವರ ಸಾಲಿನಲ್ಲಿಯೇ ಓಡಿಸಲೆತ್ನಿಸಿರುವರಂತೆ. ಖ್ಯಾತಿಯ ಜೂಜು!



ಗೋಹಾರ್.

## ನಮಗೆ ಬಂದ ಪತ್ರ

**ದಕ್ಷಿಣ ಕನ್ನಡಕ್ಕೆ ಚಲಚ್ಚಿತ್ರ ಸಂಸ್ಥೆ.**

ಪ್ರಕೃತಿ ಸೌಂದರ್ಯದ ದಾರಿದ್ರ್ಯಕ್ಕೆ ತುತ್ತಾಗದ, ಹಾಡುಗಾರಿಕೆಯ ಬೊಕ್ಕಸವು ಬರಿದಾಗದ, ಅಭಿನಯ ಚಾತುರ್ಯದ ಒರತೆಯು ಬತ್ತಿ ಹೋಗದ ನಮ್ಮ ಜಿಲ್ಲೆಯಲ್ಲಿ ಧನಿಕರ ಉತ್ಸಾಹದ ಜ್ಯೋತಿಯು ಮಾತ್ರ ನಂದಿ ಹೋಗಿರುವುದರಿಂದ ಈ ತನಕ ಒಂದು ಚಲಚ್ಚಿತ್ರ ಸಂಸ್ಥೆಯೂ ಸ್ಥಾಪನೆಯಾಗಲಿಲ್ಲ ಇದಕ್ಕೆ ಅವರಿವರನ್ನು ದೂರಿ ಫಲವಿಲ್ಲ. ಕನ್ನಡಿಗರಾದ ಶ್ರೀ. ಗರೂಡ ಸದಾಶಿವರಾಯರು ಈ ಆವಶ್ಯಕತೆಯನ್ನು ಪೂರೈಸಲು ಯತ್ನಿಸುತ್ತಿರುವುದಕ್ಕಾಗಿ ಅವರನ್ನು ಅಭಿನಂದಿಸಬೇಕಾಗಿದೆ. ಅವರಿಗೆ ಸಾಕಷ್ಟು ಬೆಂಬಲವನ್ನೀಯುವ ಬದಲು ನಮ್ಮ 'ಚಲಚ್ಚಿತ್ರಾಭಿಮಾನಿ'ಗಳು ಅವರ ಚಿತ್ರ ತಯಾರಿ ಸಾಮರ್ಥ್ಯ ಆಳವೆಷ್ಟಿದೆಯೆಂಬುದನ್ನು ನೋಡುವುದರಲ್ಲಿ ನಿರತರಾಗಿದ್ದಾರೆ. ಶ್ರೀ. ಗರೂಡರು ತಮಗರಿಯದ ಕೆಲಸಗಳನ್ನು ವಹಿಸಿಕೊಳ್ಳುವರೆಂದು ವಾದಿಸುವುದು ನಿರರ್ಥಕವಾಗಿದೆ. ತಿಳಿದವರು ಮುಂದೆ ಬಂದು ತಾವು ಉತ್ತಮವಾಗಿ ಯಾವುದಾದರೊಂದು ಕಾರ್ಯ ಭಾಗವನ್ನು ಮಾಡುವೆವೆಂದು ಹೇಳುವುದಕ್ಕೆ ಯಾರೂ ಆತಂಕ ಮಾಡುವಂತಿಲ್ಲ. ಕಲಾಭಿಮಾನಿಗಳು ತಮ್ಮ ಉಪಯುಕ್ತ ಸಲಹೆಗಳನ್ನು ಕೊಟ್ಟು, ಅನುಕೂಲಸ್ಥರು ತಮಗೆ ಸಾಧ್ಯವಿರುವ ಬೆಂಬಲವಿತ್ತು, ಇತರರು ತಮ್ಮ ಸಹಾನುಭೂತಿಯನ್ನು ವ್ಯಕ್ತಪಡಿಸಿದರೆ ಶ್ರೀ. ಗರೂಡರ ಯತ್ನವು ಫಲಕಾರಿಯಾಗಬಹುದು. ಇದಕ್ಕೆ ತೀರಾ ವಿರುದ್ಧವಾಗಿ ಅರ್ಥರಹಿತವಾದ ವಿಮರ್ಶಾತ್ಮಕವಾದ ದೀರ್ಘ ಲೇಖನಗಳನ್ನು ಪ್ರಕಟಿಸುವುದರಿಂದ ಅವರ ಉತ್ಸಾಹದ ಚಿಗುರನ್ನು ಕೆಡಿಸಿದಂತಾಗುವುದಲ್ಲದೆ ಈ ಯತ್ನಕ್ಕೆ ಸಹಾಯ ಮಾಡಿದಂತಾಗುವುದಿಲ್ಲ. ಆದುದರಿಂದ ಚಲಚ್ಚಿತ್ರಾಭಿಮಾನಿಗಳು ಶ್ರೀ. ಗರೂಡರಿಗೆ ತಮ್ಮ ಕೈಲಾದ ಬೆಂಬಲವನ್ನಿತ್ತು, ಆದಷ್ಟು ಬೇಗನೆ ಕನ್ನಡ ವಾಕ್ಚಲನ ಚಿತ್ರವೊಂದು ಯೋಗ್ಯವಾದ ಚಿತ್ರಗಳನ್ನು ತಯಾರಿಸುವಂತೆ ಮಾಡಬೇಕೆಂದು ಬಿನ್ನಹ.

'ಚಲಚ್ಚಿತ್ರಾಭಿಮಾನಿ

# ಯು. ಆರ್. ಶೆಣೈ ಎಂಡ್ ಸನ್ಸ್.

ಹೆಡ್ ಆಫೀಸ್:- ರಥಬೀದಿ. ಬ್ರಾಂಚ್:- ಕೊಡಿಯಾಲಬೈಲ್.

ಮಂಗಳೂರು

ಎಲ್ಲಾ ತರದ ಶಾಲಾ ಕಾಲೇಜು ಪುಸ್ತಕಗಳು, ಸ್ಟೇಶನರಿ, ಕಟ್ಲೆರಿ,
ಪ್ರಿಂಟಿಂಗ್ ಶಾಯಿ ಮತ್ತು ಮದುವೆ ಉಪನಯನಾದಿಗಳಿಗೆ
ಬೇಕಾದ ಸುಗಂಧ ದ್ರವ್ಯ ಉಡುಗೆರೆ ವಗೈರೆಗಳು ಮತ್ತು
ಪ್ರಿಂಟಿಂಗ್ ಕಾಗದಗಳು ನಮ್ಮಲ್ಲಿ ಸುಲಭ
ದರದಲ್ಲಿ ಸಿಗುವುವು.

**For all kinds of School and College requisites, Books, Stationary Articles, Printing inks, and students everyday requisites:-**

## U. R. SHENOY & SONS,

*Car-Street, Mangalore,* **Branch at Kodialbail.**

***BINDING IS OUR SPECIALITY.***

# BEST——CHEAP——AND RELIABLE.

Our 'M' Brand **PURE MUSK**, packed in 1/96th TOLA bottles, price Rs. 4—8—0 per dozen (F. O. R. any station) is a boon to humanity and can be used in all cases of emergency. Highly appreciated and recommended by Doctors, Hakims & Vaids.

Our 'M' Brand **KASTURI PILLS** packed in bottles containing 300 Pills costing annas three (F. O. R. any station) is the best tonic of the day and is highly recommended in cases of impotency, nervous debility and all other diseases of heart weakness.

Our **KRISHANA BRAND HINGOO** packed in 3 tola packets costing 1-14-0 per dozen (F. O. R. any station) is best, fragrant for daily uses. Highly recommended by all who use it.

We also supply best Musk, Saffron, Silver and Gold leaves, Pachakarpur, Goulochin etc. Best Crystal SHILAJIT recommended by all Vaids, Doctors and guaranteed to be pure and best by all who have once used it, packed in beautiful packets of tola one each costing 0—8—0 per bottle F. O. R.

**ALL OTHER MEDICINAL ARTICLES AND JODI BATHIS CAN ALSO BE HAD. ONCE TRIED ALWAYS PATRONISED.**

***PLEASE ORDER ONCE AND OBLIGE.***

## S. D. METHA & CO., *(REGISTERED)*

**Purani Kanak Mandi, AMRITSAR.**

# ನಾನು ಕಂಡ ಭೂತ!

ಒಂದು ಹುಚ್ಚು ಹರಟೆ.

ಲೇಖಕ: ಶ್ರೀ. ಡಿ. ಸಿ. ಸಿಂಗ್, ಧರ್ಮಸ್ಥಳ.

ಕೆಲವು ವರ್ಷಗಳ ಹಿಂದಿನ ಮಾತು. ನನ್ನ ತವರೂರು ಮಲೆಜ್ವರದ ತವರೂರಾದುದರಿಂದ ಬಂದ ಜ್ವರ ಹಾಗೆಯೇ ನಿಂತು ಮನೆಮಾಡಿಕೊಂಡುಬಿಟ್ಟಿತು. ಅನೇಕ ವೈದ್ಯರ ಚಿಕಿತ್ಸೆಯಾಯಿತು. ಏನೇನೂ ಗುಣಾಂಶವಿಲ್ಲ. ಆದರಲ್ಲಿಯೇ ಕೆಮ್ಮು. ಜಿಗಟಾದ ಕಫ ಬೀಳುವುದು. ಕಂದು ಬಣ್ಣದ ಆ ಕಫಕ್ಕೆ ಕೆಟ್ಟ ವಾಸನೆ. ಎದೆ ನೋವು. ಕೆಮ್ಮುವಾಗಂತೂ, ತಡೆಯಲಾರದಷ್ಟು ವೇದನೆ, ಹೀಗೆ ಕೆಲವು ದಿನಗಳು ಕಳೆದವು. ಅಮಾವಾಸ್ಯೆಯ ದಿನ ಮಧ್ಯಾಹ್ನ ಸ್ವಲ್ಪ ಗುಣಮುಖವಾದಂತಾಯಿತು. ಗುಣವಾದ ಹತ್ತು ದಿವಸಗಳಲ್ಲಿಯೇ, ಒಂದು ಭಯಂಕರವಾದ ವಿಚಿತ್ರ ಸಂಗತಿಯು ನನ್ನ ತವರೂರಲ್ಲಿಯೇ ಜರಗಿತು. ಅಂತೂ ವಿಚಿತ್ರ ಸಂಗತಿಯು ಜರಗಬೇಕಾದುದರ ಮೊದಲು ನನ್ನ ವಿಷಯವನ್ನು ವಾಚಕ ಮಹಾಶಯರಿಗೆ ತಿಳಿಸಬೇಕಾದುದು ನನ್ನ ಕರ್ತವ್ಯ. ಆದರೆ, ಈಗಿನ ಪರಿಸ್ಥಿತಿಯು ಮಾತ್ರ ಇದಕ್ಕೆ ಪೂರಾ ವಿರುದ್ಧವಾಯಿತು. ಬುದ್ಧಿಶಾಲಿಗಳಾದ ಕತೆಗಾರರ ಕತೆಗಳೇ ಪತ್ರಿಕೆಯಲ್ಲಿ ತುಂಬಿಹೋಗಿವೆ. ಎಂದ ಮೇಲೆ ನನ್ನ ಕತೆಯನ್ನು ಕೇಳ ತಕ್ಕವರಾರು? ಓದತಕ್ಕವರಾರು? ಸಾಲುದುದಕ್ಕೆ ಮತ್ತೊಂದು ಕತೆಯ ಶಿರೋನಾಮವೇ ಇದರ ಬೆನ್ನ ಹಿಂದೆ ಎಂದು ಭಾವಿಸಿದುದು ತೀರಾ ನನ್ನ ಹುಚ್ಚುತನ. ಇವೆಲ್ಲಾ ತಿಳಿಸಬೇಕೆಂಬುದರಿಂದ ನನ್ನ ಹೃದಯುವು ದುರ್ಬಲವಾಯಿತು. ಕಲ್ಪನಾಶಕ್ತಿಯು ಲೋಪವಾಯಿತು. ಚಿಕ್ಕ ಚಿಕ್ಕ ಮಾತುಗಳ ಗಂಡಾಂತರಗಳೆಲ್ಲಾ ದೊಡ್ಡ ದೊಡ್ಡ ಬೆಟ್ಟಗಳಂತೆ ಕಿವಿಯ ಮುಂದೆ ಉರುಳತೊಡಗಿದುವು. ಇದರಿಂದಾಗಿ ತಲೆಯು ಮತ್ತಷ್ಟು ಕೆಟ್ಟಿತು. ಬರೆಯುವಿಕೆಯ ಕಡೆಗೆ ತಿಲಾಂಜಲಿಯನ್ನಿತ್ತು ಕತೆಯನ್ನು ಹೇಳಿ ಪೂರೈಸುವುದೇ ಉತ್ತಮವೆಂದು ನಿರ್ಣಯಿಸಿ ಕತೆಯನ್ನು ಎತ್ತಿದೆ.

ನನ್ನ ಕಾಯಿಲೆಯು ಗುಣಮುಖವಾದ ಅಮಾವಾಸ್ಯೆಯ ದಿನ ನನ್ನ ಮಿತ್ರ ಸಣ್ಣಣ್ಣನು ತನ್ನ ಮನೆಗೆ ಊಟಕ್ಕೆ ಬರಬೇಕೆಂದು ಕೆಲವು ದಿವಸಗಳ ಮುಂಚಿಯೇ ಆಮಂತ್ರಿಸಿದ್ದಲ್ಲದೆ, ಅಂದು ಒತ್ತಾಯದಿಂದ ಕರೆದುಕೊಂಡೇ ಹೋದನು. ಅಂದಿನ ಮಿತ್ರನ ಮನೆಯ ಊಟವೆಂದರೆ, ಊಟವೇ ಪರಮಾತ್ಮ! ಹೊಟ್ಟೆ ಹೊರುವುದೇ ತೀರಾ ಕಷ್ಟವಾಯಿತು. ಮೊದಲೇ ನನ್ನ ಹೊಟ್ಟೆಯು ಸ್ವಲ್ಪ ಗಾತ್ರವೆಂದರೆ, ಸುಳ್ಳಾಗದು. ಅಂದ ಮೇಲೆ ಊಟದ ನಂತರದ ಸಂಗತಿ ಹೇಳಬೇಕೆ? ಅಂತೂ ಇಂತೂ ಆ ದಿನ ನನ್ನನ್ನು ಕಂಡವರೆಲ್ಲಾ ನನ್ನ ಹೊಟ್ಟೆಯನ್ನೂ, ನನ್ನ ಪಜೀತಿಯನ್ನೂ ನೋಡಿದ ಕೂಡಲೇ ಹೆದರುವುದೇ ಹೆಚ್ಚಲ್ಲದೆ, ಹೆದರದೆ ಇರುವುದು ಬಹಳ ಅಪರೂಪ.

ಅಂದಿನ ಮಿತ್ರನ ಮನೆಯ ಊಟ ಮುಗಿಸಿ ಬೇಗನೇ ಮನೆಗೆ ಬಂದು ನನ್ನ ರೂಮಿನ ಬಾಗಿಲನ್ನು ತೆರೆದು ರೂಮಿನೊಳಗಿದ್ದ ಆರಾಮ ಕುರ್ಚಿಯ ಮೇಲೆ ನನ್ನ ದೇಹವನ್ನೂ, ಹೊಟ್ಟೆಯನ್ನೂ, ಚೆಲ್ಲಿ ''ಬುಸ್--ಬುಸ್'' ಎಂದು ನಾಗರ ಹಾವು ಬುಸುಗುಟ್ಟದಂತೆ ಬುಸುಗುಟ್ಟಲು ಶುರುಮಾಡಿದ್ದೇ ತಡ, ಬಾಗಿಲ ಪಕ್ಕದಲ್ಲಿ ಕುಳಿತಿದ್ದ ನನ್ನ ಅಜ್ಜಿಯು ಆ ವಿಚಿತ್ರಕರದ ನನ್ನ ಸದ್ದನ್ನು ಕೇಳಿ ಹೆದರಿಕೊಂಡು ಬಹಳ ಆತುರತೆಯಿಂದ ಒಳಕ್ಕೆ ಬಂದು 'ಗುಂಡು ಗುಂಡೂ' ಏನಾಯ್ತೋ ಮಗೂ ನಿನಗೆ, ಅಂತ ಗಾಬರಿಯಿಂದ ಕೇಳಲು ಶುರುಮಾಡಿದರು. ಆಗ ನನಗೆ ಮಾತಾಡೋಣ ಅಂದ್ರೆ ಸಾಧ್ಯವೇ ಯಿಲ್ಲದಂತಾಯಿತು ಮತ್ತೂ ಮತ್ತೂ ಮಾತಾಡಿಸಿದರು. ಮೈಯನ್ನು ಹಿಡಿದು ಅಲುಗಾಡಿಸಿದರು. ನಾನು ಏಳಲೂ ಇಲ್ಲ. ಮಾತಾಡಲೂ ಇಲ್ಲ ಈ ನನ್ನ ಅವಸ್ಥೆಯನ್ನು ಕಂಡು ಅಜ್ಜಿಯು ಬೊಬ್ಬಿಡುತ್ತಾ ಅಡಿಗೆ ಮನೆಗೋಡಿ ಸೊಸೆಯನ್ನು ಕರೆತರಲು ಹೋದರು. ಅಷ್ಟರಲ್ಲಿ ಕೊಂಚ ಗುಣಮುಖವು ಕಂಡು ಬಂದು ನನ್ನ ಮನಸ್ಸೇ ನನ್ನನ್ನು ಚುಚ್ಚತೊಡಗಿತು. ಮಿತ್ರನ ಮನೆಯ ಭೋಜನವನ್ನು ಅಷ್ಟೇಕೆ ಭುಂಜಿಸಿದೆ? ಕೊನೆಗೆ ಆಕಸ್ಮಾತ್ತಾಗಿ ಜರಗಿದ ಕಾಯಿಲೆ ಮನುಷ್ಯನಂತೆ ಹಾಗೇಕೆ ಬುಸುಗುಟ್ಟಿದೆ? ಇನ್ನು ಅಜ್ಜಿಯು ಪಾಪ ಎಷ್ಟು ಹೆದರಿಕೊಳ್ಳುವರೋ! ಎಂಬೀ ಯೋಚನೆಗೆ ಮೊದಲಾಯಿತು. ಅತ್ತೆ ಅತ್ತೆಯ ದುಃಖ ಎಷ್ಟಿರಬಹುದೋ ಪಾಪ! ಇವೆಲ್ಲಾ ತಿಳಿದು ಮನಸ್ಸನ್ನು ಕಲ್ಲು ಮಾಡಿ ಇನ್ನೂ ಇಲ್ಲಿ ಇದ್ದರೆ ನನ್ನ ಅಂತರಂಗವೆಲ್ಲಾ ಬಹಿರಂಗವಾಗಿ ತುಂಬಾ ಪಜೀತಿಯೆಂದು ಅಲ್ಲಿಂದ ಹೊ

ರಟು ಮಿತ್ರನನ್ನು ಕೂಡಿಕೊಂಡು ನೆಪದಿಂದ ವಿರಾಮಕ್ಕಾಗಿ ಹೊರಟೆ. ಮನೆಯ ಸಂಗತಿ ನಂತರ ನನಗರಿಯದು.

ಆಗ ದಿನಕರನು ಅಂತಿಮಕಾಲಕ್ಕೆ ಸರಿಯಾಗಿದ್ದನು. ಅಂದರೆ ಸುಮಾರು ಆರುವರೆ ಘಂಟೆ ಸಮಯವಾಗಬಹುದು. ಆ ಸಮಯದ ನಂತರ ಇತ್ತ ಕಡೆ ಒಬ್ಬ ವ್ಯಕ್ತಿಯ ಸಂಚಾರವೂ ಬಹಳ ಅಪರೂಪ. ಅಲ್ಲದುದಕ್ಕೆ ಈ ಕಡೆಯಲ್ಲಿ ಏನೋ ಕಠಿನ ವಾರಗಳಲ್ಲಂತೆ, ಅದಾವುದೋ ನಾನರಿಯೆ, ಭೂತಸಂಚಾರವಂತೆ, ಪ್ರೇತಸಂಚಾರವಂತೆ, ಬಾಕಿ ಉಳಿದ ವಾರಗಳಿಗಿಂತಲೂ ಹೆಚ್ಚಿಗೆಯಂತೆ ರುಂಡವಿಲ್ಲದ ಮುಂಡವು ಕೈಕಾಲುಗಳನ್ನು ಬಡಿದುಕೊಂಡು ಬರುತ್ತದಂತೆ, ರುಂಡವು ನೆಲದ ಮೇಲೆ ಉರುಳಾಡುತ್ತಾ ಹೋಗುವುದಂತೆ, ಆಗ ಯಾರಾದರೂ ದಾರಿಹೋಕರು ಸಿಕ್ಕಿದರೆ, ಅವನ ಗತಿ ಸಂಪೂರ್ಣ ಅಲ್ಲದೆ ಬೇರೇನೂ ಇಲ್ಲವಂತೆ ಎಂಬ ಕಂತೆ ಪುರಾಣವನ್ನು ಕೆಲವು ನಮ್ಮೂರ ಅಜ್ಜಮ್ಮಗಳು ಅಂತರಂಗದಲ್ಲಿ ಹೇಳುವುದನ್ನು ನಾನು ಕಿವಿಯಾರೆ ಕೇಳಿದ್ದೇ ಹೊರತು ಕಣ್ಣಾರೆ ಕಂಡಿಲ್ಲ. ಅಂತೂ ಇಂಥಾ ವಿಷಯಗಳನ್ನು ಕೇಳಿದ ಮಾತ್ರಕ್ಕೆ ನನ್ನ ಜೀವವು ತಳಮಳಗೊಳ್ಳುವುದಲ್ಲದೆ ಮನೆಕದಲಿದರೂ ನಾನು ಕದಲದಂಥಾ ಮನುಷ್ಯ. ಈ ವಿಷಯವೆಲ್ಲಾ ತಿಳಿದ ನಾನು ಅಂದು ಏನೋ ಮನಸ್ಸಿನಲ್ಲಿ ಅದಾವುದೊ ಒಂದು ಅಂತರಂಗದ ವಿಷಯವು ಉಂಟಾಗಿ ನಮ್ಮನ್ನತ್ತ ಕಡೆ ಎಳೆದುಕೊಂಡು ಹೋಯಿತಲ್ಲದೆ ನಾವಾಗಿ ಹೋದೆವು ಎಂದರೆ ಬಹಳ ಆಶ್ಚರ್ಯಪಡಬಹುದು. ಆದರೆ ಹೊರಟದ್ದೇನೊ ಸರಿ. ಅದಕ್ಕೆ ತಕ್ಕುದಾದ ಫಲವನ್ನು ಕೊನೆಯ ತನಕವೂ ಅನುಭವಿಸಲಿಕ್ಕಿದೆ ಎಂದು ಧೈರ್ಯದಿಂದ ಹೇಳುವ ಮನುಷ್ಯನು ನಾನಲ್ಲ.

ಇಷ್ಟರಲ್ಲಿ ದಿನಕರನು ಸಂಪೂರ್ಣ ವಿಶ್ರಾಂತಿ ಪಡೆದನು. ಕೆಲಸ ಮಾಡಿ ಜೀವಿಸುವ ಸುತ್ತು ಮುತ್ತಲಿನ ಕೂಲಿಕಾರರು ತಮ್ಮ ತಮ್ಮ ಮನೆಯನ್ನು ಮೊದಲೇ ಸೇರಿಕೊಂಡಿದ್ದರು. ಪಕ್ಷಿಗಳೆಲ್ಲಾ ತಮ್ಮ ತಮ್ಮ ಬಿಡಾರವನ್ನು ಸೇರುತ್ತಲಿದ್ದುವು. ಕತ್ತಲೆಯು ಚೆನ್ನಗಾಯಿತು. ಮಿತ್ರನು "ಹೋಗೋಣ ಕತ್ತಲಾಯಿತು" ಎಂದ. 'ಇನ್ನೂ ಸ್ವಲ್ಪ ಮುಂದರಿಸೋಣ. ನನ್ನ ಹತ್ತಿರ ಬೆಳಕಿಗೋಸ್ಕರ ಬೆಟ್ರಿಲೈಟ್ ಇದೆ' ಎಂದೆ ನಾನು. ಸುಖದ ಕನಸು ಅಷ್ಟರಲ್ಲೇ ಹರಿದು ಮನಸ್ಸಿನಲ್ಲಿ ಆತುರತೆ- ಹೆಚ್ಚತೊಡಗಿತು. ಪುನಃ ಹತ್ತಿರದಲ್ಲೇ ಸದ್ದಾದಂತಾಯಿತು! ಮರಗಳೆಲ್ಲವೂ ಅಲುಗಾಡಲು ಪ್ರಾರಂಭವಾಯಿತು! ಹಿಂಗಡೆಯಿಂದ ಕಲ್ಲುಗಳು ಕಾಲ್ಬುಡಕ್ಕೆ ಬಿದ್ದವು. ಕಾಲ್ಬುಡಕ್ಕೇನು ಮೈಮೇಲೂ ಒಂದೆರಡು ಬಿದ್ದಿರಲೂ ಬಹುದು! ಕೂಡಲೇ ನನಗಲ್ಲಿಯ ವಿಷಯಗಳೆಲ್ಲವು ಜ್ಞಾಪಕಕ್ಕೆ ಬಂದುವು. ನಾನೇನೋ ಸ್ವಲ್ಪ ಮಟ್ಟಿಗೆ ಅಧೈರ್ಯವಂತನೆಂದು ಧೈರ್ಯದಿಂದ ಹೇಳಬಲ್ಲೆ. ಆದರೆ, ಸಾಲದುದಕ್ಕೆ ಮತ್ತೊಂದು ಜೀವ ನನ್ನ ಬೆನ್ನಹಿಂದೆ. ಎಂತಾದರೂ ಕಷ್ಟಪಟ್ಟು ನನ್ನದೊಂದು ಜೀವವನ್ನು ಉಳಿಸಿಕೊಂಡೆನೆಂದರೆ, ಮತ್ತೊಂದರ ಗತಿ? ಅಯ್ಯೋ! ಅಂತರಂಗದ ವಿಷಯವು ನನ್ನನ್ನೇಕೆ ಹುಚ್ಚು ಹಿಡಿಸಿತೋ! ಪುನಃ ಮುಂಗಡೆಯಿಂದ ಚಪ್ಪಳ ಹಾಕಿಕೊಂಡು ಬಂದಂತ ಸದ್ದಾಯಿತು ಆಗ ಧೈರ್ಯದಿಂದ "ಯಾರೋ ಬರುತ್ತಿರುವರು. ಧೈರ್ಯಕ್ಕೆ ನಮಗಿಬ್ಬರಿಗೆ ಮತ್ತೊಬ್ಬರನ್ನು ದೇವರು ಒದಗಿಸಿಕೊಟ್ಟನು!" ಎಂದು ತಿಳಿದು ಲೈಟ್ ಮಾಡಿದೆ. ಅದಕ್ಕೇನು ದಾಡಿಬಡಿಯಿತೋ? ಅದು ಕೂಡಾ ಹೆದರಿಕೊಂಡು ಸಮ್ಮನಿದೆಯೇ? ಇಲ್ಲ. ಏಕಾದಶಿ ವ್ರತವನ್ನು ಕೈಕೊಂಡಿರುವುದೇ? ಯಾರಿಗೆ ಗೊತ್ತು? ಪ್ರತಿ ರಾತ್ರಿ ಒಂದಲ್ಲ ಒಂದು ಕಡೆಯಿಂದ ಕೇಳಿ ಬರುವ ಅಸ್ಪೃಶ್ಯರ ದುಡಿಯ ನಾದವೂ ಇಂದು ಪೂರ್ಣ ಅಡಗಿಬಿಟ್ಟಿದೆ. ಅಪರಾತ್ರಿಯನ್ನು ಅಣಕಿಸಿ ಕೂಗುವ ಗೂಬೆಯ ಧ್ವನಿಯೂ ಕೇಳಿಸದಾಗಿದೆ. ಏನಿಲ್ಲ!-

ನನಗರಿಯದು, ನಿಮಗೆ-



ಹರತಾಳವನ್ನು
ಬಾರಿಸಲಾಗುತ್ತದೆಯೋ?

ಆಗ ನಮ್ಮ ಹೆಜ್ಜೆಗಳ ಬುಡದಲ್ಲಿ ಅಲ್ಪ ಪ್ರಾಣಿಗಳಿದ್ದರೂ, ಸಾಯಲಿಕ್ಕಿಲ್ಲ. ಅಂಥ ವಿಚಿತ್ರ ತರದ ಹೆಜ್ಜೆಯನ್ನಿಡಲು ಪ್ರಾರಂಭಿಸಿದ ಹಾಗಾಯಿತು. ಇಷ್ಟೆಲ್ಲ ನಿರುತ್ಸಾಹಕ ಚಿಹ್ನೆಗಳನ್ನೂ, ಜಡತೆಯನ್ನೂ, ನೀವು ಕಂಡ ಮೇಲೆ ಅತ್ತ ಹೋದರೇನು? ಇದ್ದರೇನು? ಅನಿಸಬಹುದು. ಅದಕ್ಕೆ ಇರಬಹುದು. ಅದನ್ನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಈಗ ನನ್ನ ಮೆದುಳಿನ ಅವಸ್ಥೆ ಹೇಗಿದೆ ಎಂದು ನನಗೆ ತಿಳಿದಿದೆಯೋ? ಆತ್ಮನ ವಿಷಯವೇನಾಗಬಹುದು ನೀವೇ ತಿಳಿಯಿರಿ. ಮನಸ್ಸಿನಲ್ಲಿ ಪರಮಾತ್ಮನನ್ನು ಪ್ರಾರ್ಥಿಸಬೇಕೆಂದು ತಿಳಿದರೆ, ತುಟಿಗಳು ಅವನನ್ನು ಉಚ್ಚರಿಸಲಾರವು. ಅಥವಾ ಹೃದಯದಲ್ಲಿ ಭಗವಂತನ ಚರಣಕ್ಕಾದರೂ, ಅಲ್ಲಿಂದಲೆ ಕೈಜೋಡಿಸಬೇಕೆಂದರೆ, ಅದೇ ಕೈಗಳು ಆ ಪರಮಾತ್ಮನ ಸೌಮ್ಯಮೂರ್ತಿಯನ್ನು ವಿಕೃತಗೊಳಿಸಲೆತ್ನಿಸುವುವು. ಅಂತೂ ಇಂತು ಮನಸ್ಸಿನಲ್ಲಾದರೂ ದೇವರ ದಿವ್ಯಮೂರ್ತಿಯನ್ನು ಕಣ್ಣ ಮುಂದೆ ಪ್ರತಿಷ್ಠಿಸಿ ಸ್ವಲ್ಪ ಸಮಯದ ತನಕ ನಿಂತಲ್ಲಿಯೇ ಪ್ರಾರ್ಥಿಸಿದೆ. ಆದರೆ, ಆಗ ನನಗೆ ಯಾವುದೊಂದು ಮೊದಲು ಉಂಟಾದ ಸದ್ದಾಗಲೀ, ಅಥವಾ ವ್ಯಕ್ತಿಯಾಗಲೀ ಕಾಣಲೂ ಇಲ್ಲ; ಕೇಳಿಸಲೂ ಇಲ್ಲ. ಅಂತೂ, "ಹಾಳಾಗುವ ಕಾಲಕ್ಕೆ ಬುದ್ಧಿಯಿಲ್ಲ. ಸಾಯುವ ಕಾಲಕ್ಕೆ ಮದ್ದಿಲ್ಲ" ಎಂಬಂತೆ ಕೂಡಲೇ ಧೈರ್ಯವಂತನಾದೆನೆಂದು ತಿಳಿದು ನನ್ನ ಮನಸ್ಸೆಂಬುದು ಚಂಚಲವಾಗಿ ದೇವರ ನಾಮೋಚ್ಚಾರಣೆಯೂ, ಪರಮಾತ್ಮನ ದಿವ್ಯ ಮೂರ್ತಿಯೂ ಅಡಿಗೆ ಬಿದ್ದಂತೆಯೇ ಸರಿ.

ಸ್ವಲ್ಪ ಸಮಯದ ನಂತರ ಪುನಃ ಒಂದು ಅದ್ಭುತನಾದ ಧ್ವನಿಯು ಕೇಳಿಸಿತು. ನನಗಂತೂ, ಪೂರಾ ನಡುಗಾಟವು ಶುರುವಾಯಿತು. ಮುಂಗಡೆಯಿಂದ ಬಿಳೀ ಮುಸುಕಿನ ವ್ಯಕ್ತಿಯು ಕ್ಷಣ ಕ್ಷಣಕ್ಕೂ ದೊಡ್ಡದಾಗುತ್ತಾ ನಮ್ಮ ಹತ್ತಿರ ಹತ್ತಿರ ಬಂದ ಹಾಗೆ ಕಾಣಿಸಿತು. ಆಗ ನಾನು ಮಿತ್ರನ ಮುಂದೆ ಧೈರ್ಯವಂತನಂತೆ ನಟಿಸುತಿದ್ದೆ. ಆದರೆ, ಮಿತ್ರ ಸಣ್ಣಣ್ಣ ಪೂರಾ ಅಧೈರ್ಯವಂತನಾದುದಲ್ಲದೆ ಸ್ಮೃತಿ ತಪ್ಪಿ ಕೆಳಕ್ಕೆ ಧೊಪ್ಪನೆ ಬಿದ್ದು ಬಿಟ್ಟನು. ನನಗಂತೂ ಅಲ್ಪಸ್ವಲ್ಪವಿದ್ದ ಧೈರ್ಯವೆಲ್ಲವೂ ಹೋಗಿ ದೊಡ್ಡ ಪಜೀತಿಯಲ್ಲಿ ಬಿದ್ದುದಲ್ಲದೆ ಮಿತ್ರನನ್ನು ಕಾಲುಗಳಿಂದ ಘಟ್ಟಿಯಾಗಿ ಹಿಡಕೊಂಡು ಪುನಃ ದೇವರ ನಾಮೋಚ್ಚಾರಣೆಯನ್ನು ಉಚ್ಚರಿಸತೊಡಗಿದೆ. ಅಂತೂ ನಾಲಗೆಯು ಚೆನ್ನಾಗಿ ಮಗುಚಲೊಲ್ಲದು. ಸಾಧಾರಣ ಅರ್ಧ ಘಂಟೆಯಲ್ಲಿ ಮಾಯವಾಗತಕ್ಕ ಆ ಬಿಳೀ ಮುಸುಕಿನ ವ್ಯಕ್ತಿಯು ಒಂದು ಘಂಟೆಯ ಸಮಯದ ನಂತರ ಸಣ್ಣ ಸಣ್ಣದಾಗುತ್ತಾ ಮಾಯವಾಯಿತು . . . . . .

**FOR SALE**

**5 Shares of**
**The Canara Banking Corporation Udipi Ltd.**
**ARE FOR SALE**
***Write for further particulars:***

**B. VASUDEVA RAO.**
B. A., B. L., Advocate,
**UDIPI.**

**ಶಾಂತಿ ಸಂಗ್ರಹಾಲಯ**

**ತ್ವರೆ ಮಾಡಿರಿ! ● ಒಮ್ಮೆ ಸಂದರ್ಶಿಸಿರಿ!!**

**ಜೀವಮಾನದೊಳಗಾದರೂ ಕುರಾಡಿ ಶಾಂತಿನಿಕೇತನ**

**ಶಾಲೆಯ ವಸ್ತುಸಂಗ್ರಹಾಲಯುವನ್ನು ಒಮ್ಮೆ**

**ಸಂದರ್ಶಿಸಿ ಜೀವನದ ದೃಷ್ಟಿಸಂಪತ್ತನ್ನು ಪಡೆಯಿರಿ.**

श्री प्रसाद

**SRI PRASADA**

ಶ್ರೀ ಪ್ರಸಾದ

ಮುಖತಃ ಭೇಟಿಯನ್ನು ಇಟ್ಟುಕೊಳ್ಳಲಾಗುವುದಿಲ್ಲ.

ಸಮಗ್ರ ಭಾರತದಲ್ಲಿ ಅನೇಕ ವರ್ಷಗಳಿಂದ ಸಂಚರಿಸುತ್ತಲಿರುವ ಮಂತ್ರವಿದ್ಯೆಯಲ್ಲಿ ಪಾರಂಗತರಾದ ತನ್ನ ಮಂತ್ರಶಕ್ತಿಯಿಂದ ಅನೇಕ ಜನರಿಗೆ ಪ್ರಯೋಜನವನ್ನುಂಟು ಮಾಡಿದ ಯೋಗಿ ಮಹಾಶಯರೊಬ್ಬರ

# ಮಹಾಮಂತ್ರಶಕ್ತಿಯ ಪ್ರಸಾದ

ಈ ಪ್ರಸಾದಗಳ ಸೇವನೆಯಿಂದಲೂ, ಧಾರಣೆಯಿಂದಲೂ, ಪ್ರಯೋಗದಿಂದಲೂ ಅನೇಕರು ಅನೇಕ ವಿಧಗಳಿಂದ ಪ್ರಯೋಜನವನ್ನು ಹೊಂದಿರುವರು.

*Personal interviews are prohibited*

**ಈ ಪ್ರಸಾದದಿಂದ**

ಪರೀಕ್ಷೆಯಲ್ಲಿ ಪಾಸಾಗುವದು, ಶತ್ರುಗಳನ್ನು ಸ್ವಾಧೀನಪಡಿಸುವದು, ವ್ಯಾಪಾರದಲ್ಲಿ ಅಭಿವೃದ್ಧಿ ಹೊಂದುವದು, ಮುಂತಾದ ಯಾವತ್ತು ಅಭೀಷ್ಟಗಳನ್ನು ಸಾಧಿಸಬಹುದು.

**ಒಂದು ತಿಂಗಳು ಉಪಯೋಗಿಸುವ ಪ್ರಸಾದಕ್ಕೆ ರೂಪಾಯಿ ಒಂದು.**

**ವಿಶೇಷತರದ ಪ್ರಸಾದಕ್ಕೆ ರೂಪಾಯಿ ಐದು.**

ಪ್ರಸಾದ ಬೇಕಾದವರು— ತಮ್ಮ ನಕ್ಷತ್ರ, ಯಾ ಜನನ ಸಮಯವನ್ನೂ ತಾರೀಕನ್ನೂ ತಿಳಿಸಬೇಕು. ಅದು ಗೊತ್ತಿಲ್ಲದಿದ್ದರೆ ಕಾಗದ ಬರೆಯುವ ಸ್ಥಳ, ಸಮಯಗಳನ್ನೂ ನಿರ್ದೇಶಿಸಬೇಕು.

**ಪತ್ರವ್ಯವಹಾರ:—ಇಂಗ್ಲಿಷ್, ಸಂಸ್ಕೃತ, ಯಾ ಕನ್ನಡ ಭಾಷೆಯಲ್ಲಿ ಮಾಡಬಹುದು.**

**ಎಲ್ಲ ಪತ್ರಗಳು ಗುಪ್ತವಾಗಿರಿಸಲಾಗುತ್ತವೆ.**

**C. C. No. 4.**
***C/o.* ANTARANGA.**
**UDIPI.**

Printed and published by P. Venkataramanacharya for and on behalf of SUPPLY AGENCY LTD. at Manipal Power Press, Udipi.

# The Canara Industrial & Banking Syndicate, Ltd.

ESTD: (INCORPORATED IN BRITISH INDIA) 1925

HEAD OFFICE:
"MUKUND NIVAS"
UDIPI, (S. INDIA).

MEMBER:
RESERVE BANK OF INDIA
BANKERS' CLEARING HOUSE, BOMBAY.

*AN ADDITIONAL BRANCH OF THE SYNDICATE HAS BEEN OPENED IN MANGALORE AT 'FELIX PAI BAZAAR (BLOCK NO. 1) ON THE 31ST OF JULY 1938.*

| | |
|---|---|
| Authorised Capital | Rs. 10,00,000 |
| Issued Capital | ,, 8,00,000 |
| Subscribed Capital | ,, 7,74,500 |
| Paid-up Capital | ,, 3,87,730 |
| Reserves | ,, 2,16,700 |

**Total Resources exceed Rs. 51 Lakhs.**

# UNIQUE OPPORTUNITY FOR INVESTORS

The Directors of the Canara Land Investments Ltd. in their meeting on 21-8-'38 resolved to issue the entire shares. They feel that this is the proper time to invest upon the Lands.

Share Value Rs. 10/-
Entrance fee Re. 1/-
Premium As. 8/-
Total Rs. 11-8-0 per share

*Intending Buyers of Shares may Apply to:*

**BROKERAGE DEPARTMENT**

**SUPPLY AGENCY LIMITED**

**UDIPI**

**This page is available for Advertisement. Rate Rs. 20/- per insertion.**